
ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 16 | ಸಂಚಿಕೆ 13 | ಮಾರ್ಚ್ 21-27, 2022 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com




ಸರಕಾರಗಳ ವಚನ ಭ್ರಷ್ಟತೆ



ಜನ ಪರ್ಯಾಯ ಬಜೆಟ್

ಹಿಜಾಬ್ ತೀರ್ಪು



ತಪ್ಪು ಪ್ರಶ್ನೆಗಳು ತಪ್ಪಾದ ಉತ್ತರಗಳು

ಪಂಚ ರಾಜ್ಯಗಳ ಫಲಿತಾಂಶ: ಹೇಳುತ್ತಿರುವುದೇನು?







ಅದುಮಿಡಲಾದ ಸತ್ಯಗಳು : 'ಕಾಶ್ಮೀರ ಫೈಲ್ಸ್' ಅಥವಾ 'ಫರ್ಜಾನಿಯಾ'

ಚುನಾವಣೆಗಳು ಮುಗಿಯುತ್ತಿದ್ದಂತೆ ಪಿಎಫ್ ಬಡ್ಡಿ ದರ ಕಡಿತದ ಕ್ರೂರ ನಡೆ ಮತ್ತು ಆರೆಸ್ಸೆಸ್‌ನ ವರದಿ ಬಿಡುಗಡೆಯ ಅನಿಷ್ಟಕಾರೀ ನಡೆಗಳು–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಐದು ವಿಧಾನಸಭಾ ಚುನಾವಣೆಗಳು ಪ್ರಕಟವಾಗಿರುವ ಬೆನ್ನಲ್ಲೇ ನೌಕರರ ಭವಿಷ್ಯ ನಿಧಿಯ ಮೇಲಿನ ಬಡ್ಡಿದರವನ್ನು 8.5% ದಿಂದ 8.1%ಕ್ಕೆ ಇಳಿಸುವ ಮತ್ತು ಅಲ್ಪಸಂಖ್ಯಾತ ಸಮುದಾಯದ ಮೇಲೆ ಗುರಿಯಿಡುವ ಆರೆಸ್ಸೆಸ್‌ನ ವಾರ್ಷಿಕ ವರದಿ ಬಿಡುಗಡೆ ಮಾಡಲಾಗಿದೆ. ಮೊದಲನೆಯದ್ದು ಒಂದು ಕ್ರೂರ ನಡೆಯಾದರೆ, ಎರಡನೆಯದ್ದು ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಅನಿಷ್ಟಕಾರಿಯಾದ ನಡೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವರ್ಣಿಸಿದೆ.

ಮಾರ್ಚ್ 12–13ರ ಪೊಲಿಟ್ ಬ್ಯುರೊ ಸಭೆಯ ನಂತರ ಪ್ರಕಟಿಸಿರುವ ಹೇಳಿಕೆಯಲ್ಲಿ ಅದು ಹೀಗೆ ಹೇಳಿದೆ. ಹೇಳಿಕೆಯ ಇತರ ಅಂಶಗಳನ್ನು ಈ ಮುಂದೆ ಕೊಡಲಾಗಿದೆ:

ಇತ್ತೀಚಿನ ವಿಧಾನಸಭೆ ಚುನಾವಣೆಗಳು

ಬಿಜೆಪಿಯು ತಾನು ಅಧಿಕಾರದಲ್ಲಿದ್ದ––ಎಲ್ಲ ರಾಜ್ಯಗಳಲ್ಲಿ ಉತ್ತರ ಪ್ರದೇಶ, ಉತ್ತರಾಖಂಡ, ಗೋವಾ ಮತ್ತು ಮಣಿಪುರದಲ್ಲಿ– ಮತ್ತೊಮ್ಮೆ ಸರ್ಕಾರ ರಚಿಸಲು ಆಯ್ಕೆಯಾಗಿದೆ. ಉತ್ತರ ಪ್ರದೇಶದಲ್ಲಿ ಕೋಮು ಧ್ರುವೀಕರಣವನ್ನು ತೀವ್ರಗೊಳಿಸಿ, ಮಾಧ್ಯಮದ ದೊಡ್ಡ ವಿಭಾಗಗಳ ಮೇಲಿನ ನಿಯಂತ್ರಣ ಮತ್ತು ಅಪಾರ ಹಣಬಲದಿಂದ ಬಿಜೆಪಿ ಸರ್ಕಾರವನ್ನು ಉಳಿಸಿಕೊಂಡಿದೆ. ಆದರೆ ಅದರ ಬಹುಮತ ಇಳಿದಿದೆ.

ಉತ್ತರಾಖಂಡ, ಗೋವಾ ಮತ್ತು ಮಣಿಪುರ ಚುನಾವಣೆಗಳನ್ನೂ ಬಿಜೆಪಿ ಗೆದ್ದಿದೆ.

ಪಂಜಾಬಿನ ಜನತೆ ಎರಡು ಪಾರಂಪರಿಕ ಪಕ್ಷಗಳಾದ ಕಾಂಗ್ರೆಸ್ ಮತ್ತು ಅಕಾಲಿ ದಳವನ್ನು ತಿರಸ್ಕರಿಸಿ ಆಮ್ ಆದ್ಮಿ ಪಾರ್ಟಿ(ಎಎಪಿ)ಗೆ ಮತ ನೀಡಿದ್ದಾರೆ. ಒಂದು ನಿರ್ಣಾಯಕ ಬದಲಾವಣೆಗೆ ಪಂಜಾಬಿನ ಜನತೆ ಮತ ಹಾಕಿದ್ದು, ಎಎಪಿ ಭರ್ಜರಿ ಜಯ ಪಡೆದಿದೆ.

ಈ ಫಲಿತಾಂಶಗಳು ಬಲಪಂಥೀಯ ರಾಜಕೀಯದ ಪ್ರಾಬಲ್ಯ ಮುಂದುವರಿಯುತ್ತಿರುವುದನ್ನು ತೋರಿಸುತ್ತವೆ. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಜಂಟಿಯಾಗಿ ಹಿಂದುತ್ವ–ಕಾರ್ಪೊರೇಟ್ ಆಳ್ವಿಕೆ, ಅದರ ಧೋರಣೆಗಳು, ಬೆಳೆಯುತ್ತಿರುವ ನಿರಂಕುಶಾಧಿಕಾರದ ಹಾಗೂ ಫ್ಯಾಸಿಸ್ಟ್ ತೆರನ ದಾಳಿಗಳ ವಿರುದ್ಧ ಹೋರಾಟದತಮ್ಮ ಪ್ರಯತ್ನಗಳನ್ನು ದ್ವಿಗುಣಗೊಳಿಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಕರೆ ನೀಡಿದೆ.

ತ್ರಿಪುರಾದಲ್ಲಿ ಸಿಪಿಐ(ಎಂ) ವಿರುದ್ಧ ಬಿಜೆಪಿಯ ಫ್ಯಾಸಿಸ್ಟ್ ತೆರನ ಹಿಂಸಾಚಾರ

ವಿಧಾನಸಭಾ ಚುನಾವಣಾ ಫಲಿತಾಂಶಗಳು ಪ್ರಕಟವಾದ ಕೂಡಲೇ, ತ್ರಿಪುರಾದಲ್ಲಿ ಬಿಜೆಪಿಯು ಸಿಪಿಐ(ಎಂ) ಕಾರ್ಯಕರ್ತರ ವಿರುದ್ಧ ದುಷ್ಟ ಫ್ಯಾಸಿಸ್ಟ್ ತೆರನ ದಾಳಿಗಳನ್ನು ಹರಿಯ ಬಿಟ್ಟಿತು ಮತ್ತು ರಾಜ್ಯಾದ್ಯಂತ ಅನೇಕ ಸಿಪಿಐ(ಎಂ) ಕಚೇರಿಗಳ ಮೇಲೆ ಮನ ಬಂದಂತೆ ದಾಳಿ ನಡೆಸಿತು. ರಾಜ್ಯದಲ್ಲಿ ಈ ಭಯೋತ್ಪಾದನೆಯ ರಾಜಕೀಯವನ್ನು ಹರಿಯ ಬಿಟ್ಟಿರುವುದನ್ನು ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ಬಿಜೆಪಿಯು ಈ ಹಿಂದೆಯೂ ಸಿಪಿಐ(ಎಂ) ವಿರುದ್ಧ ಸತತವಾಗಿ ಇಂತಹ ಭಯೋತ್ಪಾದನೆಯಲ್ಲಿ ತೊಡಗಿತ್ತು. ಆದರೆ ಮತ್ತೊಮ್ಮೆ ಅದು ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರನ್ನು ಬೆದರಿಸುವಲ್ಲಿ ವಿಫಲವಾಗುತ್ತದೆ ಎಂದು ಅದು ಹೇಳಿದೆ.

ಭವಿಷ್ಯ ನಿಧಿ ಬಡ್ಡಿ ದರಗಳ ತೀವ್ರ ಕಡಿತಕ್ಕೆ ಖಂಡನೆ

ಈ ಚುನಾವಣಾ ಫಲಿತಾಂಶಗಳ ನಂತರ ಬಿಜೆಪಿ ಕೇಂದ್ರ ಸರ್ಕಾರವು ನೌಕರರ ಭವಿಷ್ಯ ನಿಧಿ(ಇಪಿಎಫ್) ಬಡ್ಡಿ ದರವನ್ನು ಕಳೆದ ವರ್ಷದ ಶೇಕಡಾ 8.5 ರಿಂದ ಶೇಕಡಾ 8.1 ಕ್ಕೆ ಇಳಿಸುವ ಮೂಲಕ ದುಡಿಯುವ ಜನರ ಮೇಲೆ ಮತ್ತಷ್ಟು ದುಷ್ಟ ದಾಳಿಗಳನ್ನು ನಡೆಸಿದೆ.. ಇದು ಕ್ರೂರತನ, ಏಕೆಂದರೆ, ಹೆಚ್ಚುತ್ತಿರುವ ಉದ್ಯೋಗ ನಷ್ಟಗಳು, ಬೆಲೆ ಏರಿಕೆಯ ನಾಗಾಲೋಟ ಇತ್ಯಾದಿಗಳಿಂದ ಹೆಚ್ಚುತ್ತಿರುವ ಸಂಕಷ್ಟಗಳ ಹಿನ್ನೆಲೆಯಲ್ಲಿ ಇದು ಬಂದಿದೆ.

ಜನರ ಜೀವನೋಪಾಯದ ಮೇಲಿನ ಈ ದಾಳಿಯ ವಿರುದ್ಧ ಪ್ರತಿಭಟನೆಗಳನ್ನು ಆಯೋಜಿಸಲು ಎಲ್ಲಾ ಸಿಪಿಐ(ಎಂ) ಘಟಕಗಳಿಗೆ ಪೊಲಿಟ್ ಬ್ಯೂರೋ ಕರೆ ನೀಡಿದೆ.

ಕೋಮು ಧ್ರುವೀಕರಣ ಮತ್ತಷ್ಟು ತೀಕ್ಷ್ಣ

ಆರೆಸ್ಸೆಸ್, ಈ ವಿಧಾನಸಭಾ ಚುನಾವಣಾ ಫಲಿತಾಂಶಗಳನ್ನು ಘೋಷಿಸಿದ ಕೂಡಲೇ ಬಿಡುಗಡೆ ಮಾಡಿರುವ ತನ್ನ 2022 ರ ವಾರ್ಷಿಕ ವರದಿಯಲ್ಲಿ "ಸಂವಿಧಾನ ಮತ್ತು ಧಾರ್ಮಿಕ ಸ್ವಾತಂತ್ರ್ಯ"ದ ಹೆಸರಿನಲ್ಲಿ ದೇಶದಲ್ಲಿ "ಧಾರ್ಮಿಕ ಮತಾಂಧತೆ ಬೆಳೆಯುತ್ತಿದೆ" ಎಂದು ಆರೋಪಿಸಿ "ಒಂದು ನಿರ್ದಿಷ್ಟ ಸಮುದಾಯವು ಸರ್ಕಾರಿ ಯಂತ್ರವನ್ನು ಪ್ರವೇಶಿಸುವ" ವಿಸ್ತಾರವಾದ ಯೋಜನೆಗಳಿವೆ" ಎಂದು ಸಾರಿದೆ. "ಈ ಪಿಡುಗನ್ನು ಸೋಲಿಸಲು" "ಸಂಘಟಿತ ಶಕ್ತಿಯೊಂದಿಗೆ ಎಲ್ಲಾ ಪ್ರಯತ್ನಗಳು" ನಡೆಯಬೇಕೆಂದು ಆರೆಸ್ಸೆಸ್ ಕರೆ ನೀಡಿದೆ. ಇದು ಅನಿಷ್ಟಕಾರಿ, ಅಲ್ಪ ಸಂಖ್ಯಾತ ಸಮುದಾಯದ ಮೇಲೆ ಗುರಿಯಿಡುವ ಮತ್ತೊಂದು ಕುತಂತ್ರದ ನಡೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಎಲ್ಲಾ ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳು ಕೋಮು ಹಿಂಸಾಚಾರವನ್ನು ತಡೆಗಟ್ಟಲು ಮತ್ತು ಸಾಮಾಜಿಕ ಸಾಮರಸ್ಯವನ್ನು ಕಾಪಾಡಿಕೊಳ್ಳಲಿಕ್ಕೆ ಸಂವಿಧಾನದ ಖಾತರಿಗಳು ಮತ್ತು ಕಾನೂನಿನ ಆಳ್ವಿಕೆಯನ್ನು ಎತ್ತಿ ಹಿಡಿಯಲು ಮುಂದೆ ಬರಬೇಕು ಎಂದು ಪೊಲಿಟ್ ಬ್ಯುರೊ ಕರೆ ನೀಡಿದೆ. ಇದು ಭಾರತದ ಏಕತೆ ಮತ್ತು ಸಮಗ್ರತೆಗೆ ಬಹು ಮುಖ್ಯವಾಗಿದೆ ಎಂದು ಅದು ಹೇಳಿದೆ.

ಪಕ್ಷದ 23ನೇ ಮಹಾಧಿವೇಶನದ ರಾಜಕೀಯ ಸಂಘಟನಾ ವರದಿ

ಮಾರ್ಚ್ 25 ರಿಂದ 27ರ ವರೆಗೆ ನಡೆಯುವ ಪಕ್ಷದ ಕೇಂದ್ರ ಸಮಿತಿಯ ಸಭೆಯ ಪರಿಶೀಲನೆಗೆ ಸಲ್ಲಿಸುವ ರಾಜಕೀಯ ಸಂಘಟನಾ ವರದಿಯನ್ನು ಪೊಲಿಟ್ ಬ್ಯುರೊ ಚರ್ಚಿಸಿತು.

ಸಿಪಿಐ(ಎಂ)ನ 23ನೇ ಮಹಾಧಿವೇಶನ 2022ರ ಏಪ್ರಿಲ್ 6–10 ರವರೆಗೆ ಕೇರಳದ ಕಣ್ಣೂರಿನಲ್ಲಿ ನಡೆಯಲಿದೆ.

ಕರ್ನಾಟಕ ಹೈಕೋರ್ಟ್‌ನ ಒಂದು ದುರದೃಷ್ಟಕರ ತೀರ್ಪು

ತರಗತಿಗಳಲ್ಲಿ ಹಿಜಾಬ್ ಬಳಕೆಯನ್ನು ನಿಷೇಧಿಸುವ ಕರ್ನಾಟಕ ಸರ್ಕಾರದ ಆದೇಶವನ್ನು ಎತ್ತಿ ಹಿಡಿದಿರುವ ಕರ್ನಾಟಕ ಹೈಕೋರ್ಟಿನ ತೀರ್ಪು ತಾರತಮ್ಯವಿಲ್ಲದೆ ಶಿಕ್ಷಣ ಪಡೆಯುವ ಸಾರ್ವತ್ರಿಕ ಹಕ್ಕಿನ ವಿರುದ್ಧದ ಒಂದು ಹೊಡೆತವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಇದು ಕಾನೂನು ಮತ್ತು ಭಾರತದ ಸಂವಿಧಾನ ಖಾತರಿಗೊಳಿಸಿರುವ ಹಕ್ಕು. ಈ ತೀರ್ಪಿಗೆ ಹಲವು ಪ್ರಶ್ನಾರ್ಹ ಆಯಾಮಗಳಿವೆ. ತರಗತಿಗಳಲ್ಲಿ ಹಿಜಾಬ್ ಬಳಕೆಯನ್ನು ನಿಷೇಧಿಸಿಯೇ ಬಿಡುವ ಕರ್ನಾಟಕ ಸರ್ಕಾರದ ದೋಷ ಪೂರ್ಣವೆಂದೇ ಹೇಳಬಹುದಾದ ಆದೇಶವನ್ನು ಎತ್ತಿ ಹಿಡಿದಿರುವುದರ ತಕ್ಷಣದ ಪರಿಣಾಮವೆಂದರೆ, ಇದು ಕರ್ನಾಟಕದಲ್ಲಿ ಶಿಕ್ಷಣ ಸಂಸ್ಥೆಗಳಿಂದ ಮುಸ್ಲಿಂ ಯುವತಿಯರನ್ನು ಹೊರದಬ್ಬುತ್ತದೆ.

ಭಾರತದ ಹಲವು ರಾಜ್ಯಗಳಲ್ಲಿ ಮುಸ್ಲಿಂ ವಿದ್ಯಾರ್ಥಿಗಳು ಧರಿಸುವ ಶಿರವಸ್ತ್ರವನ್ನು ಶಾಲೆಗಳು ಮತ್ತು ಕಾಲೇಜುಗಳಲ್ಲಿ ಎಂದೂ ಸಾಮಾನ್ಯ ಸಮವಸ್ತ್ರದ ನಿಯಮದ ಉಲ್ಲಂಘನೆ ಎಂದು ಪರಿಗಣಿಸಲಾಗಿಲ್ಲ. ಅತ್ಯುತ್ತಮ ಉದಾಹರಣೆಯೆಂದರೆ ನೆರೆಯ ಕೇರಳದಲ್ಲಿ –ಶಾಲೆಗಳಲ್ಲಿ ಮತ್ತು ಉನ್ನತ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಮುಸ್ಲಿಂ ಹುಡುಗಿಯರು ಅತಿ ಹೆಚ್ಚು ಭಾಗವಹಿಸುವ ದಾಖಲೆಯನ್ನು ಹೊಂದಿರುವ ರಾಜ್ಯವದು. ಆದರೆ ಈ ತೀರ್ಪು ಶಾಸಕರ ನೇತೃತ್ವದಲ್ಲಿರುವ ಶಿಕ್ಷಣ ಸಂಸ್ಥೆಗಳಲ್ಲಿನ ಸಮಿತಿಗಳಿಗೆ ಈ ಬಗ್ಗೆ ನಿರ್ಧರಿಸುವ ಹಕ್ಕನ್ನು ನೀಡುತ್ತದೆ. ಕರ್ನಾಟಕದಲ್ಲಿ ಈ ಶಾಸಕರು ತಮ್ಮದೇ ಆದ ಸಂಕುಚಿತ ಅಜೆಂಡಾಗಳನ್ನು ಮತ್ತು ಪೂರ್ವಾಗ್ರಹಗಳನ್ನು ಹೊಂದಿರಬಹುದು. ಈ ಅಜೆಂಡಾ ಕೋಮು ಧ್ರುವೀಕರಣದ ಬಿಜೆಪಿಯ ಒಟ್ಟಾರೆ ನಿಲುವಿಗೆ ಸರಿಹೊಂದುತ್ತದೆ ಎಂದು ನೋಡುವಾಗ, ಕರ್ನಾಟಕ ಹೈಕೋರ್ಟ್ ತೀರ್ಪು ಭಾರತದಾದ್ಯಂತ ಅಪಾಯಕಾರಿ ಸರಣಿ ಪರಿಣಾಮವನ್ನು ಬೀರಬಹುದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸಂದೇಹ ವ್ಯಕ್ತಪಡಿಸಿದೆ.

ಸುಪ್ರೀಂಕೋರ್ಟ್ ವಿಳಂಬ ಮಾಡದೆ ಮೇಲ್ಮನವಿಗಳ ವಿಚಾರಣೆ ನಡೆಸಬೇಕು ಎಂದಿರುವ ಪೊಲಿಟ್ ಬ್ಯುರೊ, ದೇಶದ ಅತ್ಯುಚ್ಚ ನ್ಯಾಯಾಲಯವು ಸಾಂವಿಧಾನಿಕ ಖಾತರಿಗಳನ್ನು ಎತ್ತಿಹಿಡಿಯುತ್ತದೆ ಮತ್ತು ನ್ಯಾಯವನ್ನು ನೀಡುತ್ತದೆ ಎಂದು ಆಶಿಸಿದೆ.

ಏಪ್ರಿಲ್ 11 ರಿಂದ 17 – ಕನಿಷ್ಟ ಬೆಂಬಲ ಬೆಲೆ ಖಾತರಿ ಸಪ್ತಾಹ ಆಚರಣೆ: ಎಸ್‌ಕೆಎಂ ಕರೆ ಮಾರ್ಚ್ 21 ರಂದು ಸರಕಾರದ ವಚನ ಭ್ರಷ್ಟತೆಯ ವಿರುದ್ಧ ದೇಶವ್ಯಾಪಿ ಪ್ರತಿಭಟನೆ

ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ) ತನ್ನ ರಾಷ್ಟ್ರವ್ಯಾಪಿ ಅಭಿಯಾನದ ಮುಂದಿನ ಸುತ್ತನ್ನು ಪ್ರಾರಂಭಿಸುತ್ತಿರುವುದಾಗಿ ಘೋಷಿಸಿದೆ. ಇದನ್ನು ಮಾರ್ಚ್ 14 ರಂದು ದೆಹಲಿಯ ಗಾಂಧಿ ಶಾಂತಿ ಪ್ರತಿಷ್ಠಾನದಲ್ಲಿ ಎಸ್‌ಕೆಎಂಗೆ ಸೇರಿದ ಎಲ್ಲಾ ಸಂಘಟನೆಗಳ ಸಭೆಯಲ್ಲಿ ಸರ್ವಾನುಮತದಿಂದ ನಿರ್ಧರಿಸಲಾಯಿತು.



ಡಿಸೆಂಬರ್ 9 ರಂದು ಸಂಯುಕ್ತ ಕಿಸಾನ್ ಮೋರ್ಚಾಗೆ ಭಾರತ ಸರ್ಕಾರವು ನೀಡಿದ ಲಿಖಿತ ಭರವಸೆಗಳನ್ನು ಮೋರ್ಚಾ ಪರಿಶೀಲಿಸಿತು ಮತ್ತು ಮೂರು ತಿಂಗಳುಗಳ ನಂತರವೂ ಸರ್ಕಾರವು ತನ್ನ ಪ್ರಮುಖ ಭರವಸೆಗಳ ಮೇಲೆ ಯಾವುದೇ ಕ್ರಮಗಳಿಲ್ಲ ಎಂದು ಖೇದ ವ್ಯಕ್ತಪಡಿಸಿತು. ಎಂಎಸ್‌ಪಿ ಕುರಿತು ಸಮಿತಿ ರಚಿಸುವ ಆಶ್ವಾಸನೆಯ ಹೆಸರೇ ಇಲ್ಲ. ಹರಿಯಾಣ ಹೊರತುಪಡಿಸಿ ಇತರ ರಾಜ್ಯಗಳಲ್ಲಿ ರೈತರ ವಿರುದ್ಧದ ಆಂದೋಲನದ ಸಂದರ್ಭದಲ್ಲಿ ಹಾಕಿದ ಕೇಸುಗಳನ್ನು ಹಿಂಪಡೆದಿಲ್ಲ. ದೆಹಲಿ ಪೊಲೀಸರು ಕೆಲವು ಪ್ರಕರಣಗಳನ್ನು ಭಾಗಶಃ ಹಿಂತೆಗೆದುಕೊಳ್ಳುವ ಬಗ್ಗೆ ಮಾತನಾಡಿದ್ದಾರೆ, ಆದರೆ ಅದರ ಬಗ್ಗೆ ಯಾವುದೇ ಖಚಿತವಾದ ಮಾಹಿತಿ ಇಲ್ಲ. ದೇಶಾದ್ಯಂತ ರೈಲ್ ರೋಕೋ ಪ್ರಕರಣಗಳ ಬಗ್ಗೆ ಏನೂ ನಡೆದಿಲ್ಲ.

ಲಖೀಂಪುರ ಖೇರಿ ಪ್ರಕರಣದಲ್ಲಿ ನಡೆಯುತ್ತಿರುವ ಕಾನೂನು ಪ್ರಕ್ರಿಯೆಗಳನ್ನು ಪರಿಶೀಲಿಸಿದ ಸಭೆ, ಪೊಲೀಸ್ ಆಡಳಿತ ಮತ್ತು ಪ್ರಾಸಿಕ್ಯೂಟರ್‌ಗಳು ಒಟ್ಟಾಗಿ ಅಪರಾಧಿಗಳನ್ನು ಉಳಿಸಲು ಮತ್ತು ಅಮಾಯಕ ರೈತರನ್ನು ಸಿಲುಕಿಸಲು ಪ್ರಯತ್ನಿಸುತ್ತಿದ್ದಾರೆಂದು ಕಳವಳ ವ್ಯಕ್ತಪಡಿಸಿತು. ಇಂತಹ ಗಂಭೀರ ಪ್ರಕರಣದಲ್ಲಿ ಕೇಂದ್ರ ಸಚಿವರ ಪುತ್ರನಿಗೆ ಇಷ್ಟು ಬೇಗ ಜಾಮೀನು ಸಿಕ್ಕಿದ್ದು, ಇದೇ ಪ್ರಕರಣದಲ್ಲಿ ಸಿಲುಕಿರುವ ರೈತರು ಇನ್ನೂ ಜೈಲಿನಲ್ಲಿರುವುದು ಅಚ್ಚರಿ ಮೂಡಿಸಿದೆ. ಮೋನು ಮಿಶ್ರಾ ಹೊರಬಂದ ನಂತರ ಪ್ರಕರಣದ ಪ್ರಮುಖ ಸಾಕ್ಷಿಯ ಮೇಲೆ ದಾಳಿ ನಡೆದಿದೆ ಎಂಬ ಸುದ್ದಿಯ ಬಗ್ಗೆ ಸಭೆ ತೀವ್ರ ಅಸಮಾಧಾನ ವ್ಯಕ್ತಪಡಿಸಿತು. ಈ ವಿಚಾರದಲ್ಲಿ ಕಾನೂನು ಹೋರಾಟದಲ್ಲಿ ಯಾವುದೇ ಸಡಿಲಿಕೆ ಇಲ್ಲ ಮತ್ತು ರೈತರ ಕುಟುಂಬಗಳಿಗೆ ಸಂಪೂರ್ಣ ಕಾನೂನು ನೆರವು ನೀಡಲಾಗುವುದು ಎಂದು ಎಸ್‌ಕೆಎಂ ನಿರ್ಧರಿಸಿದೆ.

ಲಖೀಂಪುರ ಖೇರಿ ಘಟನೆಯಲ್ಲಿ ಸರ್ಕಾರದ ಪಾತ್ರ ಮತ್ತು ರೈತರ ಚಳವಳಿಗೆ ನೀಡಿದ ಆಶ್ವಾಸನೆಗಳಿಗೆ ಸಂಬಂಧಪಟ್ಟಂತೆ ವಿಶ್ವಾಸಘಾತದ ವಿರುದ್ಧ ಮಾರ್ಚ್ 21 ರಂದು ರಾಷ್ಟ್ರವ್ಯಾಪಿ ಪ್ರತಿಭಟನೆಯನ್ನು ನಡೆಸಲು ಎಸ್‌ಕೆಎಂ ನಿರ್ಧರಿಸಿದೆ.

ಮಾರ್ಚ್ 28 ಮತ್ತು 29 ರಂದು ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ ಭಾರತ್ ಬಂದ್‌ಗೆ ತನ್ನ ಬೆಂಬಲವನ್ನು ಪುನರುಚ್ಚರಿಸಿರುವ ಸಂಯುಕ್ತಕಿಸಾನ್‌ಮೋರ್ಚಾದೇಶಾದ್ಯಂತರೈತರುಇದರಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ ಎಂದು ಹೇಳಿದೆ.

ಮುಂದಿನ ತಿಂಗಳು ಏಪ್ರಿಲ್ 11 ರಿಂದ 17 ರವರೆಗೆ ಕನಿಷ್ಟ ಬೆಂಬಲ ಬೆಲೆಗೆ ಕಾನೂನು ಖಾತರಿ ಸಪ್ತಾಹವನ್ನು ಆಚರಿಸುವ ಮೂಲಕ ರಾಷ್ಟ್ರವ್ಯಾಪಿ ಅಭಿಯಾನವನ್ನು ಪ್ರಾರಂಭಿಸಲಾಗುವುದು. ಈ ಸಪ್ತಾಹಾಚರಣೆಯಲ್ಲಿ, ಎಸ್‌ಕೆಎಂ ನ ಎಲ್ಲ ಘಟಕ ಸಂಘಟನೆಗಳು ಸ್ವಾಮಿನಾಥನ್ ಆಯೋಗವು ಎಲ್ಲಾ ರೈತರಿಗೆ ಅವರ ಎಲ್ಲಾ ಕೃಷಿ ಉತ್ಪನ್ನಗಳಿಗೆ ನಿಗದಿಪಡಿಸಿದ ಕನಿಷ್ಟ ಬೆಂಬಲ ಬೆಲೆಯ (ಸಿ2 + 50%) ಕಾನೂನು ಖಾತರಿಗಾಗಿ ಒತ್ತಾಯಿಸಿ ಧರಣಿಗಳು, ಪ್ರದರ್ಶನಗಳು, ವಿಚಾರಗೋಷ್ಠಿಗಳನ್ನು ಆಯೋಜಿಸುತ್ತವೆ ಎಂದು ಅದು ಹೇಳಿದೆ.

ಸಂಯುಕ್ತ ಕಿಸಾನ್ ಮೋರ್ಚಾದ ಸಂಯೋಜನಾ ಸಮಿತಿ ಕರೆದಿದ್ದ ಈ ರಾಷ್ಟ್ರ ಮಟ್ಟದ ಸಭೆಯಲ್ಲಿ ಪಂಜಾಬ್, ಹರಿಯಾಣ, ದೆಹಲಿ, ರಾಜಸ್ಥಾನ, ಉತ್ತರ ಪ್ರದೇಶ, ಉತ್ತರಾಖಂಡ, ಬಿಹಾರ, ಜಾರ್ಖಂಡ್, ಅಸ್ಸಾಂ, ತ್ರಿಪುರಾ, ಒರಿಸ್ಸಾ, ತೆಲಂಗಾಣ, ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡು, ಕೇರಳ, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢದ ರೈತ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು ಎಂದು ಡಾ. ದರ್ಶನ್ ಪಾಲ್, ಹನ್ನನ್ ಮೊಲ್ಲಾ, ಜಗಜಿತ್ ಸಿಂಗ್ ದಲ್ಲೆವಾಲ್, ಜೋಗಿಂದರ್ ಸಿಂಗ್ ಉಗ್ರಹಾನ್, ಶಿವಕುಮಾರ್ ಶರ್ಮಾ (ಕಾಕ್ಕಾ ಜಿ), ಯುದ್ಧೀರ್ ಸಿಂಗ್ ಮತ್ತು ಯೋಗೇಂದ್ರ ಯಾದವ್ ಜಂಟಿಯಾಗಿ ನೀಡಿರುವ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಂಪಾದಕೀಯ

ನ್ಯಾಯ ಸಮ್ಮತ ತೀರ್ಪಿನ ಅನಿವಾರ್ಯತೆ

ವಿದ್ಯಾರ್ಥಿನಿಯರು ಶಿರವಸ್ತ್ರ ಹಿಜಾಬ್‌ನ್ನು ಧರಿಸಿ ತರಗತಿಗೆ ಹಾಜರಾಗುವ ಕುರಿತ ವಿಷಯದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ನೀಡಿರುವ ತೀರ್ಪಿನ ಸುತ್ತ ಹಲವಾರು ವಿಭಿನ್ನ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ. ಮುಸ್ಲಿಂ ಸಮುದಾಯದ ಹಲವರಲ್ಲಿ ತೀವ್ರತರ ಆತಂಕ, ಸರ್ಕಾರದ ನಡೆಗಳ ಬಗ್ಗೆ ಆಕ್ರೋಶವನ್ನು ನಿರ್ಮಿಸಿದೆ. ನ್ಯಾಯಾಲಯದ ತೀರ್ಪನ್ನು ಒಪ್ಪಬೇಕು, ಜಾರಿಗೊಳಿಸಬೇಕು ಎನ್ನುವುದು ನಿಜವಾದರೂ ತೀರ್ಪನ್ನು ಒಂದು ಸಾಂವಿಧಾನಿಕ ಚೌಕಟ್ಟಿನಲ್ಲಿ ವಿಮರ್ಶಿಸುವುದು ಉನ್ನತ ಹಂತದ ನ್ಯಾಯಾಲಯದಲ್ಲಿ ನ್ಯಾಯಕ್ಕೆ ಮೊರೆಹೋಗುವುದು ನಿಷಿದ್ಧವೇನಲ್ಲ. ಅದು ಭಾರತೀಯ ಪ್ರಜೆಗಳಿಗೆ ನಮ್ಮ ಸಂವಿಧಾನ ಕೊಡಮಾಡಿರುವ ಅತ್ಯಂತ ಮಹತ್ವದ ಹಕ್ಕಾಗಿದೆ. ನ್ಯಾಯ ಬಯಸಿ ಕರ್ನಾಟಕ ಉಚ್ಚ ನ್ಯಾಯಾಲಯದ ಮೆಟ್ಟಿಲೇರಿದ್ದ ಕಾಲೇಜಿನ ವಿದ್ಯಾರ್ಥಿನಿಯರು ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿ ಮಾಡಿದ್ದಾರೆ. ಕೆಲವೆಡೆ ಹಿಜಾಬ್ ಧರಿಸಿದ ಮಕ್ಕಳು ತರಗತಿಗಳಿಗೆ ಪರೀಕ್ಷೆಗಳಿಗೆ ಹಾಜರಾಗಲು ಆಡಳಿತ ಮಂಡಳಿಗಳು ಅವಕಾಶ ಕೊಟ್ಟಿಲ್ಲ. ಕೆಲವು ಮುಸ್ಲಿಂ ಸಮುದಾಯದ ಸಂಘಟನೆಗಳು ನ್ಯಾಯ ಒದಗಿಸಬೇಕೆಂದು ಸರ್ಕಾರಕ್ಕೆ ಆಗ್ರಹಿಸಿ ವಹಿವಾಟು ಬಂದ್ ಮಾಡಿ ಶಾಂತಿಯುತವಾಗಿ ವಿರೋಧ ವ್ಯಕ್ತಪಡಿಸಿವೆ. ಇಂತಹ ತೀವ್ರತರ ಪ್ರತಿಕ್ರಿಯೆಗಳು ಅಪಾರ್ಥಗಳಿಗೆ ಎಡೆ ಮಾಡುವ ಅಪಾಯವು ಇಲ್ಲದಿಲ್ಲ.

ಬಾಧಿತರು ತೀರ್ಪಿನಿಂದ ತಮಗೆ ನ್ಯಾಯ ಸಿಗಲಿಲ್ಲ ಎಂದು ಭಾವಿಸುವುದು, ಪ್ರತಿಕ್ರಿಯೆ ವ್ಯಕ್ತಪಡಿಸುವುದು ಸಹಜ. ಆದರೆ ತಮಗೆ ಸಂಬಂಧವೇ ಇರದ ಕೆಲವು ಶಕ್ತಿಗಳು ಸಂಭ್ರಮಿಸುವ, ಬಾಧಿತರನ್ನು ಕೆಣಕಿ ವಿಜಯ ಸಾಧಿಸಿದ ವರ್ತನೆ ಆಕ್ಷೇಪಾರ್ಹ. ಇದು ಅಮಾನವೀಯ ಮಾತ್ರವಲ್ಲ, ದ್ವೇಷ ಹುಟ್ಟು ಹಾಕಿ ನಾಗರಿಕ ವರ್ತನೆಗಳನ್ನು ನೆಲಸಮ ಮಾಡುವ ಪ್ರವೃತ್ತಿಯಾಗಿದೆ.

ಸಮಾಜದ ಸ್ವಾಸ್ಥ್ಯ, ಶಾಂತಿ, ಸೌಹಾರ್ದತೆ ಸಾಂವಿಧಾನಿಕ ಹಕ್ಕುಗಳ ಸಂರಕ್ಷಣೆಯನ್ನು ನ್ಯಾಯಾಲಯಗಳ ಅಥವಾ ಚುನಾಯಿತ ಸರಕಾರದಿಂದ ನಿರೀಕ್ಷಿಸಲಾಗುತ್ತದೆ. ತೀರ್ಪುಗಳು ಅದನ್ನು ಬಲಗೊಳಿಸಬೇಕೆಂಬ ಆಶಯವನ್ನು ಹೊಂದಲಾಗುತ್ತದೆ. ಆದರೆ ಹಿಜಾಬ್ ವಸ್ತ್ರ ಬಳಸುವ ಕುರಿತು ಎದ್ದುಬಂದ ವಿವಾದ ಎತ್ತಲಾದ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ಕಂಡುಕೊಳ್ಳಲಾಯಿತೇ ಎನ್ನುವಾಗ ನ್ಯಾಯಾಲಯದ ತೀರ್ಪು ಹಲವು ನಿರ್ಣಾಯಕ ಪ್ರಶ್ನೆಗಳಲ್ಲಿ ಮುಗ್ಗರಿಸಿದೆ ಎನಿಸುತ್ತದೆ. ವಿಚಾರಣಾ ವಿಷಯ, ವಿವಾದಗಳ ಕುರಿತು ಪರಿಶೀಲಿಸುವಾಗ ಉಚ್ಚನ್ಯಾಯಾಲಯ ಹಾಕಿಕೊಂಡ ನಾಲ್ಕು ಪ್ರಶ್ನೆಗಳು, ಕಂಡುಕೊಂಡ ಉತ್ತರಗಳ ಬಗ್ಗೆ ವ್ಯಾಪಕ ವಿಮರ್ಶೆಯು ವ್ಯಕ್ತಗೊಂಡಿದೆ.

'ಹಿಜಾಬ್ ಇಸ್ಲಾಂ ಧರ್ಮದ ಅತ್ಯಗತ್ಯ ಭಾಗವಲ್ಲ' ಎಂದಿರುವ ನ್ಯಾಯಾಲಯವು ಶಿಕ್ಷಣ ಕಲಿಕೆಯಲ್ಲಿ ಸಮವಸ್ತ್ರಕ್ಕೆ ಧಾರ್ಮಿಕತೆಯ ಆಧಾರದ ಪರಿಶೀಲನೆ ಅಗತ್ಯವಿತ್ತೇ? ಮೂವರು ನ್ಯಾಯಾಧೀಶರ ನ್ಯಾಯಪೀಠವು ಮುಸ್ಲಿಂ ವಿದ್ಯಾರ್ಥಿನಿಯರ ಶಿಕ್ಷಣದ ಹಕ್ಕು ದಕ್ಕುವುದು ಪ್ರಧಾನ ಲಕ್ಷ್ಯವಾಗಿ ಪರಿಗಣಿಸಲು ಅದಕ್ಕೆ ಸಂವಿಧಾನ ಆಧಾರವಾಗಬೇಕಿತ್ತು. ಇದಕ್ಕೆಲ್ಲ ಸಮರ್ಥ, ಸಮಂಜಸ ಉತ್ತರ ಭಾರತದ ಸಂವಿಧಾನದಲ್ಲಿದೆ. ವ್ಯಕ್ತಿಯ ನಡೆ–ನುಡಿ, ಆಚಾರ–ವಿಚಾರಗಳನ್ನು ಪರಿಹಾರಗಳನ್ನು ಮತಧರ್ಮ ಅಥವಾ ಮತಧರ್ಮ ಗ್ರಂಥಗಳ ಆಧಾರದಲ್ಲಿ ನೋಡುವುದು ಸರಿಯಲ್ಲ. ಹಾಗೆ ನೋಡಿದರೆ ಧಾರ್ಮಿಕ ಆಚರಣೆ ಹಕ್ಕು, ಖಾಸಗಿತನದ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯ, ಶಿಕ್ಷಣದ ಹಕ್ಕು ಇವೆಲ್ಲವೂ ಸಂವಿಧಾನಬದ್ಧ ಬಹುಮುಖ್ಯ ಭಾಗವಾಗಿದ್ದು ಶಿರವಸ್ತ್ರ ಧರಿಸುವ ಪ್ರಶ್ನೆ ಶಿಕ್ಷಣ ಕಲಿಕೆಗೆ ಅಡ್ಡಿಯಾಗದಂತೆ ಸಮರ್ಥ ನ್ಯಾಯದಾನಕ್ಕೆ ಅಗತ್ಯವಾದ ಎಲ್ಲವನ್ನೂ ಒಳಗೊಂಡಿದೆ. ಅತ್ಯಂತ ವ್ಯಾಪಕವಾಗಿ ವೈವಿಧ್ಯತೆ ಆಚರಣೆಗಳನ್ನು ಹೊಂದಿರುವ ಭಾರತದ ಸಮಾಜದ ವಾಸ್ತವಿಕತೆಗಳನ್ನು ಮತ್ತು ಅದು ಆಧುನಿಕ ಕಾಲಘಟ್ಟದಲ್ಲಿ ಸಾಗುವಾಗ ಆಗುತ್ತಿರುವ ಪರಿವರ್ತನೆಗಳನ್ನು ಗಮನದಲ್ಲಿ ಇರಿಸದೆ, ಸಮವಸ್ತ್ರವನ್ನು ಸಮಾನತೆ ಸಮ ಭ್ರಾತೃತ್ವದ ಭಾಗವಾಗಿ ಯೋಚಿಸದೆ ಏಕರೂಪತೆಯ ಸಾಂಸ್ಕೃತಿಕ, ಸಾಮಾಜಿಕ ದೃಷ್ಟಿಕೋನದಲ್ಲಿ ನೋಡುವುದು ನಕಾರಾತ್ಮಕವಾಗಿದೆ. ಅರ್ಜಿದಾರರ ವಾದದ ನೆಲೆಗಳು ಹಲವು ದೋಷಗಳಿಂದ ಕೂಡಿದೆ ಎನ್ನುವುದು ಸಹ ಗಮನಿಸಬೇಕಿದೆ. ಇಂದಿನ ಹಲವಾರು ಆಚರಣೆಗಳು ಧಾರ್ಮಿಕತೆಗೆ ತಳುಕು ಹಾಕಿರಬಹುದು. ಆದರೆ ಅವೆಲ್ಲವೂ ಪುರಾತನ ಕುರಾನ್, ಗೀತೆ, ಸ್ಮೃತಿಗಳಲ್ಲಿ ಇರಲು ಸಾಧ್ಯವೇ? ಮತಗಳ ನಿಯಂತ್ರಣಗಳಿಲ್ಲದೇ ವ್ಯಕ್ತಿಗಳು ಬದುಕಲಾರರೇ? ಇಲ್ಲವಾದರೆ ಮತೀಯ ಮೂಲಭೂತವಾದಿ ಚಿಂತನೆಗಳು ವ್ಯಕ್ತಿ ಸ್ವಾತಂತ್ರ್ಯವನ್ನೇ ಹರಣ ಮಾಡುತ್ತವೆ.

ಶಿಕ್ಷಣ, ಸಮಾನ ಹಕ್ಕುಗಳ ನಿರಾಕರಣೆಗೆ ಒಳಗಾಗಿಯೇ ಇರುವ ಮಹಿಳೆಯರು ಅದರಲ್ಲೂ ಮುಸ್ಲಿಂ ಮಹಿಳೆಯರು ಇದೀಗ ಹಲವು ಸಾಮಾಜಿಕ, ಧಾರ್ಮಿಕ ನಿರ್ಬಂಧಗಳ ನಡುವೆಯೇ ಶಿಕ್ಷಣ ಕಲಿತು, ದೇಶದ ಪ್ರಗತಿಗೆ ಶ್ರಮಿಸುತ್ತಿರುವ ಪ್ರಕ್ರಿಯೆಗೆ ನ್ಯಾಯಾಲಯ ಒತ್ತು ಕೊಡದಿರುವುದನ್ನು ಗಮನಿಸಬೇಕಿತ್ತು.

ಸರಕಾರದ ಮಟ್ಟದಲ್ಲಿ ಬಗೆಹರಿಸಬಹುದಾಗಿದ್ದ ತಲೆಮೇಲಿನ ತುಂಡು ಹೊದಿಕೆ ವಸ್ತ್ರವನ್ನು ವಿವಾದವಾಗಿಸಿ ಹಿಗ್ಗಿಸ, ವಿಜೃಂಭಿಸಿದ್ದು , ನ್ಯಾಯಾಲಯದ ತೀರ್ಪನ್ನು ಸಹ ಮತಿಯ ಕ್ರೋಢೀಕರಣಕ್ಕೆ ಕೋಮುವಾದಿ ಉದ್ದೇಶದ ರಾಜಕೀಯ ಉದ್ದೇಶಗಳಿಗೆ ಬಳಸುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಹಿಂದು–ಮುಸ್ಲಿಮರ ನಡುವಿನ ಮೂಲಭೂತವಾದಿ ಶಕ್ತಿಗಳ ಹುನ್ನಾರಗಳನ್ನು ಜನತೆಯ ಅರಿಯಬೇಕಿದೆ.

ಭಾರತದಂತಹ ವಿಕಾಸಶೀಲ ಸಮಾಜದಲ್ಲಿ ಮೌಲ್ಯಗಳ ಸಂಘರ್ಷ ಹೊಸತೇನಲ್ಲ. ಪ್ರಗತಿ ಮತ್ತು ಪ್ರತಿಗಾಮಿ ಶಕ್ತಿಗಳ ನಡುವೆ ಸಂಘರ್ಷ ಸಹಜವಾಗಿದೆ. ಸಮವಸ್ತ್ರದ ಭಾಗವಾಗಿಯೇ ಉಡುವ ಉಡುಪನ್ನು ಧರ್ಮೀಕರಿಸಿ ಮುಸ್ಲಿಂ ಮಹಿಳೆಯರ ಶಿಕ್ಷಣ, ಆ ಮೂಲಕ ಸ್ವಾವಲಂಬನೆ, ಸ್ವಾಭಿಮಾನ ಬೆಳೆಯುವ ಅರಿವಿನಿಂದ ಬೆಳಗುವ ವೈಚಾರಿಕತೆಯ ಪ್ರಕ್ರಿಯೆಯನ್ನು ವಂಚಿಸುವ ಪ್ರಯತ್ನಗಳೂ ಇಲ್ಲದಿಲ್ಲ. ಪರಂಪರಾನುಗತವಾಗಿ ಸ್ಥಾಪಿತ ಹಿತಾಸಕ್ತಿಗಳ ಹಿಡಿತ ತಪ್ಪುವುದನ್ನು ಬಯಸದ ಶಕ್ತಿಗಳಿಗೂ ಮಹಿಳೆಯರು ಅರಿವು ಪಡೆಯುವುದು ಬೇಕಿಲ್ಲ. ಹೀಗಾಗಿಯೇ ಇಂತಹ ಪ್ರಶ್ನೆಗಳನ್ನು ಜಡವಾಗಿಸುವ ಷಡ್ಯಂತ್ರದ ದುರಾಲೋಚನೆಯನ್ನು ನಿರಾಕರಿಸುವಂತಿಲ್ಲ. ಅದು ಇಡೀ ಮಹಿಳಾ ಸಮುದಾಯದ ಆ ಮೂಲಕ ಸಮಾಜದ ಮುನ್ನಡೆಗೆ ಬಹುದೊಡ್ಡ ಕಂಟಕ. ಅದ್ದರಿಂದ ಶಿರವಸ್ತ್ರದ ಪ್ರಶ್ನೆ ಕೇವಲ ಕೆಲವು ಮುಸ್ಲಿಂ ಸಮುದಾಯದವರ ಪ್ರಶ್ನೆಯಾಗದೇ ಇಡೀ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವ, ವಿಸ್ತರಿಸುವ ಪ್ರಶ್ನೆಯಾಗಿದೆ.

ಪುಟ 7 ಕ್ಕೆ

ಪರಿವಾರದ ಪುಂಡಾಟಿಕೆಗೆ ಧರ್ಮದ ಲೇಪನ ಸರಕಾರದ ಮೌನ!

– ಎಸ್.ವೈ. ಗುರುಶಾಂತ್

ಈ ವಾರ

ಸಂಘಪರಿವಾರದ ಪುಂಡಾಟಿಕೆಗೆ ನಿಯಂತ್ರಣವೇ ಇಲ್ಲದಂತಾಗಿದೆ. ಏನಾದರೂ ಒಂದು ವಿಷಯವನ್ನು ಕೆದಕಿ ವಿವಾದ ಹುಟ್ಟಿಸಿ ಅಲ್ಪಸಂಖ್ಯಾತರನ್ನು ಗುರಿ ಮಾಡುವುದನ್ನು ಅದು ಮತ್ತಷ್ಟು ತೀವ್ರಗೊಳಿಸಿದೆ.

ಸುಗ್ಗಿಯ ನಂತರದಲ್ಲಿ ರಾಜ್ಯದಲ್ಲೆಡೆ ಹಬ್ಬಗಳು, ಜಾತ್ರೆಗಳು ನಡೆಯುವುದು ಎಂದಿನವಾಡಿಕೆಯಂತೆ ಆರಂಭವಾಗಿವೆ. ಇವು ಧಾರ್ಮಿಕವಾಗಿರುವಾಗಲೇ ಸಾಂಸ್ಕೃತಿಕ ಸ್ವರೂಪವನ್ನು ಹೊಂದಿವೆ. ವಿಶೇಷವಾಗಿ, ಸಾವಿರಾರು ವರ್ಷಗಳ ನಾಗರೀಕತೆಯ ವಿಕಸನದ ಹಲವಾರು ಪ್ರಮುಖ ಘಟ್ಟಗಳನ್ನು ಸಂಕೇತಿಸುತ್ತವೆ. ಒಂದೊಂದು ಸಮುದಾಯವು ತಾನು ಕಟ್ಟಿಕೊಂಡ ಬದುಕಿನ ಸಾಂಸ್ಕೃತಿಕ ಆಚರಣೆಯಾಗಿರುವುದು, ಕಾಲಾನುಕ್ರಮದಲ್ಲಿ ಸಮಾಜ ಬೆಳೆದಂತೆ ಎಲ್ಲರನ್ನೂ ಒಳಗೊಳ್ಳುವ ಕ್ರಿಯೆಯಾಗಿ ವಿಶಾಲ ಹರವು ಆಚರಣೆಗಳ ವೈವಿಧ್ಯತೆಯನ್ನು ಪಡೆದಿವೆ. ಈ ಪ್ರಕ್ರಿಯೆಯು ತನ್ನದೇ ಅಸ್ತಿತ್ವ, ಅಸ್ಮಿತತೆ ಹೊಂದಿರುವ ವಿವಿಧ ಜನಸಮುದಾಯಗಳನ್ನು ಒಂದೆಡೆಗೆ ಬೆಸೆಯುವ ಸಾಮೂಹಿಕ ಕ್ರಿಯೆಗಳಾಗಿ ಸಮಾಜದ ಶಾಂತಿ ಸೌಹಾರ್ದತೆಗ ಬೆಸೆಯುವ ಕೊಂಡಿಗಳಾಗಿವೆ. ಏಕರೂಪಿ ಸರ್ವಾಧಿಕಾರತ್ವದ ಸಂಸ್ಕೃತಿಯ ಯಜಮಾನಿಕೆಗೆ ಸವಾಲುಗಳಾಗಿ ಬಹುತ್ವದ ಪ್ರತಿಪಾದನೆಯ ಪ್ರತೀಕಗಳಾಗಿ ಜೀವಂತ ಇರುವುದು ನಾಡಿನ ಸಾಂಸ್ಕೃತಿಕ ಹಿರಿಮೆ.

ಜನ ಜೀವನದಲ್ಲಿ ಹಾಸುಹೊಕ್ಕಾಗಿರುವ ಇಂತಹ ಜನಸಂಸ್ಕೃತಿಯನ್ನು ಒಡೆದು ಏಕರೂಪಿ ಯಜಮಾನಿಕೆ ಹೇರಲು ಹವಣಿಸುವವರಿಗೆ ಈ ಸೌಹಾರ್ದ ಸಂಸ್ಕೃತಿ ನುಂಗಲಾರದ ತುತ್ತಾಗಿದೆ. ಹೀಗಾಗಿಯೇ ಬಾಬಾಬುಡನ್ ಗಿರಿ, ಆಳಂದ ದರ್ಗಾ, ಖಾಜಾ ಬಂದೇ ನವಾಜ್ ದರ್ಗಾ, ಶರಣ ಬಸಪ್ಪ ಅಪ್ಪಾ ದಂತಹ ಸೌಹಾರ್ದ ಕೇಂದ್ರಗಳ ಪರಂಪರೆಯನ್ನು ವಿಕೃತಗೊಳಿಸಿ ಜನರನ್ನು ಒಡೆಯಲು ಸತತ ಯತ್ನಿಸಲಾಗುತ್ತಿದೆ. ಇದೀಗ ಸಂಘಪರಿವಾರದ ವಿಭಜಕ ವಿದ್ವೇಷದ ರಾಜಕಾರಣ ಹಬ್ಬ ಜಾತ್ರೆಗಳಿಗೂ ವಿಸ್ತರಿಸುತ್ತಿದೆ. ಇತ್ತೀಚೆಗೆ ಹಿಜಾಬ್ ಬಗ್ಗೆ ಬಂದ ಹೈಕೋರ್ಟಿನ ತೀರ್ಪನ್ನು ತಮ್ಮ ಅಜೆಂಡಾಕ್ಕೆ ದೊರೆತ ದಿಗ್ವಿಜಯ ಎಂಬಂತೆ ಬೀಗಿದ ಸಂಘಪರಿವಾರ ಕರಾವಳಿ, ಮಲೆನಾಡಿನಲ್ಲಿ ಮತ್ತಷ್ಟು ಆಕ್ರಮಣಕಾರಿಯಾಗಿ ವರ್ತಿಸುತ್ತಿದೆ.

ಉಡುಪಿ ಜಿಲ್ಲೆಯ ಕಾಪು ಪ್ರದೇಶದಲ್ಲಿ ನಡೆಯುವ ಮೂರು ಮಾರಿಗುಡಿಗಳ ಜಾತ್ರೆಯ ಸಂದರ್ಭದಲ್ಲಿ ಹಿಂದೂಯೇತರರಿಗೆ ಈ ಪ್ರದೇಶದಲ್ಲಿ ವ್ಯಾಪಾರ ಮಳಿಗೆ ತೆರೆಯಲು ಅವಕಾಶ ಕೊಡಬಾರದು ಎಂದು ಕಾಪು ಪುರಸಭೆ ಮುಖ್ಯಾಧಿಕಾರಿ, ಹೊಸ ಮಾರಿಗುಡಿ ದೇವಸ್ಥಾನದ ನಿರ್ವಹಣಾಧಿಕಾರಿಗಳಿಗೆ ಒತ್ತಡ ಹಾಕಲಾಗಿದೆ. ಹಿಂದೂಯೇತರರು ಎನ್ನುವಾಗ ನಿರ್ದಿಷ್ಟವಾಗಿ ಮುಸ್ಲಿಂ ವ್ಯಾಪಾರಿಗಳನ್ನೇ ಅವರು ಗುರಿ ಮಾಡಿರುವುದು ಮತ್ತು ಹಾಗೇ ಪ್ರಸ್ತಾಪಿಸಿರುವುದು ಕಾಣುತ್ತದೆ. ಯಾಕೆಂದರೆ, ತಲೆತಲಾಂತರದಿಂದ ಈ ಪ್ರದೇಶಗಳಲ್ಲಿ ವಾಸವಿರುವ ವಿವಿಧ ಜಾತಿ ಧರ್ಮಿಯರು ಜಾತ್ರೆಯ ಸಂದರ್ಭದಲ್ಲಿ ಅಂಗಡಿಗಳನ್ನು ತೆರೆದು ವ್ಯಾಪಾರ ಮಾಡುತ್ತಾ ಬಂದಿದ್ದಾರೆ. ಮನಸುಗಳು ಒಡೆದು ಹೋಗಿರುವ ಈ ಸಂದರ್ಭದಲ್ಲಿ ಒಳಗೊಳ್ಳುವ ಬದಲು ಈಗ ವ್ಯಾಪಾರಿಗಳ ಮತಧರ್ಮ ನೋಡಿ ಅವಕಾಶ ನೀಡಬಾರದು ಎನ್ನುವುದು ಎಷ್ಟು ಸರಿ.

ಬಜರಂಗದಳದ ಮುಖಂಡರ ಮನವಿ ಬಗ್ಗೆ ಕಾಪು ಪುರಸಭೆ ಮುಖ್ಯಾಧಿಕಾರಿ ಪ್ರತಿಕ್ರಿಯಿಸಿ 'ನಿರ್ದಿಷ್ಟ ಸಮುದಾಯದವರಿಗೆ ಮಾತ್ರ ವ್ಯಾಪಾರಕ್ಕೆ ಅವಕಾಶ ಎಂಬ ನಿಯಮವಿಲ್ಲ. ಯಾರು ಬೇಕಾದರೂ ಅಂಗಡಿಗಳನ್ನು ತೆರೆಯಬಹುದು, ವ್ಯಾಪಾರ ಮಾಡಬಹುದು' ಎಂದು ಹೇಳಿದ್ದಾರೆ. ಆದರೆ ಕಾಪು ಹೊಸ ಮಾರಿಗುಡಿ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಪ್ರಶಾಂತ್ ಶೆಟ್ಟಿ ಯವರು 'ಕೇವಲ ಹಿಂದೂಗಳಿಗೆ ಮಾತ್ರ ಅವಕಾಶ ನೀಡಲು ದೇವಸ್ಥಾನದ ಮಂಡಳಿಯಲ್ಲಿ ನಿರ್ಧರಿಸಲಾಗಿದೆ' ಎಂದು ಹೇಳುತ್ತಾರೆ.

ಹಲವಾರು ದಶಕಗಳಿಂದ ಸೌಹಾರ್ದತೆಗೆ ಹೆಸರಾಗಿದ್ದ ಶಿವಮೊಗ್ಗದ ಕೋಟೆ ಮಾರಿಕಾಂಬ ದೇವಸ್ಥಾನ ಜಾತ್ರೆಯಲ್ಲಿಯೂ ಮುಸ್ಲಿಮರು ಅಂಗಡಿ ಹಾಕದಂತೆ ಬಿಜೆಪಿ,ಬಜರಂಗದಳದವರು ತಡೆದು ಯಶಸ್ವಿಯಾಗಿದ್ದಾರೆ ಎಂದು ವರದಿಯಾಗಿದೆ.

ಇವೆಲ್ಲವೂ ಹಿಂದೂ ಧರ್ಮ, ಹಿಂದೂಗಳ ಹೆಸರಿನಲ್ಲಿ ಕೋಮುವಾದಿ ಹಿಂದುತ್ವದ ಫ್ಯಾಸಿಸ್ಟ್ ಶಕ್ತಿಗಳು ನಡೆಸುತ್ತಿರುವ ಸಮಾಜವನ್ನು ಒಡೆಯುವ ಅಪಾಯಕಾರಿ ಕೃತ್ಯಗಳಾಗಿವೆ. ಆರ್. ಎಸ್.ಎಸ್. ಪ್ರತಿಪಾದಿಸುವ 'ಹಿಂದುತ್ವ'ದಲ್ಲಿ ಮುಸ್ಲಿಮರು ಕ್ರಿಶ್ಚಿಯನ್ನರು ಎರಡನೆಯ ದರ್ಜೆಯ ನಾಗರೀಕರು. ಅವರಿಗೆ ಎಲ್ಲಾ ನಾಗರಿಕರಂತೆ ಸಮಾನ ಅವಕಾಶ ಹಕ್ಕುಗಳು ಇರುವುದಿಲ್ಲ ಎನ್ನುವುದನ್ನು ಸಂಘಪರಿವಾರ ಜಾರಿಗೊಳಿಸ ಬಯಸುತ್ತಿದೆ. ಪ್ರಮುಖವಾಗಿ, ಮುಸ್ಲಿಮರು ವ್ಯಾಪಾರ ಮಾಡಬಾರದು ಎನ್ನುವ ದ್ವೇಷದ ಕಾರಣದಲ್ಲಿ ಅವರ ಬದುಕಿನ ಆರ್ಥಿಕ ಮೂಲಗಳನ್ನು ಹಾಳುಗೆಡಹುವ ಕುತಂತ್ರವಿದೆ. ಈ ಹಿಂದಿನಿಂದಲೂ ಮುಸ್ಲಿಮರ ಅಂಗಡಿಗಳಲ್ಲಿ ಸಾಮಾನುಗಳನ್ನು ಖರೀದಿಸಬಾರದು ಎನ್ನುವ ಪ್ರಚಾರ ಸತತವಾಗಿ ನಡೆಸುತ್ತಲೇ ಬರಲಾಗಿದೆ. ಗುಜರಾತಿನ ಮಾದರಿ ಪ್ರಯೋಗ ಇದೀಗ ಕರಾವಳಿಯ ಕರ್ನಾಟಕದಲ್ಲಿಯೂ ಕರ್ನಾಟಕದ ಇತರ ಕಡೆಗಳಲ್ಲಿಯೂ ಅಡೆತಡೆಯಿಲ್ಲದೆ ನಡೆಯುತ್ತಿದೆ.

ಇಂತಹ ಸಂವಿಧಾನ ವಿರೋಧಿ, ಸಮಾಜ ವಿರೋಧಿ ಕೃತ್ಯಗಳಿಗೆ ಕಡಿವಾಣ ಹಾಕಬೇಕಾದ ಕರ್ನಾಟಕ ರಾಜ್ಯ ಸರ್ಕಾರ, ಮುಖ್ಯಮಂತ್ರಿ ಹಾಗೂ ಸಚಿವರು ಗಳು, ಜಿಲ್ಲಾಡಳಿತದ ಅಧಿಕಾರಿಗಳು ಯಾಕೆ ಮೌನವಹಿಸಿದ್ದಾರೆ? ಗೃಹ ಸಚಿವರು ಇತರರ ಮಾತುಗಳನ್ನು ಕೇಳಿದರೆ ಇಂತಹ ಶಕ್ತಿಗಳಿಗೆ ಸರಕಾರದ ನೇರ ಕುಮ್ಮಕ್ಕು ಇರುವ ಅನುಮಾನ ದಟ್ಟವಾಗಿ ಬರುತ್ತದೆ.

ಇಂತಹ ಕೃತ್ಯಗಳಿಗೆ ಸರಕಾರದ ಮೌನಸಮ್ಮತಿ ಯಿಂದ ಸಮಾಜದ ಒಳಗಡೆಯಲ್ಲಿ ತೀವ್ರತರ ಹತಾಶೆ, ಆಕ್ರೋಶಗಳು ಉದ್ಭವವಾಗಬಹುದು. ಶಾಂತಿ–ನೆಮ್ಮದಿ ಕದಡಬಹುದು. ಹೀಗಾದಲ್ಲಿ ಸಮಾಜದ ಪ್ರಗತಿ ಸಾಧ್ಯವಿದೆಯೇ ಎಂದು ಯೋಚಿಸಬೇಕು.

ಆದ್ದರಿಂದ, ಸರಕಾರ ಕೂಡಲೇ ಮಧ್ಯಪ್ರವೇಶಿಸಿ ನಾಗರಿಕ ಕಾನೂನು ಜಾರಿಯಾಗಬೇಕು ಮತ್ತು ಜನ ಪರಂಪರೆಯನ್ನು ರಕ್ಷಿಸಿ ಕಾನೂನುಬದ್ಧ ಆಡಳಿತವನ್ನು ಸ್ಥಾಪಿಸಬೇಕು. ಅಂತಹ ಒತ್ತಡ ಹಾಕಿದವರ ಮೇಲೆ, ಮುಸ್ಲಿಮರಿಗೆ ವ್ಯಾಪಾರ ಮಾಡಲು ಅವಕಾಶ ನಿರಾಕರಿಸಿದ ತೀರ್ಮಾನ ಮಾಡಿದವರ ಮೇಲೆ ಕಠಿಣ ಕ್ರಮ ಜರುಗಿಸಬೇಕು. ದೇವಸ್ಥಾನದ ಅಭಿವೃದ್ಧಿ ಮಂಡಳಿಯಲ್ಲಿ ಪದಾಧಿಕಾರಿಗಳು ಆಗುವುದು ಅದರ ಅಭಿವೃದ್ಧಿಗೆ ಹೊರತು ವಿಭಜಕದ ಬಿಜೆಪಿ ರಾಜಕಾರಣದ ನಿರ್ವಹಣೆಗೆ ಅಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು. ಈ ಕೂಡಲೇ ಸರಕಾರ ಎಲ್ಲರಿಗೂ ಮುಕ್ತವಾಗಿ ವ್ಯಾಪಾರ ವಹಿವಾಟು ನಡೆಸಲು ಅವಕಾಶ ಕಲ್ಪಿಸಲಿ. ಸಮಾಜದ ಜನತೆಯು ಸಾಮರಸ್ಯ, ಸೌಹಾರ್ದತೆ ಹಾಳುಮಾಡುವ ಕೃತ್ಯಗಳನ್ನು ಅಮಾನವೀಯ ನಡೆಗಳನ್ನು ತಡೆಯಲು ಮುಂದಾಗಲಿ.

ತಾರತಮ್ಯವಿಲ್ಲದ ಸಾರ್ವತ್ರಿಕ ಶಿಕ್ಷಣದ ಹಕ್ಕಿಗೆ ಹೊಡೆತ, ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪು–ಸಿಪಿಐ(ಎಂ)

ತರಗತಿಗಳಲ್ಲಿ ಹಿಜಾಬ್ ಅಥವಾ ಶಿರವಸ್ತ್ರ ಬಳಕೆಯನ್ನು ನಿಷೇಧಿಸುವ ಕರ್ನಾಟಕ ಸರಕಾರದ ಆದೇಶವನ್ನು ಎತ್ತಿ ಹಿಡಿದಿರುವ ರಾಜ್ಯ ಉಚ್ಚ ನ್ಯಾಯಾಲಯದ ತೀರ್ಪು ದುರದೃಷ್ಟಕರವಾದುದಾಗಿದೆ.

ಇದು ಜನತೆಯು ತಾರತಮ್ಯವಿಲ್ಲದೆ ಸಾರ್ವತ್ರಿಕ ಶಿಕ್ಷಣ ಪಡೆಯುವ ಹಕ್ಕಿಗೆ ಹೊಡೆತ ನೀಡಲಿದೆ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ತನ್ನ ಆತಂಕವನ್ನು ವ್ಯಕ್ತ ಪಡಿಸಿದೆ.

ಯಾವುದೇ ತಾರತಮ್ಯವಿಲ್ಲದೆ ಶಿಕ್ಷಣ ಪಡೆಯುವ ಹಕ್ಕು ಭಾರತದ ಸಂವಿಧಾನವು ಖಾತರಿಗೊಳಿಸಿರುವ ಹಕ್ಕಾಗಿದೆ. ಈ ತೀರ್ಪಿನಲ್ಲಿ, ಇದನ್ನು ಖಾತ್ರಿಗೊಳಿಸದ ಹಲವು ಪ್ರಶ್ನಾರ್ಹ ಆಯಾಮಗಳಿವೆ. ತರಗತಿಗಳಲ್ಲಿ ಹಿಜಾಬ್ ಬಳಕೆಯನ್ನು ನಿಷೇಧಿಸುವ ಕರ್ನಾಟಕ ಸರ್ಕಾರದ ದೋಷಪೂರ್ಣವೆಂದೇ ಹೇಳಬಹುದಾದ ಆದೇಶವನ್ನು ಹೈಕೋರ್ಟ್ ಎತ್ತಿ ಹಿಡಿದಿರುವುದರ ತಕ್ಷಣದ ಪರಿಣಾಮವೆಂದರೆ, ಇದು ರಾಜ್ಯದ ಶಿಕ್ಷಣ ಸಂಸ್ಥೆಗಳಿಂದ ಮುಸ್ಲಿಂ ಯುವತಿಯರನ್ನು ಗಣನೀಯವಾಗಿ ಹೊರದಬ್ಬುತ್ತದೆ.

ಭಾರತದ ಹಲವು ರಾಜ್ಯಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಧರಿಸುವ ಶಿರವಸ್ತ್ರವನ್ನು ಶಾಲೆಗಳು ಮತ್ತು ಕಾಲೇಜುಗಳಲ್ಲಿ ಎಂದೂ ಕೂಡಾ, ಸಾಮಾನ್ಯ ಸಮವಸ್ತ್ರದ ನಿಯಮದ ಉಲ್ಲಂಘನೆ ಎಂದು ಪರಿಗಣಿಸಲಾಗಿಲ್ಲ. ಇದಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ, ನೆರೆಯ ಕೇರಳ. ಅಲ್ಲಿನ ಶಾಲೆಗಳಲ್ಲಿ, ಉನ್ನತ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಮುಸ್ಲಿಂ ಹುಡುಗಿಯರು ಹೆಚ್ಚಿನ ಸಂಖ್ಯೆಯಲ್ಲಿ ಓದುತ್ತಿರುವ ದಾಖಲೆಯನ್ನು ಕಾಣಬಹುದು. ಕರ್ನಾಟಕ ಸರ್ಕಾರವು ಕೇರಳದ ರೀತಿಯಲ್ಲಿ ಕ್ರಮವಹಿಸುವುದು ಅಗತ್ಯವಿದೆ.

ಹಿಜಾಬ್ ಧರಿಸುವುದು ಅಥವಾ ಧರಿಸದಿರುವುದನ್ನು ವಿದ್ಯಾರ್ಥಿಗಳ ಆಯ್ಕೆಗೆ ಬಿಟ್ಟಿದ್ದರೆ ಉತ್ತಮವಾಗಿತ್ತು. ಮತೀಯ ಆಚರಣೆಗಳನ್ನು ನಿರ್ದಿಷ್ಟ ಸಂಹಿತೆಯ ವ್ಯಾಪ್ತಿಗೆ ಒಳಪಡಿಸುವುದರಿಂದ, ನೇರವಾಗಿ ಒಂದು ಫಲಿತಾಂಶ ನೀಡಿದರೆ, ಪರೋಕ್ಷವಾಗಿ ಮತ್ತೊಂದು ಫಲಿತಾಂಶವನ್ನು ನೀಡಬಹುದು. ಇದು ದೀರ್ಘಾವಧಿಯಲ್ಲಿ ಬೇರೆ ಬೇರೆ ಸಮಸ್ಯೆಗಳನ್ನು ಸೃಷ್ಟಿಸಬಹುದು.

ಹೈಕೋರ್ಟ್ ತೀರ್ಪು ಬಂದ ನಂತರ ರಾಜ್ಯದಲ್ಲಿನ ಪ್ರತಿಕ್ರಿಯೆಗಳನ್ನು ಗಮನಿಸಿದರೆ, ಪ್ರತ್ಯಕ್ಷವಾಗಿಯೋ, ಅಪ್ರತ್ಯಕ್ಷವಾಗಿಯೋ ಕೋಮುವಾದಿ ಮತ್ತು ಮತಾಂಧ ಶಕ್ತಿಗಳಿಗೆ ಕುಮ್ಮಕ್ಕು ದೊರೆತಂತೆ ಭಾಸವಾಗುತ್ತದೆ. ಇದು ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದಲ್ಲ.

ಈ ಹಿನ್ನೆಲೆಯಲ್ಲಿ, ಹೈಕೋರ್ಟ್ ತೀರ್ಪಿನ ವಿರುದ್ಧ ಸಲ್ಲಿಕೆಯಾಗಿರುವ ಮೇಲ್ಮನವಿಗಳ ವಿಚಾರದಲ್ಲಿ ದೇಶದ ಸರ್ವೋಚ್ಚ ನ್ಯಾಯಾಲಯ ಕೂಡಲೇ ಮದ್ಯಪ್ರವೇಶಿಸಿ, ತಾರತಮ್ಯವಿಲ್ಲದ ಸಾರ್ವತ್ರಿಕ ಶೈಕ್ಷಣಿಕ ಹಕ್ಕನ್ನು ಖಾತರಿ ಪಡಿಸುವಂತೆ ಕ್ರಮವಹಿಸುತ್ತದೆಂದು ಸಿಪಿಐ(ಎಂ) ಆಶಿಸಿದೆ.

ರಾಜ್ಯದ ಶಾಂತಿ ಸೌಹಾರ್ಧತೆ ಕಾಪಾಡಲು ಹಾಗೂ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಪರೀಕ್ಷೆಗಳಲ್ಲಿ ಭಾಗಿಯಾಗಲು ಸಾಧ್ಯವಾಗುವಂತೆ ಅಗತ್ಯ ಕ್ರಮವಹಿಸುವಂತೆ ಸಿಪಿಐ(ಎಂ) ಮನವಿ

ಹೈಕೋರ್ಟ್ ತೀರ್ಪಿನಿಂದ ಅಲ್ಪಸಂಖ್ಯಾತ ಸಮುದಾಯ ಮತ್ತು ಮುಸ್ಲಿಂ ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗಿದ್ದಾರೆ. ಮಾತ್ರವಲ್ಲ, ಹಿಜಾಬ್ ಧರಿಸಿ ಶಾಲಾ – ಕಾಲೇಜುಗಳಿಗೆ ತೆರಳುವುದನ್ನು ಮುಂದುವರೆಸಿದ್ದಾರೆ. ರಾಜ್ಯದಾದ್ಯಂತ ಹಲವೆಡೆ ಶಾಲಾ – ಕಾಲೇಜು ಆಡಳಿತ ಮಂಡಳಿಗಳು ಅವರು ತರಗತಿಗಳಿಗೆ ಹಾಜರಾಗದಂತೆ ತಡೆಯುವುದು ಮುಂದುವರೆಯುತ್ತಿದೆ. ತೀರ್ಪು ಉಂಟು ಮಾಡಿದ ಅಸಮಾಧಾನವು ರಾಜ್ಯದ ಅಲ್ಪ ಸಂಖ್ಯಾತ ವಲಯದಲ್ಲಿ ಮೌನ ಪ್ರತಿಭಟನೆ ಹಾಗೂ ವ್ಯಾಪಾರ ವಹಿವಾಟು ನಿಲ್ಲಿಸುವ ಪ್ರತಿಭಟನೆಗೆ ಕಾರಣವಾಗಿದೆ ಎಂದಿದೆ.

ಇದೇ ಸಂದರ್ಭದಲ್ಲಿ ಕೆಲವು ಮತಾಂಧ ಶಕ್ತಿಗಳು ಈ ತೀರ್ಪಿನಿಂದ ಮುಸ್ಲಿಂ ವಿದ್ಯಾರ್ಥಿನಿಯರ ತಾರತಮ್ಯವಿಲ್ಲದ ಸಾರ್ವತ್ರಿಕ ಶಿಕ್ಷಣದ ಹಕ್ಕಿಗೆ ಉಂಟಾದ ಧಕ್ಕೆಯನ್ನು ಗಮನಿಸದೆ, ತಮಗೆ ಸಿಕ್ಕ ಜಯವೆಂಬಂತೆ ಬಿಂಬಿಸಿಕೊಳ್ಳುತ್ತಿರುವುದು ಆತಂಕದ ವಿಚಾರವಾಗಿದೆ ಎಂದಿದೆ.

ಈ ಎಲ್ಲವೂ ರಾಜ್ಯದೊಳಗೆ ಮತಾಂಧತೆ ಬೆಳೆಯಲು ಮತ್ತು ಸೌಹಾರ್ಧತೆಯ ವಾತಾವರಣವನ್ನು ದುರ್ಬಲಗೊಳಿಸುವ ಅವಕಾಶಗಳನ್ನು ಹೆಚ್ಚು ಮಾಡಿವೆ ಎಂದಿದೆ.

ಈ ಸಂದರ್ಭದಲ್ಲಿ ಪರ–ವಿರೋಧದ ಚಟುವಟಿಕೆಗಳು ಜಾತ್ಯತೀತ ಪರಂಪರೆಗೆ ಭಂಗ ಉಂಟು ಮಾಡುತ್ತವೆ ಮತ್ತು ಜಾತ್ಯಾತೀತ ಶಕ್ತಿಗಳು ದುರ್ಬಲಗೊಳ್ಳುವುದಕ್ಕೆ ಕಾರಣವಾಗುತ್ತವೆ.

ಈ ಹಿನ್ನೆಲೆಯಲ್ಲಿ, ಮೇಲ್ಮನವಿ ಮೂಲಕ ಈ ವಿಚಾರವು ಸರ್ವೋಚ್ಚ ನ್ಯಾಯಾಲಯ ವ್ಯಾಪ್ತಿಗೆ ಸೇರಿರುವುದರಿಂದ ಅದರ ತೀರ್ಪಿಗಾಗಿ ಕಾಯುತ್ತಾ, ರಾಜ್ಯದೊಳಗೆ ಶಾಂತಿ ಹಾಗೂ ಸೌಹಾರ್ಧತೆಯನ್ನು ಬಲಗೊಳಿಸಲು ಅಗತ್ಯ ಕ್ರಮವಹಿಸುವಂತೆ, ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿಯು, ರಾಜ್ಯದ ನಾಗರೀಕರು, ಅಲ್ಪ ಸಂಖ್ಯಾತರು, ಜಾತ್ಯಾತೀತ ಶಕ್ತಿಗಳು ಮತ್ತು ಸಮಸ್ಥ ವಿದ್ಯಾರ್ಥಿ ಸಮುದಾಯಗಳಲ್ಲಿ ಮನವಿ ಮಾಡಿದೆ.

ಅದೇ ರೀತಿ, ರಾಜ್ಯ ಸರಕಾರವು ರಾಜ್ಯದ ಶಾಂತಿ ಸೌಹಾರ್ಧತೆಗೆ ಪೂರಕವಾಗಿ ಎಲ್ಲರ ವಿಶ್ವಾಸವನ್ನು ಪಡೆಯಲು ಮತ್ತು ಮುಸ್ಲಿಂ ವಿದ್ಯಾರ್ಥಿನಿಯರು ತಮ್ಮ ತರಗತಿಗಳ ಪರೀಕ್ಷೆಗಳಲ್ಲಿ ಪಾಲ್ಗೊಂಡು ತಮ್ಮ ಶೈಕ್ಷಣಿಕ ಹಕ್ಕನ್ನು ಪಡೆಯುವಂತೆ ಅಗತ್ಯವಾದ ವಾತಾವರಣವನ್ನು ನಿರ್ಮಿಸಲು ಕ್ರಮವಹಿಸುವಂತೆ ಒತ್ತಾಯಿಸಿದೆ.

ಎಲ್ಲ ಮುಸ್ಲಿಂ ಬಾಂಧವರು, ಹಿರಿಯರು, ಧಾರ್ಮಿಕ ಸಂಸ್ಥೆಗಳು, ತಂದೆ, ತಾಯಿಗಳು, ಪೋಷಕರು ಒಟ್ಟಾಗಿ, ಸರ್ವೋಚ್ಚ ನ್ಯಾಯಾಲಯದ ತೀರ್ಪಿಗಾಗಿ ಕಾಯುತ್ತಲೇ, ಎಲ್ಲ ವಿದ್ಯಾರ್ಥಿನಿಯರು ವಿದ್ಯಾಭ್ಯಾಸದಲ್ಲಿ ತೊಡಗುವಂತೆ ಮತ್ತು ಅವರು ಪರೀಕ್ಷೆ ಬರೆದು ಶಿಕ್ಷಣವನ್ನು ಪೂರೈಸುವಂತೆ ಸೂಕ್ತ ಕ್ರಮವಹಿಸಲು ಸಿಪಿಐ(ಎಂ) ಮನವಿ ಮಾಡಿದೆ.

ಕರಾವಳಿ ಕಾಲೇಜ್ ವಿದ್ಯಾರ್ಥಿ ಭರತ್ ಭಾಸ್ಕರ್ ಆತ್ಮಹತ್ಯೆ–ಆಡಳಿತ ಮಂಡಳಿ ವಿರುದ್ದ ಸೂಕ್ತ ಕ್ರಮಕ್ಕೆ ಒತ್ತಾಯ–ಎಸ್.ಎಫ್.ಐ



ಮಂಗಳೂರು ನಗರದ ಕರಾವಳಿ ಕಾಲೇಜು ವಿದ್ಯಾರ್ಥಿ ಭರತ್ ಭಾಸ್ಕರ್ ಎಂಬಾತ ಕಾಲೇಜು ಸಮಸ್ಯೆಗಳಿಂದ ಮನನೊಂದು ತನ್ನ ಸಾವಿಗೆ ಕಾಲೇಜಿನ ಅವ್ಯವಸ್ಥೆಯೇ ಕಾರಣವೆಂದು ಪತ್ರ ಬರೆದು ಆತ್ಮಹತ್ಯೆ ನಡೆಸಿರುವ ಪ್ರಕರಣವನ್ನು ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಿ ಸಮಗ್ರ ತನಿಖೆ ನಡೆಸಬೇಕು ಹಾಗೂ ಕಾಲೇಜು ಆಡಳಿತ ಮಂಡಳಿಯ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಶನ್ ಖಈಖ ದ.ಕ ಜಿಲ್ಲಾ ಸಮಿತಿಯು ಮಾನ್ಯ ಜಿಲ್ಲಾಧಿಕಾರಿಯವರಿಗೆ ಮತ್ತು ಮಂಗಳೂರು ನಗರ ಪೋಲೀಸ್ ಆಯುಕ್ತರಿಗೆ ಮನವಿಯನ್ನು ಸಲ್ಲಿಸಿ ಒತ್ತಾಯಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯು ಒಂದು ಪ್ರಮುಖ ಶಿಕ್ಷಣ ಕೇಂದ್ರವಾಗಿದೆ. ಇಲ್ಲಿಗೆ ಹೊರ ಜಿಲ್ಲೆ ಮತ್ತು ಹೊರ ರಾಜ್ಯಗಳಿಂದಲೂ ಶಿಕ್ಷಣ ಪಡೆಯಲು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ. ಆದರೆ ಇಲ್ಲಿನ ಬಹುತೇಕ ಖಾಸಗೀ ಶಿಕ್ಷಣ ಸಂಸ್ಥೆಗಳು ಸರಕಾರದ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ದುಬಾರಿ ಶುಲ್ಕವನ್ನು ವಸೂಲಿ ಮಾಡುವ ಮೂಲಕ ವಿದ್ಯಾರ್ಥಿಗಳನ್ನು ಸುಲಿಗೆ ನಡೆಸುತ್ತಿವೆ. ಈ ರೀತಿ ಶುಲ್ಕದ ಹೆಸರಿನಲ್ಲಿ ಸುಲಿಗೆ, ಸರಿಯಾದ ಸಂಖ್ಯೆಯ ಶಿಕ್ಷಕರನ್ನು ನೇಮಿಸದೆ ಇರುವ ಶಿಕ್ಷಕರಿಗೆ ತಿಂಗಳ ವೇತನವನ್ನೂ ನೀಡದೆ ಸತಾಯಿಸುವುದು, ಕೊಠಡಿಗಳ ಕೊರತೆ ಹೀಗೆ ಮೊದಲಾದ ಸಮಸ್ಯೆಗಳು ವಿದ್ಯಾರ್ಥಿಗಳನ್ನು ಗುಣಮಟ್ಟದ ಶಿಕ್ಷಣದಿಂದ ವಂಚಿಸುತ್ತಿವೆ. ಇದರಿಂದ ವಿದ್ಯಾರ್ಥಿಗಳ ಫಲಿತಾಂಶ ಮತ್ತು ಅವರ ಭವಿಷ್ಯಕ್ಕೆ ತೊಡಕಾಗುತ್ತಿದ್ದು ಇಂತಹ ಗಂಭೀರ ಸಮಸ್ಯೆಗಳು ಅವರ ಮಾನಸಿಕ ಸ್ಥಿತಿಯನ್ನು ಕುಗ್ಗಿಸುವುದರಿಂದ ಕೆಲವೊಂದು ವಿದ್ಯಾರ್ಥಿಗಳು ಖಿನ್ನತೆಗೊಳಗಾಗಿ ಆತ್ಮಹತ್ಯೆಯಂತಹ ಕೆಲಸಗಳಿಗೆ ಪ್ರೇರೇಪಿಸುತ್ತಿದ್ದೆ. ಈಗಾಗಲೇ ಮಂಗಳೂರಿನ ಬಹುತೇಕ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸಾಲು ಸಾಲು ಶೈಕ್ಷಣಿಕ ಹತ್ಯೆಗಳು ನಡೆದಿದ್ದು ಈ ಕುರಿತು ಜಿಲ್ಲಾಡಳಿತವಾಗಲಿ, ಶಿಕ್ಷಣ ಇಲಾಖೆಯಾಗಲಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸದೆ ಜಾಣ ಮೌನ ವಹಿಸುವ ಮೂಲಕ ಖಾಸಗೀ ಶಿಕ್ಷಣ ಸಂಸ್ಥೆಗಳ ಒಡೆಯರ ಹಿತವನ್ನು ರಕ್ಷಿಸುತ್ತಿದೆ.

ಈ ಎಲ್ಲಾ ಹಿನ್ನಲೆಯಲ್ಲಿ ಜಿಲ್ಲಾಡಳಿತವು ಮಂಗಳೂರಿನ ಖಾಸಗೀ ಶಿಕ್ಷಣ ಸಂಸ್ಥೆಗಳಲ್ಲಿ ನಡೆಯುವ ಶೈಕ್ಷಣಿಕ ಹತ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಈವರೆಗು ಶಿಕ್ಷಣ ಸಂಸ್ಥೆಗಳಲ್ಲಿ ನಡೆದಿರುವ ಎಲ್ಲಾ ಆತ್ಮಹತ್ಯೆ ಪ್ರಕರಣಗಳನ್ನು ತನಿಖೆಗೆ ಒಳಪಡಿಸಬೇಕು. ವಿದ್ಯಾರ್ಥಿಗಳ ಆತ್ಮಹತ್ಯೆಗೆ ಪ್ರಚೋದಿಸುವ ಹಿಂದಿರುವ ನೈಜ ಕಾರಣಗಳನ್ನು ಪತ್ತೆಹಚ್ಚಬೇಕು ಮತ್ತು ಅವರ ಸಾವಿಗೆ ಕಾರಣರಾದ ಕಾಲೇಜು ಆಡಳಿತ ಮಂಡಳಿಯ ವಿರುದ್ದ ಕಠಿಣ ಕಾನೂನು ಕ್ರಮಕೈಗೊಳ್ಳಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಶನ್ ಎಸ್‌ಎಫ್‌ಐ ದ.ಕ. ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಪರವಾದ ಕೃಷಿ ಹಾಗೂ ಕಾರ್ಮಿಕ ಸಂಹಿತೆಗಳು ಮತ್ತು ಎನ್‌ಇಪಿ ವಾಪಾಸು ಪಡೆಯಲು

ಎಡ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ಏಳು ಪಕ್ಷಗಳ ಒತ್ತಾಯ:

ದೇಶದಾದ್ಯಂತ ಮತ್ತು ದೆಹಲಿ ಸುತ್ತ–ಮುತ್ತ ನಡೆದ ಮಿಲಿಯಾಂತರ ರೈತ ಹಾಗೂ ಕಾರ್ಮಿಕರ ಸಮರ ಶೀಲ ಮತ್ತು ಐತಿಹಾಸಿಕ ಹೋರಾಟದ ಒತ್ತಾಯಕ್ಕೆ ಮಣಿದು ಒಕ್ಕೂಟ ಸರಕಾರದ ಪ್ರಧಾನ ಮಂತ್ರಿ ಜಗತ್ತಿನ ಮುಂದೆ ಮಂಡಿಯೂರಿ ಕೈ ಮುಗಿದು ಲೂಟಿ ಕೋರ ಕಾರ್ಪೊರೇಟ್ ಕಂಪನಿಗಳ ಪರವಾದ ಕೃಷಿ ಕಾಯ್ದೆಗಳನ್ನು ವಾಪಾಸು ಪಡೆದರು.

ಆದರೇ, ಕರ್ನಾಟಕ ಸರಕಾರ ಅವುಗಳ ಜಾರಿಗಾಗಿ ಕ್ರಮವಹಿಸಿದ ಭೂಸುಧಾರಣಾ ತಿದ್ದುಪಡಿ ಕಾಯ್ದೆ–2020, ಎಪಿಎಂಸಿ ತಿದ್ದುಪಡಿ ಕಾಯ್ದೆ–2020 ಹಾಗೂ ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ–2020 ಇವುಗಳನ್ನು ವಾಪಾಸು ಪಡೆಯದೇ ಜನ ವಿರೋಧಿ ನೀತಿಗಳನ್ನು ಮುಂದುವರೆಸುತ್ತಿದೆ. ಅದೇ ರೀತಿ, ಕಾರ್ಮಿಕರು ಕಳೆದ ಒಂದು ಶತಮಾನದಿಂದ ಹೋರಾಡಿ ಗಳಿಸಿದ ಅವುಗಳ ಹಕ್ಕುಗಳನ್ನು ಮೊಟಕು ಮಾಡಿ ಕಾರ್ಪೋರೇಟ್ ಗುಲಾಮಿಕೆಗೆ ತೆರೆಯುವ ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತರಲು ಕ್ರಮವಹಿಸುತ್ತಿದೆ.

ಅದೇ ರೀತಿ, ಬಡವರು, ದಲಿತರು ಶೂದ್ರರು ಮತ್ತು ಮಹಿಳೆಯರಿಗೆ ಶಿಕ್ಷಣ ನಿರಾಕರಿಸುವ, ಮತಾಂಧತೆಗೆ ಕುಮ್ಮಕ್ಕು ನೀಡುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ವ್ಯಾಪಕವಾಗಿ ಜಾರಿಗೊಳಿಸುತ್ತಿದೆ.

ಇನ್ನೊಂದೆಡೆ, ಬಡತನ ಹಾಗೂ ನಿರುದ್ಯೋಗ ಮತ್ತು ಸಾಮಾಜಿಕ ಸಂಕಷ್ಟಗಳು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಸರ್ಕಾರದ ವೆಚ್ಚವನ್ನು ಕಡಿತಗೊಳಿಸಿ, ಜನರ ಒಳಿತಿಗಾಗಿ ಹಣವನ್ನು ಬಳಸುವ ಬದಲು ಶಾಸಕರ ಹಾಗೂ ಸಚಿವರ ವೇತನಗಳನ್ನು ಅತಿಯಾಗಿ ಹೆಚ್ಚಿಸಲು ಮತ್ತು ಕೋಮುವಾದ ಹಾಗೂ ಜಾತಿವಾದಕ್ಕೆ ಕುಮ್ಮಕ್ಕು ನೀಡಲು ದುರ್ಬಳಕೆ ಮಾಡಲಾಗುತ್ತಿದೆ. ಜನತೆಯ ಮೇಲೆ ಭಾರಿ ಸಾಲದ ಹೊರೆಯನ್ನು ಬಜೆಟ್ ಮೂಲಕ ಹೇರಲಾಗಿದೆ.

ಸಾರ್ವಜನಿಕ ರಂಗದ ಉದ್ದಿಮೆಗಳನ್ನು ಖಾಸಗೀಕರಿಸುವ ಕೆಲಸವು ಒಂದೆಡೆ ಉದ್ಯೋಗಾವಕಾಶಗಳನ್ನು ಕಡಿತಗೊಳಿಸಿದರೇ ಸಾಮಾಜಿಕ ನ್ಯಾಯದ ಭಾಗವಾಗಿ ದಲಿತರು, ಹಿಂದುಳಿದವರು ಮಹಿಳೆಯರು ಮತ್ತಿತರೆ ಸಮುದಾಯಗಳಿಗೆ ದೊರೆಯುತ್ತಿದ್ದ ಮೀಸಲಾತಿಯನ್ನು ನಾಶ ಮಾಡಲಾಗುತ್ತಿದೆ.

ಅದು ಮಾತ್ರವೇ ಅಲ್ಲಾ! ಹಿಜಾಬ್ ವಿವಾದವನ್ನು ದೇಶದ ಇತರೆ ರಾಜ್ಯಗಳ ಅನುಭವದಂತೆ ಅದನ್ನು ಸೌಹಾರ್ಧಯುತವಾಗಿ ಪರಿಹರಿಸಿ ತಾರತಮ್ಯವಿಲ್ಲದ ಸಾರ್ವತ್ರಿಕ ಶಿಕ್ಷಣದ ಹಕ್ಕನ್ನು ಖಾತರಿಪಡಿಸದೇ ಮುಸ್ಲಿಂ ವಿದ್ಯಾರ್ಥಿನಿಯರು ಶಿಕ್ಷಣ ಮುಂದುವರೆಸಲಾಗದಂತಹ ದುಸ್ಥಿತಿ ನಿರ್ಮಿಸಿದೆ. ಅದೇ ರೀತಿ, ಜನತೆಯನ್ನು ಧರ್ಮದ ಹಾಗೂ ಜಾತಿಯ ಆಧಾರದಲ್ಲಿ ಒಡೆದಾಳಲು ನೆರವು ನೀಡುವ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆಯ ವಿಧೇಯಕವನ್ನು ಜಾರಿಗೊಳಿಸಲು ಮುಂದಾಗುತ್ತಿದೆ.

ರಾಜ್ಯ ಸರಕಾರದ ಈ ಎಲ್ಲಾ ದುರ್ನಡೆಗಳನ್ನು ಎಡ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ಏಳು ಪಕ್ಷಗಳು ಬಲವಾಗಿ ಖಂಡಿಸುತ್ತವೆ ಮತ್ತು ಈ ಕೂಡಲೇ ಈ ಎಲ್ಲಾ ಲೂಟಿ ಕೋರ ಕಾರ್ಪೊರೇಟ್ ಕಂಪನಿಗಳ ಪರವಾದ, ಜನವಿರೋಧಿ ಕಾಯ್ದೆಗಳನ್ನು ವಾಪಾಸು ಪಡೆಯುವಂತೆ ಮರಳಿ ಒತ್ತಾಯಿಸಿದೆ.

ಸಂಯುಕ್ತ ಹೋರಾಟ – ಕರ್ನಾಟಕ ಪ್ರತಿಭಟನೆ ಯಶಸ್ವಿಗೆ ಕರೆ:

ಸದರಿ ಕಾಯ್ದೆಗಳನ್ನು ವಾಪಾಸು ಪಡೆಯುವಂತೆ ಒತ್ತಾಯಿಸಿ ಮತ್ತು ರೈತರು, ಕೂಲಿಕಾರರು, ಕಾರ್ಮಿಕರು, ದಲಿತರು ಹಾಗೂ ಮಹಿಳೆಯರ ಹಿತ ರಕ್ಷಿಸುವಂತಹ ಹಕ್ಕೊತ್ತಾಯಗಳನ್ನು ಮಂಡಿಸಿ ರಾಜ್ಯ ಸರಕಾರದ ವಿರುದ್ದ ರಾಜ್ಯದ 50 ಕ್ಕು ಅಧಿಕ ಎಡ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ಸಂಘ ಸಂಸ್ಥೆಗಳು ಒಗ್ಗೂಡಿ ರಚಿಸಿಕೊಂಡ ಸಂಯುಕ್ತ ಹೋರಾಟ – ಕರ್ನಾಟಕವು ಇದೆ 21.03.2022 ರಂದು ನಡೆಸಲಿರುವ ವಿಧಾನ ಸೌಧದ ಮುಂದಿನ ಬೃಹತ್ ಪ್ರತಿಭಟನಾ ಮೆರವಣಿಗೆ ಹಾಗೂ ಬಹಿರಂಗ ಸಭೆಯನ್ನು ನಡೆಸಲು ನಿರ್ಧರಿಸಿದೆ. ಸದರಿ ಪ್ರತಿಭಟನಾ ಕಾರ್ಯಕ್ರಮವನ್ನು ಎಡ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ಏಳು ಪಕ್ಷಗಳು ಬೆಂಬಲಿಸುತ್ತವೆ ಮಾತ್ರವಲ್ಲಾ, ಅದರ ಯಶಸ್ವಿಗಾಗಿ ನಮ್ಮ ಕಾರ್ಯಕರ್ತರು ಶ್ರಮಿಸಬೇಕೆಂದು ಕರೆ ನೀಡಿವೆ.

ಅದೇ ರೀತಿ, ರಾಜ್ಯದ ನಾಗರೀಕರು ದೊಡ್ಡ ಪ್ರಮಾಣದಲ್ಲಿ ಭಾಗವಹಿಸುವ ಮೂಲಕ ಯಶಸ್ವಿಗೊಳಿಸಲು ಮತ್ತು ಜನ ವಿರೋಧಿ ನೀತಿಗಳನ್ನು ಪ್ರತಿರೋಧಿಸಲು ಕರೆ ನೀಡಿದೆ.



ಹಿಜಾಬ್ ತೀರ್ಪು – ತಪ್ಪು ಪ್ರಶ್ನೆ ಕೇಳಿ ತಪ್ಪು ಉತ್ತರ ಪಡೆದ ಪ್ರಸಂಗ

ಒಂದು ಕೋರ್ಟು ನೀಡುವ ತೀರ್ಪಿನ ಉದ್ದೇಶವು ಎರಡು ಕಕ್ಷಿಗಳ ನಡುವಿನ ವಿವಾದದ ಸಂದರ್ಭದಲ್ಲಿ ಏಳುವ ಪ್ರಶ್ನೆಗಳಿಗೆ ಸರಿಯಾದ ಉತ್ತರ ಕೊಡುವುದಾಗಬೇಕು. ಆದ್ದರಿಂದ, ಕೋರ್ಟು ತೀರ್ಪಿನಲ್ಲಿ, ಉತ್ತರ ಮಾತ್ರವೇ ಅಲ್ಲ, ಪ್ರಶ್ನೆಯನ್ನು ಹೇಗೆ ರೂಪಿಸಲಾಗಿದೆ ಎನ್ನುವುದು ಬಹು ಮುಖ್ಯವಾದ ಅಂಶಗಳಲ್ಲಿ ಒಂದಾಗುತ್ತದೆ. ಪ್ರಶ್ನೆಯನ್ನು ರೂಪಿಸುವಾಗ ತಪ್ಪು ದಾರಿ ಹಿಡಿದರೆ ತೀರ್ಪು ಕೂಡ ಖಂಡಿತವಾಗಿ ತಪ್ಪು ದಾರಿ ಹಿಡಿಯುತ್ತದೆ. ಒಂದು ಹಳೆಯ ಗಾದೆ ಇದೆ: "ತಪ್ಪು ಪ್ರಶ್ನೆ ಕೇಳು, ನಿನಗೆ ತಪ್ಪು ಉತ್ತರ ಸಿಗುತ್ತದೆ". ಹಿಜಾಬ್ ಕುರಿತ ಹೈಕೋರ್ಟ್ ತೀರ್ಪಿನ ಕುರಿತು ಒಂದು ವಿಶ್ಲೇಷಣೆ, ಸೂರ್ಯ ಅವರಿಂದ.

ಶಾಲೆಗಳಲ್ಲಿ ಹಿಜಾಬ್ ಧರಿಸುವುದನ್ನು ನಿಷೇಧ ಮಾಡಿದ ಸರ್ಕಾರದ ಆದೇಶ ಯುಕ್ತವೇ ಎಂಬ ಪ್ರಶ್ನೆಯನ್ನು ನಿರ್ಧರಿಸುವಾಗ, ಕರ್ನಾಟಕ ಉಚ್ಚ ನ್ಯಾಯಾಲಯವು ನಾಲ್ಕು ಪ್ರಶ್ನೆಗಳನ್ನು ರೂಪಿಸಿತು. ಅವು ಹೀಗಿವೆ: (1)ಹಿಜಾಬ್/ಶಿರವಸ್ತ್ರ ಧರಿಸುವುದು ಇಸ್ಲಾಮಿನ ನಂಬಿಕೆಯಡಿ "ಅತ್ಯಗತ್ಯ ಧಾರ್ಮಿಕ ಆಚರಣೆ'ಯ ಭಾಗವೆಂದು ಸಂವಿಧಾನದ 25 ನೇ ಪರಿಚ್ಛೇದದ ಅಡಿಯಲ್ಲಿ ರಕ್ಷಣೆ ಪಡೆದಿದೆಯೇ? (2) ಶಾಲಾ ಸಮವಸ್ತ್ರ ಧರಿಸಬೇಕೆಂದು ವಿಧಿಸುವುದು ಕಾನೂನುಬದ್ಧವಾಗಿದೆಯೇ, ಅರ್ಜಿದಾರರ ಮೂಲಭೂತ ಹಕ್ಕುಗಳ ಉಲ್ಲಂಘನೆಯಲ್ಲವೇ? (3) ದಿನಾಂಕ 05.02.2022 ರ ಸರ್ಕಾರದ ಆದೇಶವು ಅನುಚಿತವಾದದ್ದಷ್ಟೇ ಅಲ್ಲ ವಿವೇಚನೆಯಿಲ್ಲದೇ ಪ್ರಕಟಿಸಲಾಗಿದೆಯೇ ಮತ್ತು ಅದೂ ಅಲ್ಲದೇ ಸ್ಪಷ್ಟವಾಗಿ ಇಚ್ಛಾನುಸಾರವಾಗಿದೆಯೇ ಮತ್ತು ಆದಕಾರಣ, ಸಂವಿಧಾನದ ಪರಿಚ್ಛೇದ 14 ಮತ್ತು 15 ರ ಉಲ್ಲಂಘನೆಯಾಗಿದೆಯೇ? ಮತ್ತು (4) W.P.No.2146/2022 ಅರ್ಜಿಯಲ್ಲಿ ಹಿಜಾಬ್ ನಿಷೇಧ ವಿಧಿಸಿದ ಹಾಗೂ ಬಲವಂತ ಮಾಡಿದ ನಿರ್ದಿಷ್ಟ ಶಾಸಕರು ಮತ್ತು ಕಾಲೇಜು ಅಭಿವೃದ್ಧಿ ಸಮಿತಿಯ ಇತರ ಸದಸ್ಯರ ವಿರುದ್ಧ ಶಿಸ್ತು ಕ್ರಮ ವಹಿಸಲು ತನಿಖೆ ಮಾಡಬೇಕೆಂಬ ನಿರ್ದೇಶನ ನೀಡುವಂತೆ ಕೋರಿ ಸಮಂಜಸವಾದ ವಾದ ಮಾಡಲಾಗಿದೆಯೇ?

ಹಿಜಾಬ್ ನಿಷೇಧಿಸಲು ಕಾರಣವೇನು? ಯಾವ ವಿಷಯವನ್ನು ನಿರ್ಧರಿಸಲು ಕೋರ್ಟನ್ನು ಕೋರಲಾಗಿದೆ?

ತೀರ್ಪಿನಲ್ಲಿ 1 ಮತ್ತು 3 ನೇ ಪ್ರಶ್ನೆಗಳಿಗೆ ನೀಡಿದ ಉತ್ತರಗಳ ವಿಶ್ಲೇಷಣೆಯನ್ನು ಸವಿಸ್ತಾರವಾಗಿ ಚರ್ಚೆ ಮಾಡಬಹುದು, ಆದರೆ ಅದಕ್ಕೂ ಮುಂಚೆ 2 ನೇ ಪ್ರಶ್ನೆಯ ಕಡೆಗೆ ಗಮನ ಹರಿಸಬೇಕು. ಈ ಪ್ರಕರಣದ ವಿಷಯವೇನೆಂಬುದನ್ನು ಪತ್ರಿಕಾ ವರದಿಗಳಲ್ಲಿ ನೀವು ನೋಡಿದ್ದನ್ನು ನೆನಪಿಸಿಕೊಳ್ಳಿ. ಸ್ವಲ್ಪ ನೆನಪು ಮಾಡಿಕೊಳ್ಳೋಣ. ಉಡುಪಿಯ ಪದವಿ ಪೂರ್ವ (ಪಿಯುಸಿ) ಕಾಲೇಜಿನ ಆರು ಹುಡುಗಿಯರು ಡಿಸೆಂಬರ್ 2021 ರಲ್ಲಿ ಕಾಲೇಜು ಪ್ರವೇಶಿಸುವಾಗ ಹಠಾತ್ತಾಗಿ ಅವರನ್ನು ತಡೆಯಲಾಯಿತು ಮತ್ತು ಅವರು ಧರಿಸಿರುವ ಹಿಜಾಬನ್ನು ತೆಗೆಯದ ಹೊರತು ಅವರಿಗೆ ಪ್ರವೇಶವಿಲ್ಲ ಎಂದು ಹೇಳಲಾಯಿತು. ಈ ಘಟನೆಯ ನಂತರ ಆ ಆರು ಹುಡುಗಿಯರು ಕಾಲೇಜಿನ ಎದುರು ಪ್ರತಿಭಟನೆ ಮಾಡಿದರು. ಅದಕ್ಕೆ ಪ್ರತೀಯಾಗಿ, ಹಲವಾರು ಇತರ ವಿದ್ಯಾರ್ಥಿಗಳು, ಮುಖ್ಯವಾಗಿ ಹುಡುಗರು ಮತ್ತು ಸಂಭಾವ್ಯವಾಗಿ ಹಿಂದು ಹುಡುಗರು, ಕೇಸರಿ ಶಾಲುಗಳನ್ನು ಧರಿಸಿ ಕಾಲೇಜಿಗೆ ಬರಲು ಆರಂಭಿಸಿದರು. ಇದು ಅಂತಿಮವಾಗಿ, ಒಂದು ನಿಗದಿತ ಸಮವಸ್ತ್ರ ಇರುವಾಗ ಅಂತಹ ಕಾಲೇಜುಗಳಲ್ಲಿ ಶಿರವಸ್ತ್ರ ಹಿಜಾಬನ್ನು ಧರಿಸಬಾರದು ಎಂಬ ಆದೇಶವನ್ನು ಸರ್ಕಾರ ಹೊರಡಿಸಲು ಕಾರಣವಾಯಿತು. ಸಮವಸ್ತ್ರ ಇಲ್ಲದ ಕಡೆಗಳಲ್ಲಿ ವಿದ್ಯಾರ್ಥಿಗಳು ಜಾತ್ಯಾತೀತ ಬಟ್ಟೆಗಳನ್ನು– "ಐಕ್ಯತೆ ಹಾಗೂ ಸಮಾನತೆ"ಯನ್ನು ಕಾಪಾಡುವ ಬಟ್ಟೆಗಳನ್ನು– ಮತ್ತು "ಸಾರ್ವಜನಿಕ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಕ್ರಮ ವಹಿಸಲಾಗಿದೆ". ಅದರ ಅರ್ಥವೇನೆಂದರೆ, ಈ ಹಿಂದೆ ತಮ್ಮ ನಿಗದಿತ ಶಾಲಾ ಸಮವಸ್ತ್ರದ ಜತೆಯಲ್ಲಿ ಹಿಜಾಬನ್ನು ಧರಿಸುತ್ತಿದ್ದ ಹುಡುಗಿಯರು, ಈಗ ಸರ್ಕಾರದ ಆದೇಶದ ಅಡಿಯಲ್ಲಿ, ಹಿಜಾಬನ್ನು ಧರಿಸದೆ ಕಾಲೇಜಿಗೆ ಬರುವಂತೆ ನಿಯಮಗಳನ್ನು ವಿಧಿಸಲು ಕಾಲೇಜುಗಳಿಗೆ ಅವಕಾಶ ಮಾಡಿಕೊಡಲಾಯಿತು.

ಈ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು, 2 ನೇ ಪ್ರಶ್ನೆಯನ್ನು ಪರಿಶೀಲಿಸಿದರೆ: "ಶಾಲಾ ಸಮವಸ್ತ್ರ ಧರಿಸಬೇಕೆಂದು ವಿಧಿಸುವುದು ಕಾನೂನುಬದ್ಧವಾಗಿದೆಯೇ, ಅರ್ಜಿದಾರರ ಮೂಲಭೂತ ಹಕ್ಕುಗಳ ಉಲ್ಲಂಘನೆಯಲ್ಲವೇ? ಈ ಭಾಗದ ತೀರ್ಪಿನ ಮುಖ್ಯ ವಿಷಯ ಆ ಪ್ರಶ್ನೆಯೇ ಆಗಿದೆ. ಶಾಲಾ ಸಮವಸ್ತ್ರ ವಿಧಿಸುವುದನ್ನು ಯಾರೂ ಪ್ರಶ್ನೆ ಮಾಡಲಿಲ್ಲ! ಪ್ರಶ್ನೆ ಇರುವುದೇನೆಂದರೆ ವಿದ್ಯಾರ್ಥಿನಿಯರು (ಪ್ರಧಾನವಾಗಿ ಮುಸ್ಲಿಂ ನಂಬಿಕೆಯ) ಶಾಲಾ ಸಮವಸ್ತ್ರದೊಂದಿಗೆ ಅಥವಾ ಶಾಲಾ ಸಮವಸ್ತ್ರದ ಭಾಗವಾಗಿ ಹಿಜಾಬ್ ಧರಿಸಬಹುದೇ ಎಂಬುದಾಗಿದೆ. ಈ ಪ್ರಕರಣದ ಬಹು ಮುಖ್ಯ ಭಾಗವು ಈ ಒಂದೇ ಪ್ರಶ್ನೆಗೆ ಸಂಬಂಧಪಟ್ಟಿದ್ದಾಗಿದೆ, ಅದನ್ನು ಸರಿಯಾಗಿ ರೂಪಿಸದೇ ಇರುವುದು ವಿಷಾದಕರ ಸಂಗತಿಯಾಗಿದೆ. ಆದಕಾರಣ ಉತ್ತರ ತಪ್ಪಾಗಿಯೇ ಆಗುತ್ತದೆ (ಮತ್ತು ಕೋರ್ಟಿನ ಮುಂದಿರುವ ವಿಷಯಕ್ಕೆ ಸಹಾನುಭೂತಿ ಇಲ್ಲದ್ದಾಗುತ್ತದೆ.)

ಈ ಪ್ರಶ್ನೆಯನ್ನು ಕೋರ್ಟು ಹೇಗೆ ವಿಮರ್ಶಿಸಿದೆ ಎನ್ನುವುದನ್ನು ಪರಿಶೀಲಿಸೋಣ.

2 ನೇ ಪ್ರಶ್ನೆಗೆ ಕೋರ್ಟು ನಕಾರಾತ್ಮಕವಾಗಿ ಉತ್ತರಿಸಿದೆ ಮತ್ತು ಶಾಲಾ ಸಮಸವಸ್ತ್ರ ವಿಧಿಸುವುದು ತಪ್ಪೇನಲ್ಲ ಮತ್ತು ಅದು ಯಾವುದೇ ಮೂಲಭೂತ ಹಕ್ಕನ್ನು ಉಲ್ಲಂಘಿಸಿಲ್ಲ ಎಂದು ತೀರ್ಮಾನಿಸಿದೆ. ಹೆಚ್ಚು ಸೂಕ್ಷ್ಮ ವ್ಯತ್ಯಾಸ ಇರುವ ಪ್ರಶ್ನೆಯೆಂದರೆ ಶಾಲಾ ಸಮವಸ್ತ್ರದ ಜತೆಯಲ್ಲಿ ಹಿಜಾಬನ್ನು ಧರಿಸಲು ನ್ಯಾಯಯುತವಾಗಿ ಸಮನ್ವಯ ಮೂಡಿಸುವ ರೀತಿಯಲ್ಲಿ ಅವಕಾಶ ಒದಗಿಸಬಹುದಿತ್ತೆ ಎನ್ನುವುದಾಗಿತ್ತು ಆದರೆ ಕೋರ್ಟು ಜಾರಿಕೊಂಡಿತು. ನೀಡಿದ ಸಮರ್ಥನೆಗಳು ಹೀಗಿದ್ದವು: ಮೊದಲನೆಯದು, ಸಮವಸ್ತ್ರದ ಪಾತ್ರವೇನು ಎಂಬ ಜಟಿಲವಾದ ವಿಷಯವನ್ನು ಅತಿ ಸರಳೀಕರಿಸಿದ್ದು; ಎರಡನೆಯದು, ಮುಸ್ಲಿಂ ಹುಡುಗಿಯರ ಸ್ವಾಯತ್ತತೆಯನ್ನೇ (ತಮ್ಮನ್ನು ತಾವು ಸಮರ್ಥಿಸಿಕೊಳ್ಳುವ ಹಕ್ಕನ್ನೇ) ಮತ್ತು ಆಯ್ಕೆಯನ್ನೇ ದುರ್ಬಲಗೊಳ್ಳುವ ಹಾಳುಮಾಡುವ ಸಮರ್ಥನೆ; ಮೂರನೆಯದು, ಒಂದು ಕಡೆ ಹಿಜಾಬನ್ನು ಧರಿಸುವುದು ಮತ್ತೊಂದು ಕಡೆ ಶಾಲಾ ಶಿಕ್ಷಣಕ್ಕೆ ಅವಕಾಶ ಈ ಎರಡರ ನಡುವೆ ನೇರ ಸೆಣಸಾಟ; ಮತ್ತು ನಾಲ್ಕನೆಯದು, ಹಿಜಾಬ್ ಧರಿಸುವುದು ಮತ್ತು ಭಗವಾ ಕೇಸರಿ ಶಾಲುಗಳನ್ನು ಧರಿಸುವುದರ ನಡುವೆ ಹುಸಿಯಾದ ಸಮೀಕರಣದ ಗೆರೆ ಎಳೆಯುವುದು. ಈ ಪ್ರತಿಯೊಂದು ಅಂಶಗಳ ಬಗ್ಗೆ ಒಂದಾದರ ಮೇಲೆ ಒಂದರಂತೆ ಸಂಕ್ಷಿಪ್ತವಾಗಿ ಗಮನಿಸೋಣ.

ಶಾಲೆಗಳಲ್ಲಿ ಸಮವಸ್ತ್ರ ಸಮಸ್ಯೆಯಲ್ಲ, ಸಮವಸ್ತ್ರದ ಜತೆ ಹಿಜಾಬ್ ಧರಿಸಲು ನಿರಾಕರಿಸುವುದು ನಿಜಕ್ಕೂ ಸಮಸ್ಯೆಯೇ.

ಶಾಲೆಗಳಲ್ಲಿ ಸಮವಸ್ತ್ರಗಳನ್ನು ವಿಧಿಸುವುದರ ಬಗ್ಗೆ ನಮದೇನೂ ತಕರಾರಿಲ್ಲ, ಆದರೆ ಸಮವಸ್ತ್ರದ ಕಾರ್ಯಸಾಧಕ ಪಾತ್ರದ ಬಗ್ಗೆ ಕೋರ್ಟು ಉತ್ಪ್ರೇಕ್ಷೆ ಮಾಡಿ ಹೇಳುತ್ತಿದೆ ಮತ್ತು ಚಾರಿತ್ರಿಕ ಸತ್ವಗಳಿಗಾಗಿ ಹುಡುಕಾಡುತ್ತದೆ, ಆದರೆ, ಎಲ್ಲರಿಗೂ ಮೂಲಭೂತ ಸ್ವಾತಂತ್ರ್ಯ ಹಾಗೂ ಶಿಕ್ಷಣ ಖಾತರಿಪಡಿಸಬೇಕೆಂಬ ಸಂವಿಧಾನದ ತಿಳುವಳಿಕೆಗೇ ಅವು ವಿರುದ್ಧವಾಗಿದೆ. ಉದಾಹರಣೆಗೆ, ಕೋರ್ಟು ಹೇಳುತ್ತದೆ: "ವಿವೇಚನೆ ಇರುವವರಾರೂ ಸಮವಸ್ತ್ರವಿಲ್ಲದ ಶಾಲೆಯನ್ನು ಕಲ್ಪಿಸಿಕೊಳ್ಳಲಾರರು. ಇದನ್ನು ಮೊದಲು ತಂದವರು ಮೊಘಲರು ಅಥವಾ ಬ್ರಿಟಿಷರು ಅಲ್ಲ. ಪ್ರಾಚೀನ ಗುರುಕುಲ ಕಾಲದಲ್ಲಿಯೇ ಇದು ಅಸ್ತಿತ್ವದಲ್ಲಿತ್ತು. ಹಲವಾರು ಭಾರತೀಯ ಗ್ರಂಥಗಳು ಸಂಸ್ಕೃತದ ಸಮವಸ್ತ್ರ / ಶುಭ್ರವೇಶ್ ಪದಗಳ ಕುರಿತು ಉಲ್ಲೇಖಿಸಿವೆ. ಅದರ ಇಂಗ್ಲಿಷ್‌ನ ಸಮಾನ ಪದ ಸಮವಸ್ತ್ರ(ಯೂನಿಫಾರಂ). ಅತ್ಯಂತ ಗೌರವಪೂರ್ವಕವಾಗಿ ಇಲ್ಲಿ ಮಂಡಿಸಲು ಇಷ್ಟಪಡುವುದೇನೆಂದರೆ ಆರು ಹುಡುಗಿಯರು ಕೋರ್ಟಿನ ಕಟ್ಟೆ ಹತ್ತುವುದರ ಮೂಲಕ ಗುರುಕುಲದಲ್ಲಿ ಸಮವಸ್ತ್ರಧರಿಸುವುದರೊಂದಿಗೆ (ಮುಸ್ಲಿಂ ಮಹಿಳೆಯರಿರಲಿ ಮಹಿಳೆಯರಿಗೇ ಅಲ್ಲಿ ಸ್ಥಾನವಿರಲಿಲ್ಲ ಎಂಬುದನ್ನು ಮರೆತು) ಹೋಲಿಕೆ ಮಾಡಿ ಹಕ್ಕುಗಳ ಉಲ್ಲಂಘನೆ ಮಾಡಿದ್ದಾರೆಂದು ಉಲ್ಲೇಖಿಸುವುದು ಯಾವ ಅರ್ಥ ಕೊಡುತ್ತದೆ ಎಂದರೆ ಈ ಪ್ರಕರಣದ ಕೇಂದ್ರವಾಗಿರುವ ಮೂಲಭೂತ ಹಕ್ಕುಗಳ ತಿರುಳೇ ಉಲ್ಲಂಘನೆಯಾಗುತ್ತಿದೆ ಎಂಬ ವಾದವನ್ನು ತೀರ್ಪು ಗ್ರಹಿಸಲಿಲ್ಲ.

'ನ್ಯಾಯಸಮ್ಮತ ಅವಕಾಶ'ದ ತಾತ್ವಿಕತೆಯ ಕುರಿತು ಕೋರ್ಟಿನ ಸಮರ್ಥನೆಯು ಎರಡು ವಿಷಯಗಳನ್ನು ಸೂಚಿಸುತ್ತದೆ–ತಮ್ಮನ್ನು ತಾವು ಸಮರ್ಥಿಸಿಕೊಳ್ಳುವ ಮುಸ್ಲಿಂ ಹುಡುಗಿಯರ ಹಕ್ಕನ್ನೇ ನಿಜವಾಗಿಯೂ ಹಾಳುಗೆಡವುತ್ತಿದೆ ಮತ್ತು ಒಂದು ಕಡೆ ಹಿಜಾಬ್ ಧರಿಸುವುದು ಮತ್ತೊಂದೆಡೆ ಶಿಕ್ಷಣದ ಅವಕಾಶದ ನಡುವೆ ನೇರ ಕಾದಾಟವನ್ನು ಹುಟ್ಟುಹಾಕಿದೆ. ಹಿಜಾಬನ್ನು ಧರಿಸಲು ಆಯ್ಕೆ ಮಾಡುವ ಹುಡುಗಿಯರು ಶಾಲಾ ಸಮವಸ್ತ್ರದ ಬಣ್ಣವನ್ನೇ ಹಿಜಾಬಿಗೂ ಬಳಸಲು ಅನುಮತಿ ನೀಡಬೇಕು ಎಂದು ವಾದ ಮಂಡಿಸಲಾಯಿತು. ಕೇಂದ್ರೀಯ ವಿದ್ಯಾಶಾಲೆಯ ಉದಾಹರಣೆಯನ್ನು ಉಲ್ಲೇಖಿಸಲಾಯಿತು. ಅಲ್ಲಿ, ಮಕ್ಕಳು ಬಯಸಿದರೆ ಶಾಲಾ ಸಮವಸ್ತ್ರದ ಬಣ್ಣದ ದುಪಟ್ಟಾ ಹಾಗೂ ಶಿರವಸ್ತ್ರಗಳನ್ನು ವಿದ್ಯಾರ್ಥಿನಿಯರಿಗೆ ಪೂರೈಸಲಾಗುತ್ತಿದೆ. ಅಷ್ಟೇ ಅಲ್ಲ, ಧಾರ್ಮಿಕ ಅಥವಾ ಸಾಮಾಜಿಕ ಉಡುಪು ಧರಿಸಲು 'ನ್ಯಾಯಸಮ್ಮತ ಅವಕಾಶ' ನೀಡುತ್ತಿರುವ ನಿದರ್ಶನಗಳು ಇನ್ನೂ ಬೇಕಷ್ಟಿವೆ. 1988 ರ ಮೋಟಾರು ವಾಹನಗಳ ಕಾಯಿದೆಯ ಪ್ರಕಾರ ದ್ವಿಚಕ್ರ ವಾಹನ ಸವಾರರಿಗೆ ಶಿರಸ್ತ್ರಾಣ (ಹೆಲ್ಮೆಟ್) ಧರಿಸುವುದು ಕಡ್ಡಾಯವಾಗಿದೆ. ಆದರೆ ಟರ್ಬನ್ ಧರಿಸುವ ಸಿಖ್ ಸಮುದಾಯದವರಿಗೆ ಹೆಲ್ಮೆಟ್ ಧರಿಸುವುದಕ್ಕೆ ಸಂಸತ್ತು ವಿನಾಯಿತಿ ನೀಡಿದೆ. ವಾಸ್ತವವಾಗಿ, ಶಸ್ತ್ರಸಜ್ಜಿತ ಸೈನಿಕರು ಹಾಗೂ ಪೊಲೀಸರಿಗೆ, ಅವರು ಶಿಖ್ಖರಾದರೆ ಸಮವಸ್ತ್ರದ ಜತೆ ಟರ್ಬನ್ ಪೇಟಾ ಬಳಸಲು ಅವಕಾಶ ನೀಡಲಾಗಿದೆ.ಈಗ ಪ್ರಶ್ನೆ ಇರುವುದು ಸೈನಿಕರು ಮತ್ತು ಪೊಲೀಸರಿಗೆ ಅವರ ಐಕ್ಯತೆ ಮತ್ತು ಏಕರೂಪತೆಗ ಭಂಗಬಾರದಂತೆ ಸಮವಸ್ತ್ರದ ಭಾಗವಾಗಿ ಟರ್ಬನ್ ಧರಿಸಲು ಸಾಧ್ಯವಾಗುವುದಾದರೆ, ಶಾಲಾ ಹುಡುಗಿಯರು ತಮ್ಮ ಶಿರವಸ್ತ್ರ ಧರಿಸುವುದು ಶಾಲೆಯ ಐಕ್ಯತೆ ಮತ್ತು ಏಕರೂಪತೆಗೆ ಹೇಗೆ ಹಾನಿಯುಂಟು ಮಾಡುತ್ತಾರೆ?

ಏಕರೂಪತೆಗೋಸ್ಕರ–ಏಕರೂಪತೆ ಸಂವಿಧಾನದ ಉದ್ದೇಶವಲ್ಲ

ನ್ಯಾಯಸಮ್ಮತ ಅವಕಾಶದ ವಾದವನ್ನು ತಿರಸ್ಕರಿಸಲು ಏಕರೂಪತೆಯ ತರ್ಕವನ್ನು ಆಯ್ದುಕೊಂಡಿತು. ಕೋರ್ಟಿನ ಸಮರ್ಥನೆ ಹೀಗಿದೆ: "ಮೊದಲನೆಯದಾಗಿ, ಇಂತಹ ಪ್ರಸ್ತಾಪವನ್ನು ಒಪ್ಪಿಕೊಂಡರೆ, ಶಾಲೆಯ ಸಮವಸ್ತ್ರ ಸಮವಸ್ತ್ರವಾಗಿ ಉಳಿಯುವುದಿಲ್ಲ. ಅಲ್ಲಿ ಎರಡು ಬಗೆಯ ವಿದ್ಯಾರ್ಥಿನಿಯರು ಇರುತ್ತಾರೆ, ಅಂದರೆ ಹಿಜಾಬಿನೊಂದಿಗೆ ಸಮವಸ್ತ್ರ ಧರಿಸುವವರು ಮತ್ತು ಅದಿಲ್ಲದೇ ಸಮವಸ್ತ್ರ ಧರಿಸುವವರು. ಅದು ಒಂದು ರೀತಿಯ 'ಸಾಮಾಜಿಕ ಪ್ರತ್ಯೇಕತೆಯನ್ನು' ಸೃಷ್ಟಿಸುತ್ತದೆ, ಅದು ಅಪೇಕ್ಷಣೀಯವಲ್ಲ. ಅವರ

ಪುಟ 12 ಕ್ಕೆ

ಶಾಂತಿ ಕಾಪಾಡಿದ ಮುಸ್ಲಿಂ ಬಂಧುಗಳು ಅಭಿನಂದನಾರ್ಹರು


ಶಾಲೆ ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ರಾಜ್ಯ ಹೈಕೋರ್ಟ್ ನಿರ್ಬಂಧ ವಿಧಿಸಿದ ಪರಿಣಾಮವಾಗಿ ಕೆಲವು ಮುಸ್ಲಿಂ ಸಮುದಾಯದ ವಿದ್ಯಾರ್ಥಿನಿಯರಿಗೆ ಮತ್ತು ಅವರ ಪಾಲಕರಿಗೆ ತೀವ್ರ ನಿರಾಸೆ ಉಂಟಾಗಿರುವುದು ಸಹಜವಾಗಿದೆ. ಆದರೂ ಅವರು ಪ್ರಚೋದನೆಗೆ ಒಳಗಾಗದೆ ಶಾಂತಿಯನ್ನು ಕಾಪಾಡಿದ್ದು ಗಮನಾರ್ಹವಾಗಿದೆ. ಮುಂದೆಯೂ ಸಾಮಾಜಿಕ ಹಿತ ದೃಷ್ಟಿಯಿಂದ ಪ್ರಚೋದನೆಗೂ ಒಳಗಾಗದೆ ಶಾಂತಿಯನ್ನು ಕಾಪಾಡಲು ಬದ್ದರಾಗಿರುವುದು ಅಷ್ಟೇ ಮಹತ್ವದ್ದಾಗಿದೆ.

ಶತಮಾನಗಳಿಂದ ಮುಸ್ಲಿಂ ಯುವತಿಯರಲ್ಲಿ ಕೆಲವರು ತಮ್ಮ ರಕ್ಷಣೆಗಾಗಿ ಹಿಜಾಬ್ ಧರಿಸುತ್ತಾ ಬಂದಿದ್ದಾರೆ. ಅವರು ಹಿಜಾಬ್ ಧರಿಸುವ್ಯದರಿಂದ ಯಾರಿಗೂ ಏನೂ ತೊಂದರೆ ಇರಲಿಲ್ಲ. ಅವರು ತಮ್ಮ ಪಾಡಿಗೆ ಹಿಜಾಬ್ ಧರಿಸಿಕೊಂಡು ಶಾಲೆ ಕಾಲೇಜುಗಳಿಗೆ ಹೋಗುತ್ತಿದ್ದರು ಮತ್ತು ಮನೆಗೆ ಮರಳುತ್ತಿದ್ದರು. ಯಾರಿಂದಲೂ ಯಾವ ತಕರಾರು ಇರಲಿಲ್ಲ. ಹಿಜಾಬ್ ಧರಿಸುವುದಕ್ಕೆ ವಿರೋಧ ವ್ಯಕ್ತವಾಗಬಹುದೆಂದು ಅವರು ನಿರೀಕ್ಷೆ ಮಾಡಿರಲಿಲ್ಲ. ಹೀಗಾಗಿ ನ್ಯಾಯಾಲಯದ ಮೇಲೆ ಅವರಿಗೆ ನಂಬಿಕೆ ಇತ್ತು. ಆದ್ದರಿಂದಲೇ ಅವರು "ಹೈಕೋರ್ಟ್ ತೀರ್ಪು ನಿರಾಶಾದಾಯಕವಾಗಿದೆ" ಎಂದು ಪ್ರತಿಕ್ರಿಯಿಸುತ್ತಾ ಹಿಂದಿನಂತೆ ತಮಗೆ ಹಿಜಾಬ್ ಧರಿಸಿಕೊಂಡು ಶಾಲಾ ಕಾಲೇಜ್ ಪ್ರವೇಶಿಸಲು ಅನುಮತಿಗೆ ಒತ್ತಾಯಿಸುತ್ತಿದ್ದಾರೆ.

ಮುಸ್ಲಿಂ ವಿದ್ಯಾರ್ಥಿನಿಯರಿಗೆ ಹೈಕೋರ್ಟ್ ಬಗ್ಗೆ ಅಗೌರವ ತೋರಿದಂತಾಗಿದೆ ಎಂದು ಕೆಲವರು ಭಾವಿಸಬಹುದು. ಅದು ಮುಸ್ಲಿಂ ವಿದ್ಯಾರ್ಥಿನಿಯರು ನ್ಯಾಯಾಲಯದ ಬಗ್ಗೆ ಇರುವ ನಂಬಿಕೆಯ ದ್ಯೋತಕವಾಗಿದೆ. ಅಂತಹ ಒಂದು ತೀರ್ಪನ್ನು ಅವರು ನಿರೀಕ್ಷೆ ಮಾಡಿರಲಿಲ್ಲ. ಅವರಿಗೆ ಈಗ ತೀವ್ರ ಆಘಾತ ಉಂಟಾಗಿರಬಹುದು. ತಮಗೆ ಅನ್ಯಾಯವಾಗಿದೆ ಎಂದು ಭಾವಿಸುವವರು ನ್ಯಾಯ ಕೋರಿ ಸುಪ್ರೀಂ ಕೋರ್ಟ್ ಎದುರು ಮೇಲ್ಮನವಿ ಸಲ್ಲಿಸಿದ್ದಾರೆ. ಮೇಲ್ಮನವಿ ಸಲ್ಲಿಸುವುದು ತಪ್ಪಲ್ಲ. ಅದು ಕೆಳಕೋರ್ಟಿಗೆ ತೋರಿದ ಅಗೌರವೂ ಅಲ್ಲ. ಮೇಲ್ಮನವಿ ಸಲ್ಲಿಸುವುದು ಕಾನೂನು ರಂಗದಲ್ಲಿ ಸಹಜವಾದ ಪದ್ಧತಿಯಾಗಿದೆ.

ಹಿಜಾಬ್ ವಿಚಾರವಾಗಿ ಹೈಕೋರ್ಟ್ ನೀಡಿರುವ ತೀರ್ಮನ್ನು ಒಪ್ಪಲಾಗದು ಎಂದು ಪ್ರತಿಪಾದಿಸಿ ಮುಸ್ಲಿಂ ಸಮುದಾಯದ ಕೆಲವು ಸಂಘಟನೆಗಳು ರಾಜ್ಯ ಬಂದ್‌ಗೆ ಕರೆ ನೀಡಿದ್ದವು. ಕಾನೂನು ಪ್ರಕಾರ ಬಂದ್‌ನಂತಹ ಪ್ರತಿಭಟನೆಗೆ ಕರೆ ನೀಡುವುದು ತಪ್ಪಲ್ಲ. ಅಲ್ಲಿಯೂ ಕಾನೂನು ಉಲ್ಲಂಘನೆಯಾಗದಂತೆ ನೋಡಿಕೊಳ್ಳುವುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಯಾವುದೇ ಅಹಿತಕರ ಘಟನೆಗೆ ಆಸ್ಪದ ನೀಡದೆ ಪ್ರತಿಭಟನೆ ನಡೆದಿದೆ.

–ನಿತ್ಯಾನಂದಸ್ವಾಮಿ





ಜನಪ್ರಿಯ ಸಂಸ್ಕೃತಿಯು ಯಾವಾಗಲೂ, ಯಾವುದೋ ಅಧಿಕಾರ ಕೇಂದ್ರವನ್ನು ಅಥವಾ ಸಿದ್ಧಾಂತವನ್ನು ಪ್ರಚಾರ ಮಾಡುವುದು ಹೊಸದೇನಲ್ಲ. ಭಾರತದಲ್ಲಿ ಜನಪ್ರಿಯ ಚಲನಚಿತ್ರಗಳು ಮೊದಲಿನಿಂದಲೂ ಇಬ್ಬಗೆಯ ಪಾತ್ರ ನಿರ್ವಹಿಸಿವೆ. ಒಂದು ಕಡೆ ಮನರಂಜನೆಯ ಹೆಸರಿನಲ್ಲಿ ವ್ಯವಸ್ಥೆಯನ್ನು ಸಮರ್ಥಿಸಿವೆ. ಇನ್ನೊಂದು ಕಡೆಗೆ ತಮ್ಮದೇ ಆದ ನಿರೂಪಣೆಯ ಮಾದರಿಯನ್ನು ಬಿಟ್ಟುಕೊಡದೇ ಗಂಭೀರವಾದ ವಿಷಯಗಳನ್ನು ಮುನ್ನೆಲೆಗೆ ತಂದಿವೆ. ಆದರೆ ಈಗಿನ ವಿದ್ಯಮಾನವೆಂದರೆ ಕೋಮು ದ್ವೇಷ, ಒಂದು ಕೋಮಿನ ಬಗ್ಗೆ ವಿಕೃತ ಪೂರ್ವಗ್ರಹಗಳು, ಯುದ್ಧದ ಉನ್ಮಾದ, ಚರಿತ್ರೆಯ ಸುಳ್ಳು ವ್ಯಾಖ್ಯಾನಗಳು, ಇವುಗಳನ್ನು ವಸ್ತುವಾಗಿಟ್ಟುಕೊಳ್ಳುವ ಚಿತ್ರಗಳಿಗೆ ಪ್ರಭುತ್ವ ಹಾಗೂ ಅದರ ಸಂಘಟನೆಗಳು ಬೆಂಬಲ ನೀಡುತ್ತಿವೆ.

ಅದುಮಿಡಲಾದ ಸತ್ಯ: 'ಕಾಶ್ಮೀರ್ ಫೈಲ್ಸ್' ಅಥವಾ 'ಫರ್ಜಾನಿಯ'?




ಪ್ರೊ. ರಾಜೇಂದ್ರ ಚೆನ್ನಿ

ಇತ್ತೀಚೆಗೆ ಬಿಡುಗಡೆಯಾದ Kashmir Files ಭಾರತದಲ್ಲಿ ಒಂದು ಬಿರುಗಾಳಿಯನ್ನೇ ತಂದಿದೆ. ಅಂದ ಹಾಗೆ ಮುಹೂರ್ತ ನೋಡಿಕೊಂಡು ವಾರಕ್ಕೊಂದು ವಿವಾದಗಳನ್ನು ಹುಟ್ಟುಹಾಕುವುದು ಇಂದಿನ ಪ್ರಭುತ್ವ ಮತ್ತು ಅದರ ಸಂಘಟನೆಗಳಿಗೆ ಚಟವಾಗಿಬಿಟ್ಟಿದೆ. ಶಿರವಸ್ತ್ರದ (ಹಿಜಾಬ್) ವಿವಾದವು ತಾತ್ಕಾಲಿಕವಾಗಿ ಉಚ್ಚ ನ್ಯಾಯಾಲಯದ ತೀರ್ಪಿನಿಂದ ಸ್ವಲ್ಪ ತಣ್ಣಗಾಗುತ್ತಿರುವಾಗ, ಈಗ ಈ ಚಲನಚಿತ್ರದ ವಿವಾದ – ಇವುಗಳಲ್ಲಿ ಯಾವುದು ಆಕಸ್ಮಿಕವಲ್ಲ. ಪಂಚಾಂಗ ನೋಡಿದಂತೆ ಮುಂದಿನ ಚುನಾವಣೆ ನೋಡಿಕೊಂಡು ಇವುಗಳನ್ನು ಶುರು ಮಾಡಲಾಗುತ್ತದೆ. ಸಾಮಾಜಿಕ ತಾಣಗಳು, ಮಾಧ್ಯಮಗಳು ಹಾಗೂ ಇತ್ತೀಚೆಗೆ ಚಲನಚಿತ್ರಗಳು ಆಯುಧಗಳಾಗಿ ಪರಿವರ್ತಿತವಾಗಿವೆ. ಕಾಶ್ಮೀರಿ ಪಂಡಿತರ ಹತ್ಯೆ ಮತ್ತು ಪಲಾಯನವನ್ನು ಕಾಶ್ಮೀರದ ಇತರ ಎಲ್ಲ ಸಮಸ್ಯೆಗಳಿಗಿಂತ ಮುಖ್ಯವಾಗಿ ಪರಿಗಣಿಸುವ ಸಂಪ್ರದಾಯವು ಹೊಸದಲ್ಲ. ಇದನ್ನು ಒಂದು ನಿರೂಪಣೆ ಅಥವಾ ಕಥನ (narrative) ವನ್ನಾಗಿಸಲಾಗಿದೆ. ಈ ಕಥನವು ಚರಿತ್ರೆಯನ್ನು ಕೋಮುವಾದಿ ಧ್ರುವೀಕರಣಗೊಳಿಸುವ ಪ್ರಯತ್ನದ ಭಾಗವಾಗಿದೆ. ಮತ್ತು ವಾಸ್ತವ ಸಂಗತಿಗಳನ್ನು ಬೇರೆ ವ್ಯಾಖ್ಯಾನಗಳನ್ನು ಮರೆಮಾಚಿ ಚರಿತ್ರೆಯನ್ನು ಮರು ನಿರೂಪಿಸುವ ಪ್ರಯತ್ನವಾಗಿದೆ. ಇದು ಈಗ ಹಲವಾರು ಸ್ತರಗಳಲ್ಲಿ ನಡೆಯುತ್ತಿದೆ. ಅಂತರ್‌ರಾಷ್ಟ್ರೀಯ ವಿದ್ವತ್ ವಲಯದಿಂದ ಹಿಡಿದು ಜನಪ್ರಿಯ ಸಿನೆಮಾಗಳವರೆಗೆ ಇವು ವ್ಯವಸ್ಥಿತವಾದ ಪ್ರಚಾರ ಹಾಗೂ ಪ್ರಚೋದನೆಯ ಉದ್ದೇಶವನ್ನು ಹೊಂದಿವೆ. ಅದಕ್ಕಾಗಿ ಪ್ರಭುತ್ವದ ಆಶ್ರಯದಲ್ಲಿ ಸಂಘಟನೆಗಳು ಜಾಲವೊಂದನ್ನು ಸಿದ್ಧಪಡಿಸುತ್ತವೆ. 'ಕಾಶ್ಮೀರಿ ಫೈಲ್ಸ್' ವಿದ್ಯಮಾನದಲ್ಲಿ ಪೂರ್ಣ ಪ್ರಮಾಣದಲ್ಲಿ ಪ್ರಭುತ್ವವು ಸಂವಿಧಾನ, ಶಿಷ್ಟಾಚಾರ ಎಲ್ಲವನ್ನೂ ಬದಿಗಿಟ್ಟು ಪ್ರವೇಶ ಮಾಡಿದೆ. ಇದು ಅನೈತಿಕ ಮತ್ತು ಅಪಾಯಕಾರಿ.

ಈ ಚಲನಚಿತ್ರದ ಟೀಮ್ ನೊಂದಿಗೆ ಪ್ರಧಾನಮಂತ್ರಿ ಮೋದಿಯವರು ಸಂದರ್ಶನದಲ್ಲಿ ಭಾಗಿಯಾದರು ಮತ್ತು ಚಲನಚಿತ್ರದ ಬಗ್ಗೆ ವಿವರವಾಗಿ ಮಾತನಾಡಿದರು. ಎಂದಿನಂತೆ ಅವರು ವಿರೋಧಿಗಳನ್ನೇ ಉದ್ದೇಶಿಸಿ ಮಾತನಾಡಿದರು. ಅದುಮಿಡಲಾದ ಸತ್ಯವನ್ನು ಇಂಥ ಚಲನಚಿತ್ರಗಳನ್ನು ತೋರಿಸುವುದು ಸರಿಯಾಗಿದೆಯೆಂದರು. ಈ ಚಲನಚಿತ್ರವನ್ನು ವಿರೋಧಿಸುತ್ತಿರುವವರು ಒಂದು ಕಡೆಗೆ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಮಾತನಾಡುತ್ತಾರೆ, ಆದರೆ ತಮಗಿಷ್ಟವಾಗದ ಚಲನಚಿತ್ರವನ್ನು ವಿರೋಧಿಸುತ್ತಾರೆ ಎಂದರು. ಮುಂದುವರೆದು ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವಿದೆಯಾದ್ದರಿಂದ ಈ ಚಲನಚಿತ್ರವು ಹೇಳುವ ಸತ್ಯದ ಬಗ್ಗೆ ಒಪ್ಪಿಗೆ ಇಲ್ಲದಿದ್ದರೆ ತಾವು ಪರ್ಯಾಯವಾಗಿ ಇನ್ನೊಂದು ಚಲನಚಿತ್ರ ಮಾಡಬಹುದು ಎಂದರು. ಗೋಧ್ರಾ ಮತ್ತು ನಂತರದ ಗುಜರಾತ್ ನ ಜನಾಂಗೀಯ ಕೊಲೆಗಳ ಬಗ್ಗೆ ಎಲ್ಲಾ ಸತ್ಯಗಳನ್ನು ದಮನ ಮಾಡಲು ಪ್ರಜಾಪ್ರಭುತ್ವವನ್ನು ದಮನ ಮಾಡಿದ ರಾಜ್ಯ ಸರಕಾರದ ಅಂದಿನ ಮುಖ್ಯಮಂತ್ರಿಗಳು ಹೀಗೆ ಹೇಳುತ್ತಿದ್ದಾರೆ. 2005 ರಲ್ಲಿ ಬಿಡುಗಡೆಯಾದ 'ಫರ್ಜಾನಾ' ಎನ್ನುವ ಚಲನಚಿತ್ರವು ಗೊಧ್ರಾ, ಗುಜರಾತ್ ಹಿಂಸೆಯ ಬಗ್ಗೆ ಇದೆ. ಈ ಚಲನಚಿತ್ರವು ಪ್ರದರ್ಶನವಾಗುವುದನ್ನು ಇವರ ಮಾರ್ಗದರ್ಶನದಲ್ಲಿ ಬಲಪಂಥೀಯ ಸಂಘಟನೆಗಳು ತಡೆದವು. 'Gujarat Files' ಕೃತಿಯನ್ನು ಬರೆದ ರಾಣಾ ಆಯೂಬ್ ಮತ್ತು 'Gujarat A Tragedy' ಬರೆದ ಸಿದ್ಧಾರ್ಥ ವರದರಾಜನ್ ಅವರಿಗೆ ಕೊಟ್ಟಿರುವ ಕಿರುಕುಳಗಳು ಎಲ್ಲರಿಗೂ ಪರಿಚಿತವೇ. ವಿಮರ್ಶಾತ್ಮಕವಾಗಿ ಏನನ್ನು ಹೇಳಿದರೂ, ಬರೆದರೂ ಕ್ರೂರವಾದ Trolling ಗಾಗಿ ಪ್ರಭುತ್ವವು ತನ್ನ IT Cell ಅನ್ನು ರಚಿಸಿಕೊಂಡಿದೆ. ಜಗತ್ತಿನಲ್ಲಿ ಅತ್ಯುತ್ತಮ ಅಂಬೇಡ್ಕರ್ ವಿದ್ವಾಂಸರಾದ ಆನಂದ್ ತೇಲ್ತುಂಬ್ಡೆ ಯವರನ್ನು ಜೈಲಿನಲ್ಲಿಡಲಾಗಿದೆ.

ಈಗ ಅನೇಕ ಬಿ.ಜೆ.ಪಿ. ಆಡಳಿತವಿರುವ ರಾಜ್ಯಗಳಲ್ಲಿ (ಕರ್ನಾಟಕವು ಸೇರಿದಂತೆ) 'ಕಾಶ್ಮೀರ್ ಫೈಲ್ಸ್'ಗೆ ತೆರಿಗೆ ವಿನಾಯಿತಿ ನೀಡಲಾಗಿದೆ. ನೆನ್ನೆ (15 ಮಾರ್ಚ್) ಶಿವಮೊಗ್ಗೆಯಲ್ಲಿ ಈ ಚಲನಚಿತ್ರವನ್ನು ಉಚಿತವಾಗಿ ಪ್ರದರ್ಶನ ಮಾಡಲಾಯಿತು. ಇನ್ನೂ ಮೂರುದಿನ ಉಚಿತ ಪ್ರದರ್ಶನವನ್ನು ಮುಂದುವರೆಸಲಾಗಿದೆ. ಕರ್ನಾಟಕದ ಜನಪ್ರತಿನಿಧಿಗಳಿಗಾಗಿ ವಿಶೇಷ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಅಭಿವ್ಯಕ್ತಿ ಸ್ವಾತಂತ್ರ್ಯವೆಂದರೆ ಸರಕಾರಗಳು ತಮ್ಮ ಅಧಿಕಾರವನ್ನು ಅನೈತಿಕವಾಗಿ ಬಳಸಿಕೊಂಡು ಒಂದು ಚಲನಚಿತ್ರವನ್ನು ಬೆಂಬಲಿಸುವುದಲ್ಲ. ಪುನೀತ್ ರಾಜ್‌ಕುಮಾರ್ ಅವರ 'ಜೇಮ್ಸ್' ಚಲನಚಿತ್ರವನ್ನು ತೋರಿಸಬೇಕಾಗಿದ್ದ ಚಿತ್ರಗೃಹಗಳಲ್ಲಿ 'ಕಾಶ್ಮೀರ್ ಫೈಲ್ಸ್' ತೋರಿಸುವುದನ್ನು ಕನ್ನಡ ಸಂಘಟನೆಗಳು, ಅಭಿಮಾನಿಗಳು ವಿರೋಧಿಸಿದ್ದರಿಂದ ಬದಲಾವಣೆ ಮಾಡಲಾಯಿತು. ಈ ಚಲನಚಿತ್ರವನ್ನು ಎಲ್ಲಾ ಮಕ್ಕಳು ನೋಡಲಿ ಎಂದು ಪ್ರಚಾರ ಮಾಡಲಾಗುತ್ತಿದೆ.

ಜನಪ್ರಿಯ ಸಂಸ್ಕೃತಿಯು ಯಾವಾಗಲೂ, ಯಾವುದೋ ಅಧಿಕಾರ ಕೇಂದ್ರವನ್ನು ಅಥವಾ ಸಿದ್ಧಾಂತವನ್ನು ಪ್ರಚಾರ ಮಾಡುವುದು ಹೊಸದೇನಲ್ಲ. ಭಾರತದಲ್ಲಿ ಜನಪ್ರಿಯ ಚಲನಚಿತ್ರಗಳು ಮೊದಲಿನಿಂದಲೂ ಇಬ್ಬಗೆಯ ಪಾತ್ರ ನಿರ್ವಹಿಸಿವೆ. ಒಂದು ಕಡೆ ಮನರಂಜನೆಯ ಹೆಸರಿನಲ್ಲಿ ವ್ಯವಸ್ಥೆಯನ್ನು ಸಮರ್ಥಿಸಿವೆ. ಇನ್ನೊಂದು ಕಡೆಗೆ ತಮ್ಮದೇ ಆದ ನಿರೂಪಣೆಯ ಮಾದರಿಯನ್ನು ಬಿಟ್ಟುಕೊಡದೇ ಗಂಭೀರವಾದ ವಿಷಯಗಳನ್ನು ಮುನ್ನೆಲೆಗೆ ತಂದಿವೆ. ಉದಾಹರಣೆಗೆ ಹಿಂದಿ ಬಾಲಿವುಡ್ ಚಿತ್ರಗಳು ಕೋಮು ಸೌಹಾರ್ದತೆ, ರೈತರ ಬವಣೆಗಳು, ಕಾರ್ಮಿಕರ ಜೀವನ – ಇವುಗಳ ಬಗ್ಗೆ ಪ್ರಬುದ್ಧವಾಗಿ, ಜನರ ಮನಸೆಳೆಯುವ ರೀತಿಯಲ್ಲಿ ನಿರೂಪಿಸಿವೆ. ಇದಕ್ಕೆ ಒಂದು ಕಾರಣವೆಂದರೆ ಬಾಲಿವುಡ್‌ನ ಎರಡು ಹಂತಗಳಲ್ಲಿ ಪ್ರಗತಿಶೀಲ ಕವಿಗಳು, ಬರಹಗಾರರು ಆ ಉದ್ದಿಮೆಯ ಭಾಗವಾಗಿದ್ದರು. ಭಾರತದ ಸರಕಾರಗಳು ಒಂದು ಕಾಲದಲ್ಲಿ ಸಣ್ಣ ಬಜೆಟ್ಟಿನ ಒಳ್ಳೆಯ ಚಿತ್ರಗಳಿಗೆ ಸಾಲವನ್ನು ನೀಡಿ ಬೆಂಬಲಿಸಿದವು. ಈ ಚಿತ್ರಗಳು ಪ್ರಭುತ್ವವನ್ನು ಬೆಂಬಲಿಸಲಿಲ್ಲ. ಆದರೆ ಈಗಿನ ವಿದ್ಯಮಾನವೆಂದರೆ ಕೋಮು ದ್ವೇಷ, ಒಂದು ಕೋಮಿನ ಬಗ್ಗೆ ವಿಕೃತ ಪೂರ್ವಗ್ರಹಗಳು, ಯುದ್ಧದ ಉನ್ಮಾದ, ಚರಿತ್ರೆಯ ಸುಳ್ಳು ವ್ಯಾಖ್ಯಾನಗಳು, ಇವುಗಳನ್ನು ವಸ್ತುವಾಗಿಟ್ಟುಕೊಳ್ಳುವ ಚಿತ್ರಗಳಿಗೆ ಪ್ರಭುತ್ವ ಹಾಗೂ ಅದರ ಸಂಘಟನೆಗಳು ಬೆಂಬಲ ನೀಡುತ್ತಿವೆ. ಇದರ ಉದ್ದೇಶವೆಂದರೆ ಕೋಮು ಧ್ರುವೀಕರಣಕ್ಕೆ ಸಹಾಯವಾಗುವ Mass Hysteria ಅನ್ನು ಹುಟ್ಟು ಹಾಕುವುದಾಗಿದೆ. ದೇಶ ಪ್ರೇಮದ ಹೆಸರಿನಲ್ಲಿ ಬಂದ ಯುದ್ಧಕೇಂದ್ರಿತ ಚಿತ್ರಗಳು ಇದರ ಉದಾಹರಣೆಯಾಗಿವೆ. ಈ ವಿದ್ಯಮಾನದ ಪರಿಣಾಮಗಳು ಇಂದಿನ ರಾಜಕೀಯ ಸ್ಥಿತಿಯಲ್ಲಿ ವಿಪರೀತವಾಗಿರುತ್ತವೆ. ಅಲ್ಲದೆ ಅನಾವಶ್ಯಕವಾದ ವಿಚಾರಗಳನ್ನು ನಾಗರೀಕ ಸಮುದಾಯದಲ್ಲಿ ಹುಟ್ಟುಹಾಕುತ್ತವೆ. ಅದರಲ್ಲೂ ಅವಿಮರ್ಶಾತ್ಮಕವಾಗಿ, ಅತಾರ್ಕಿಕವಾಗಿ ಭಾವನೆಗಳ ಪ್ರಚೋದನೆಗಾಗಿಯೇ ನಿರ್ಮಿಸಲಾದ ಚಿತ್ರಗಳೂ ಪ್ರಭುತ್ವದ ಬೆಂಬಲದೊಂದಿಗೆ ಸಾಂಸ್ಕೃತಿಕ ಅಪಾಯಗಳನ್ನು ಖಂಡಿತ ತರುತ್ತವೆ.



ಕೃಪೆ: ಸತೀಶ್ ಆಚಾರ್ಯ

ಸಾಮಾಜಿಕ ಮಾಧ್ಯಮಗಳಲ್ಲಿ "ಕಾಶ್ಮೀರ್ ಫೈಲ್ಸ್"ದೇ ಚರ್ಚೆ

ಸಾಮಾಜಿಕ ಮಾಧ್ಯಮಗಳಲ್ಲಿ 'ಕಾಶ್ಮೀರ್ ಫೈಲ್ಸ್' ಚಿತ್ರದ ಬಗ್ಗೆ ಪರ ವಿರೋಧದ ಚರ್ಚೆ ನಡೆಯುತ್ತಿದೆ. ಸಿನೆಮಾ ನಿರ್ದೇಶಕ, ನಿರ್ಮಾಪಕ ಹಾಗೂ ತಂಡದವರಿಗೆ ಇತರರ ಕೊಲೆ, ಹತ್ಯಾಕಾಂಡದ ಬಗ್ಗೆ ಗೊತ್ತಿಲ್ಲವೇ? ಅಥವಾ ಗೊತ್ತಿದ್ದು ಜಾಣ ಮೌನರಾಗಿದ್ದಾರೆಯೇ? ಅವರಿಗೆ ಗೊತ್ತಿಲ್ಲ ಎಂದರೆ ನಾವೇ ಹೇಳುತ್ತೇವೆ ಎಂದು ಪೋಸ್ಟ್ ಹಾಗೂ ವಿವರಣೆಗಳನ್ನು ಹಾಕಲಾಗುತ್ತಿದೆ.

ಕಾಶ್ಮೀರ್ ಫೈಲ್ಸ್ ಬಗ್ಗೆ ಭಾರತೀಯ ಸೇನೆಯ ನಿವೃತ್ತ ಪೈಲಟ್ ರಾಜೀವ್ ತ್ಯಾಗಿಯವರು ಬರೆದಿರುವುದು.

'ಕಾಶ್ಮೀರ್ ಫೈಲ್ಸ್' ಸಂಪೂರ್ಣವಾಗಿ ವಸ್ತುಸ್ತಿತಿಯ ತಿರುಚುವಿಕೆ ಮತ್ತು ಮುಸ್ಲಿಮರ ವಿರುದ್ಧ ದ್ವೇಶ ಹರಡಲು ಸಂಗಪರಿವಾರ ಪ್ರಾಯೋಜಿಸಿರುವ ಹಸಿ ಸುಳ್ಳುಗಳ ಕಟ್ಟುಕತೆ. ಕಾಶ್ಮೀರಿ ಪಂಡಿತರ ವಲಸೆಗೆ ಕುಮ್ಮಕ್ಕು ನೀಡಿದ್ದಿ ಬಿಜೆಪಿ ಮತ್ತು ಅಂದಿನ ಜಮ್ಮು ಕಾಶ್ಮೀರಕ್ಕೆ ವಾಜಪೇಯಿ ಮತ್ತು ಅಡ್ವಾಣಿ ಸೇರಿ ನೇಮಿಸಿದ್ದ ರಾಜ್ಯಪಾಲ ಜಗನ್ಮೋಹನ್. ಆಗ ಅದಿಕಾರದಲ್ಲಿದ್ದುದು ಬಿಜೆಪಿ ಬೆಂಬಲಿತ ವಿಪಿ ಸಿಂಗ್ ಸರಕಾರ. ಆರೆಸ್ಸೆಸ್ ಚೇಲಾ ಜಗನ್ಮೋಹನ್ ಹಿಂದೂಗಳಲ್ಲಿ ಬೀತಿ ಹುಟ್ಟಿಸಿ ಅದರಿಂದ ದೊಡ್ಡ ಮಟ್ಟದ ಪಂಡಿತರ ವಲಸೆಗೆ ಕಾರಣನಾದ. ಈ ಕಾಶ್ಮೀರಿ ಪಂಡಿತರ ವಲಸೆಗೆ ಮೊದಲು ಉಗ್ರರು ಸುಮಾರು 15,000 ಕಾಶ್ಮೀರಿ ಮುಸ್ಲಿಮರನ್ನು ಕೊಂದಿದ್ದರು, ಹಾಗೇ 300 + ಹಿಂದುಗಳನ್ನು ಜಮ್ಮು ಕಾಶ್ಮೀರದಲ್ಲಿ ಕೊಂದಿದ್ದರು. ಬಿಜೆಪಿ/ಆರೆಸ್ಸೆಸ್‌ಗಳು ಹೇಳುತ್ತಿರುವ ಸುಳ್ಳು ಯಾವ ಮಟ್ಟದ್ದು ಎಂದು ತಿಳಿಯಲು ಇಷ್ಟೇ ಸಾಕು."

ಸತ್ಯವು ಕಾಲ್ಪನಿಕತೆಯನ್ನು ಸ್ಟಂಪ್ ಮಾಡುತ್ತದೆ.

ಕಾಶ್ಮೀರಿ ಪಂಡಿತರ ಹತ್ಯೆಯ ಬಗ್ಗೆ ಕಾಶ್ಮೀರ ಪೊಲೀಸರು RTI ನಲ್ಲಿ ಕೊಟ್ಟ ಮಾಹಿತಿ. ಒಟ್ಟು ಕೊಲ್ಲಲ್ಪಟ್ಟ ಪಂಡಿತರು – 89 ಜನ, ಒಟ್ಟು ಕೊಲ್ಲಲ್ಪಟ್ಟ ಇತರರು 1635 ಜನ. (ಕಾಶ್ಮೀರ ಪೊಲೀಸರು RTI ನಲ್ಲಿ ಕೊಟ್ಟ ಮಾಹಿತಿ ಫೋಟೊ ಇಲ್ಲಿದೆ ನೋಡಿ)


Amruthedh Amr
2 hrs
Kashmir Police replies in the RTI on Kashmiri Pandits' killing. Total Pandits killed = 89. Total other faiths killed = 1635.

DISTRICT POLICE HEADQUARTERS SRINAGAR
Shergarhi, Opposite Iqbal Park Srinagar, Jammu & Kashmir 190009
Email. dposrinagar@jkpolice.gov.in Tele: 2311324 Fax: 2311322

No. HQR's/RTI/S-91/2021/ 1808-09
Dated. 27-11.2021

Shri P.P Kapoor,
429/2, G.T. Road Sangam Colony,
Samalkha-132101,
Panipat Haryana.
Cell No. 8708272105.

Subject: Information under RTI Act 2005.

In connection with the above cited subject, it is to inform that your RTI Application has been received in this office through Assistant Commissioner (Rev), Srinagar(PIO) letter No. DCS/SQ/RTI/2021/144-46 dated 17.11.2021, with the request to provide following information under RTI Act-2005, details of which are as under having been sought from concerned quarters:

Point No. 08: No. of Kashmir Pandits who were killed by terrorists attack since inception of militancy 1990 = 89


Point No. 09: No. of people of other faiths other than Kashmir Pandits who were killed by terrorists attacks = 1635.

(PIO)
Dy. Superintendent of Police,
Headquarter Srinagar.

Copy to the:
Assistant Commissioner (Rev)–PIO, Srinagar for information. This is in reference to your office letter No. & date quoted above.

31 ವರ್ಷಗಳಲ್ಲಿ ಕಾಶ್ಮೀರದಲ್ಲಿ ಸತ್ತ ಕಾಶ್ಮೀರಿ ಪಂಡಿತರ ಸಂಖ್ಯೆ: 89. ಇದೇ 31 ವರ್ಷಗಳಲ್ಲಿ ಹತ್ಯೆಯಾದ ದಲಿತರ ಸಂಖ್ಯೆ 1368. ಇನ್ನು ಹಲ್ಲೆಗೊಳಗಾದ, ಅತ್ಯಾಚಾರ ಮಾಡಲ್ಪಟ್ಟವರ ವಾರ್ಷಿಕ ಸರಾಸರಿ 5646 ಅಂದರೆ, 31 ವರ್ಷಗಳಿಂದ 1,75,026 ಜನ ಇಲ್ಲಿನ ಜಾತೀವಾದಿಗಳಿಂದ ಹಿಂಸೆ ಅನುಭವಿಸಿದ್ದಾರೆ.





ಅಸೆಂಬ್ಲಿ ಚುನಾವಣೆಗಳ ಫಲಿತಾಂಶ ಹೇಳುವುದೇನು?

ಕಾಂಗ್ರೆಸ್ ಪ್ರಮುಖ ಪ್ರತಿಪಕ್ಷವಾಗಿದ್ದು ಬಿಜೆಪಿ ಅತಿ ಹೆಚ್ಚಿನ ಲಾಭ ಗಳಿಸಿದೆ. ಕಾಂಗ್ರೆಸ್ ಪಕ್ಷ ಹಿಂದಿನ ಬಲದ ಅಸ್ಥಿಪಂಜರವಾಗಿದ್ದರೂ ವೈಭವದ ಕಾಲದಲ್ಲಿ ಇದ್ದ ರೀತಿಯಲ್ಲಿಯೇ ತಾನೇ ಪ್ರಮುಖ ಪಕ್ಷ ಎನ್ನುವ ರೀತಿಯಲ್ಲಿ ಅದು ವರ್ತಿಸುತ್ತಿದೆ. ಬಿಜೆಪಿ-ವಿರೋಧಿ ಪ್ರತಿಪಕ್ಷದಲ್ಲಿ ಎಸ್‌ಪಿ-ಆರ್‌ಎಲ್‌ಡಿ ಪ್ರಮುಖ ಶಕ್ತಿಯಾಗಿ ಹೊರಹೊಮ್ಮಿದೆ ಎನ್ನುವುದು ಗೊತ್ತಿದ್ದರೂ ಕಾಂಗ್ರೆಸ್ ಉತ್ತರ ಪ್ರದೇಶದಲ್ಲಿ ಎಲ್ಲ ಸ್ಥಾನಗಳಲ್ಲಿ ಸ್ಪರ್ಧಿಸಿದ್ದು ಯಾವ ಆಧಾರದಲ್ಲಿ? ಇದುವೇ ಅದರ ಧೋರಣೆಯನ್ನು ಬಯಲುಗೊಳಸುತ್ತದೆ.

ಪ್ರಕಾಶ್ ಕಾರಟ್

ಉತ್ತರ ಪ್ರದೇಶ, ಉತ್ತರಾಖಂಡ, ಪಂಜಾಬ್, ಮಣಿಪುರ ಮತ್ತು ಗೋವಾ-ಈ ಐದು ರಾಜ್ಯಗಳಿಗೆ ಈಚೆಗೆ ನಡೆದ ಚುನಾವಣೆಗಳಿಂದ ಮೂರು ಪ್ರಮುಖ ಫಲಿತಗಳನ್ನು ಗಮನಿಸಬಹುದಾಗಿದೆ.

ಮೊದಲನೆಯದಾಗಿ, ಉತ್ತರ ಪ್ರದೇಶದಲ್ಲಿ ಬಿಜೆಪಿ ಸತತ ಎರಡನೇ ಬಾರಿಗೆ ನಿರ್ಣಾಯಕ ಜಯ ಗಳಿಸಿರುವುದು ಹಾಗೂ ಉತ್ತರಾಖಂಡ, ಮಣಿಪುರ ಮತ್ತು ಗೋವಾದಲ್ಲಿ ಅದು ಸರ್ಕಾರಗಳನ್ನು ಉಳಿಸಿಕೊಂಡಿರುವುದು.

ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಕಡಿಮೆ ಬಹುಮತ ಗಳಿಸಿದ್ದರೂ ಅವುಗಳ ಮತಗಳ ಪ್ರಮಾಣ ಶೇಕಡ 3.65ರಷ್ಟು ಏರಿಕೆಯಾಗಿ ಒಟ್ಟು 45% ಮತಗಳನ್ನು ಗಳಿಸಿವೆ. ಬಿಜೆಪಿಯ ಯಶಸ್ಸಿಗೆ ಹಲವು ಕಾರಣಗಳಿವೆ. ಜಾತಿ ಗುಂಪುಗಳ ಉತ್ತಮ ನಿರ್ವಹಣೆ, ಭಾರಿ ಪ್ರಮಾಣದಲ್ಲಿ ಹಣಬಲ, ಸಾಮಾಜಿಕ ಮಾಧ್ಯಮ ಮತ್ತು ಸರ್ಕಾರಿ ಯಂತ್ರದ ಬಳಕೆ ಆ ಕಾರಣಗಳು. ಅದಕ್ಕಿಂತ ಮುಖ್ಯವಾಗಿ, ಹೆಚ್ಚುತ್ತಿರುವ ಹಿಂದೂ ಪ್ರಜ್ಞೆಯ ಪ್ರಮುಖ ಅಂಶವನ್ನು ತಳ್ಳಿಹಾಕುವಂತಿಲ್ಲ.

ಅನೇಕ ವರ್ಷಗಳಿಂದ, ಮೇಲ್ಜಾತಿಯವರು ಮಾತ್ರವೇ ಅಲ್ಲದೆ ಜನಸಂಖ್ಯೆಯ ಗಣನೀಯ ವಿಭಾಗದವರು ವಿಶಾಲ-ಹಿಂದೂ ಅಸ್ಮಿತೆಯನ್ನು ಮೈಗೂಡಿಸಿಕೊಂಡಿದ್ದಾರೆ. ರಾಷ್ಟ್ರೀಯವಾದದಲ್ಲಿ ಒಳಗೊಳಿಸಲಾಗಿರುವ ಹಿಂದೂತ್ವವನ್ನು 'ಇತರ', ಅಂದರೆ ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ ಟಾರ್ಗೆಟ್ ಎಂದು ಅಂಗೀಕರಿಸಲಾಗಿದೆ. ಸಿಎಸ್‌ಡಿಎಸ್-ಲೋಕನೀತಿ ನಡೆಸಿದ ಸಮೀಕ್ಷೆ ಹೇಳುವಂತೆ, ಬಿಜೆಪಿಯು ಮೇಲ್ಜಾತಿ, ಇತರ ಹಿಂದುಳಿದ ವರ್ಗಗಳು (ಒಬಿಸಿ) ಮತ್ತು ಮುಸ್ಲಿಮರು, ಯಾದವರು ಮತ್ತು ಜಾಟವರಿಂದ ಹೊರತಾದ ಪರಿಶಿಷ್ಟ ಜಾತಿ -ಹೀಗೆ ಎಲ್ಲ ವಿಭಾಗಗಳಲ್ಲಿ ಮೇಲುಗೈ ಪಡೆದಿದೆ. ನಿರ್ದಿಷ್ಟ ಜಾತಿ ಅಸ್ಮಿತೆಗಳನ್ನು ಒಳಗೊಳ್ಳುವಂಥ ವಿಶಾಲ-ಹಿಂದೂ ಯೋಜನೆಯು ಬಿಜೆಪಿ ಯಶಸ್ಸಿನಲ್ಲಿ ಕೆಲಸ ಮಾಡುವ ವ್ಯವಸ್ಥೆಯಾಗಿ ಪರಿಣಮಿಸಿದೆ.

ಸಮಾಜವಾದಿ ಪಕ್ಷ (ಎಸ್‌ಪಿ)-ರಾಷ್ಟ್ರೀಯ ಲೋಕ ದಳ (ಆರ್‌ಎಲ್‌ಡಿ) ಪಕ್ಷಗಳ ಸವಾಲು ವಿಫಲವಾಗಲು ಇದು ಕಾರಣವಾಗಿದೆ. ಉತ್ತರ ಪ್ರದೇಶವು ಹಿಂದಿ ಪ್ರದೇಶದ (ಬೆಲ್ಟ್) ಹೃದಯ ಭಾಗವಾಗಿದೆ (ಹಾರ್ಟ್‌ಲ್ಯಾಂಡ್) ಹಾಗೂ ಈ ವಲಯದಾದ್ಯಂತ ಇದೇ ರೀತಿಯ ಪ್ರಕ್ರಿಯೆ ಬೇರೆ ಬೇರೆ ಮಟ್ಟದಲ್ಲಿ ನಡೆಯುತ್ತಿದೆ. ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ರೈತರ ಸುದೀರ್ಘ ಹೋರಾಟ ನಡೆದಾಗ ಮತ್ತು ನಿರುದ್ಯೋಗ ಹಾಗೂ ಇತರ ಆರ್ಥಿಕ ಸಂಕಷ್ಟಗಳಿಂದ ಉಂಟಾದ ಅಸಮಾಧಾನವು ಸ್ವಲ್ಪ ಮಟ್ಟಿಗೆ ರಾಜಕೀಯ ಪರಿಣಾಮ ಉಂಟು ಮಾಡಿದ್ದರೂ ಇವುಗಳು ಸಮಾಜದಲ್ಲಿ ಆಳವಾಗಿ ನುಗ್ಗಿರುವ ಹಿಂದೂ-ಪರ ಪ್ರಜ್ಞೆಯನ್ನು ಭೌತಿಕವಾಗಿ ಬದಲಾಯಿಸಲು ಸಾಕಾಗಿಲ್ಲ ಎನ್ನುವುದು ಎದ್ದು ಕಾಣುತ್ತದೆ.

ಹಿಂದೂತ್ವ ಸಿದ್ಧಾಂತವನ್ನು ಎದುರಿಸಲು ಹಾಗೂ ಸಾಮಾಜಿಕ-ಸಾಂಸ್ಕೃತಿಕ-ಸೈದ್ಧಾಂತಿಕ ಪರ್ಯಾಯವನ್ನು ಕಟ್ಟಲು ನಿರಂತರ ರಾಜಕೀಯ ಮತ್ತು ಸೈದ್ಧಾಂತಿಕ ಕೆಲಸ ಅಗತ್ಯ ಎನ್ನುವುದನ್ನು ಈ ಸಾಮಾಜಿಕ ವಾಸ್ತವತೆಯು ತೋರಿಸಿಕೊಟ್ಟಿದೆ. ಧಾರ್ಮಿಕ ಕೋಮುವಾದದ ವಿಚಾರ ಮತ್ತು ಮೇಲ್ಜಾತಿ ಮೇಲುಗೈ ಪರಿಸ್ಥಿತಿ ಇವೆರಡನ್ನೂ ಎದುರಿಸಲು ಇದು ಅಗತ್ಯ.

ಎಡ ಪಕ್ಷಗಳು ಮಹತ್ವದ ಪಾತ್ರ ವಹಿಸ ಬೇಕಿರುವುದು ಇಲ್ಲೇ ಆಗಿದೆ. ಹಿಂದಿ ಹಾರ್ಟ್‌ಲ್ಯಾಂಡ್‌ನಲ್ಲಿ ಇದು ದೊಡ್ಡ ಶಕ್ತಿ ಆಗಿಲ್ಲದಿರಬಹುದು. ಆದರೆ, ಇಂಥ ಒಂದು ಪರ್ಯಾಯ ಕಟ್ಟುವ ಸೈದ್ಧಾಂತಿಕ ನೆಲೆಗಟ್ಟನ್ನು ಅದು ಹೊಂದಿದೆ. ನವ-ಉದಾರವಾದಿ ನೀತಿಗಳ ವಿರುದ್ಧ ಮತ್ತು ಹಿಂದೂತ್ವ ಮತ್ತು ಮನುವಾದಕ್ಕೆ ಸವಾಲೊಡ್ಡುವ ಪ್ರಜಾಸತ್ತಾತ್ಮಕ-ಜಾತ್ಯತೀತ ಸಾಮಾಜಿಕ-ಸಾಂಸ್ಕೃತಿಕ ಮೌಲ್ಯಗಳಿಗಾಗಿಯೂ ಈ ಪರ್ಯಾಯ ಇರಬೇಕಾಗುತ್ತದೆ. ಪ್ರಜಾಸತ್ತಾತ್ಮಕ ಹಾಗೂ ಜಾತ್ಯತೀತ ಶಕ್ತಿಗಳ ಮುನ್ನಡೆಗೆ ಇದು ಆಧಾರವಾಗಲಿದೆ.

ಐದು ರಾಜ್ಯಗಳಲ್ಲಿ, ಅದರಲ್ಲೂ ಮುಖ್ಯವಾಗಿ ಪಂಜಾಬ್‌ನಲ್ಲಿ ಕಾಂಗ್ರೆಸ್ ಹೀನಾಯವಾಗಿ ಪರಾಭವ ಗೊಂಡಿದ್ದು ಈ ಚುನಾವಣೆಯ ಇನ್ನೊಂದು ಪ್ರಮುಖ ಅಂಶವಾಗಿದೆ. ಪಂಜಾಬ್‌ನಲ್ಲಿ ಮೂರನೇ ಎರಡು ಬಹುಮತದೊಂದಿಗೆ ಕಾಂಗ್ರೆಸ್ ಆಡಳಿತದಲ್ಲಿತ್ತು. ಉತ್ತರಾಖಂಡ ಹೊರತು ಪಡಿಸಿ ಇತರ ಮೂರು ರಾಜ್ಯಗಳಲ್ಲಿ ಕಾಂಗ್ರೆಸ್ ನಿರ್ವಹಣೆ ಹಿಂದಿನ ಅಸೆಂಬ್ಲಿ ಚುನಾವಣೆಗಿಂತ ಕಳಪೆಯಾಗಿದೆ. ಮತ ಗಳಿಕೆ ಪ್ರಮಾಣದಲ್ಲೂ ಸ್ಥಾನ ಗಳಿಕೆಯಲ್ಲೂ ಅದರ ಸಾಧನೆ ತೀರಾ ಕಳಪೆಯಾಗಿದೆ. ಉತ್ತರ ಪ್ರದೇಶದಲ್ಲಿ ಪ್ರಿಯಾಂಕಾ ಗಾಂಧಿ ನೇತೃತ್ವದಲ್ಲಿ ಚುನಾವಣೆ ಎದುರಿಸಿದ್ದ ಕಾಂಗ್ರೆಸ್ ದಯನೀಯ ಶೇಕಡ 2.3 ಮತ ಗಳಿಸಲಷ್ಟೇ ಸಮರ್ಥವಾಗಿದೆ. ಕಳೆದ ಬಾರಿ ಏಳು ಸ್ಥಾನ ಹೊಂದಿದ್ದ ಅದು ಈಗ ಕೇವಲ ಎರಡು ಕ್ಷೇತ್ರಗಳಲ್ಲಿ ಜಯಿಸಿದೆ.

ಕಾಂಗ್ರೆಸ್ ಪಕ್ಷದ ಅವನತಿಯ ದೀರ್ಘ ಕಾಲೀನ ಪ್ರವೃತ್ತಿಯನ್ನು ಈ ಚುನಾವಣಾ ಫಲಿತಾಂಶ ದೃಢಪಡಿಸುತ್ತದೆ. ಕಾಂಗ್ರೆಸ್ ಪ್ರಮುಖ ಪ್ರತಿಪಕ್ಷವಾಗಿದ್ದು ಬಿಜೆಪಿ ಅತಿ ಹೆಚ್ಚಿನ ಲಾಭ ಗಳಿಸಿದೆ. ಕಾಂಗ್ರೆಸ್ ಪಕ್ಷ ಹಿಂದಿನ ಬಲದ ಅಸ್ಥಿಪಂಜರವಾಗಿದ್ದರೂ ವೈಭವದ ಕಾಲದಲ್ಲಿ ಇದ್ದ ರೀತಿಯಲ್ಲಿಯೇ ತಾನೇ ಪ್ರಮುಖ ಪಕ್ಷ ಎನ್ನುವ ರೀತಿಯಲ್ಲಿ ಅದು ವರ್ತಿಸುತ್ತಿದೆ. ಬಿಜೆಪಿ-ವಿರೋಧಿ ಪ್ರತಿಪಕ್ಷದಲ್ಲಿ ಎಸ್‌ಪಿ-ಆರ್‌ಎಲ್‌ಡಿ ಪ್ರಮುಖ ಶಕ್ತಿಯಾಗಿ ಹೊರಹೊಮ್ಮಿದೆ ಎನ್ನುವುದು ಗೊತ್ತಿದ್ದರೂ ಕಾಂಗ್ರೆಸ್ ಉತ್ತರ ಪ್ರದೇಶದಲ್ಲಿ ಎಲ್ಲ ಸ್ಥಾನಗಳಲ್ಲಿ ಸ್ಪರ್ಧಿಸಿದ್ದು ಯಾವ ಆಧಾರದಲ್ಲಿ? ಇದುವೇ ಅದರ ಧೋರಣೆಯನ್ನು ಬಯಲುಗೊಳಿಸುತ್ತದೆ.

ಕಾಂಗ್ರೆಸ್ ಪಕ್ಷ ಹಿಂದೂತ್ವ ಸಿದ್ಧಾಂತವನ್ನು ಅನುಕರಿಸಲು ಅಥವಾ ಅದರೊಂದಿಗೆ ರಾಜಿ ಮಾಡಿಕೊಳ್ಳಲು ಬಯಸುತ್ತದೆ. ಕೆಲವು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳನ್ನು ಹಾಗೂ ಕೇರಳದಲ್ಲಿ ಸಿಪಿಐ(ಎಂ) ಮತ್ತು ಎಲ್‌ಡಿಎಫ್‌ಅನ್ನು ಅದು ವಿರೋಧಿಸುತ್ತಿದೆ. ಗಾಂಧಿ ಕುಟುಂಬದ ಮೇಲೆ ಪೂರ್ಣವಾಗಿ ಅವಲಂಬನೆಯಾಗಿರುವುದನ್ನು ಮುರಿಯದೆ ಹೊಸ ಪರಿಣಾಮಕಾರಿ ನಾಯಕತ್ವ ಸೃಷ್ಟಿಸುವುದು ಹೇಗೆಂಬ ಸಂದಿಗ್ಧತೆಯಿಂದ ಕಾಂಗ್ರೆಸ್ ಪಕ್ಷ ಇನ್ನೂ ಹೊರಬಂದಿಲ್ಲ ಎಂದು ಕಾಣಿಸುತ್ತದೆ. ಇಂಥ ಪರಿಸ್ಥಿತಿಯಲ್ಲಿ, ಬಿಜೆಪಿಗೆ ಒಂದು ಪರಿಣಾಮಕಾರಿ ಪ್ರತಿಪಕ್ಷ ರೂಪಿಸುವ ನಿಟ್ಟಿನಲ್ಲಿ ಒಂದೊಂದೇ ರಾಜ್ಯದಲ್ಲಿ ಬಿಜೆಪಿ-ವಿರೋಧಿ ಶಕ್ತಿಗಳನ್ನು ಅಣಿನೆರೆಯಿಸುವುದು ಅಗತ್ಯವಾಗಿದೆ. ಅದರಲ್ಲಿ ಪ್ರಾದೇಶಿಕ ಪಕ್ಷಗಳು ಪ್ರಮುಖ ಪಾತ್ರ ವಹಿಸುತ್ತವೆ.

ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷ (ಆಪ್) ಅದ್ಭುತ ಜಯ ಗಳಿಸಿರುವುದು ಈ ಚುನಾವಣೆಯ ಮೂರನೇ ಪ್ರಮುಖ ಲಕ್ಷಣವಾಗಿದೆ. ದೆಹಲಿಯಲ್ಲಿ ಮಾಡಿದ್ದ ಅಭೂತಪೂರ್ವ ಸಾಧನೆಯನ್ನೇ ಅದು ಪಂಜಾಬ್‌ನಲ್ಲಿ ಪುನರಾವರ್ತಿಸಿದೆ. ಆದರೆ, ರಾಜ್ಯ ಸ್ಥಾನಮಾನ ಮೊಟಕುಗೊಂಡಿರುವ ದೆಹಲಿಯಂತಲ್ಲದೆ ಒಂದು ಪೂರ್ಣ ಪ್ರಮಾಣದ ರಾಜ್ಯದಲ್ಲಿ ಅದು ಗಳಿಸಿದ ಸಾಧನೆ ಗಮನಾರ್ಹವಾಗಿದೆ. ಸಿಖ್ಖರು, ಹಿಂದೂಗಳು ಮತ್ತು ಅವುಗಳ ಪ್ರಮುಖ ಉಪವಿಭಾಗಗಳ ದೊಡ್ಡ ಪ್ರಮಾಣದ ಮತಗಳನ್ನು ಆಪ್ ಪಡೆದಿರುವುದು ಚುನಾವಣಾ ವಿಧಾನ ಹೇಗಿತ್ತು ಎನ್ನುವುದನ್ನು ತೋರಿಸುತ್ತದೆ. ಪಂಜಾಬ್‌ನಲ್ಲಿ ಆಪ್ ಸರ್ಕಾರ ರಚನೆಯಾಗಿರುವುದು ಒಕ್ಕೂಟತತ್ವ ಮತ್ತು ರಾಜ್ಯಗಳ ಹಕ್ಕುಗಳನ್ನು ರಕ್ಷಿಸಲು ದೃಢ ಪ್ರಯತ್ನ ಮಾಡಲು ಪ್ರತಿಪಕ್ಷಗಳ ನೇತೃತ್ವದ ವಿವಿಧ ರಾಜ್ಯ ಸರ್ಕಾರಗಳು ಒಂದಾಗುವಲ್ಲಿ ಒಂದು ಹೆಜ್ಜೆಯಾಗಬಹುದು.

ಅನು: ವಿಶ್ವ

ನ್ಯಾಯ ಸಮ್ಮತ ತೀರ್ಪಿನ ಅನಿವಾರ್ಯತೆ......

ಪುಟ 3 ರಿಂದ

ಈ ತೀರ್ಪು ಹಲವು ಪ್ರಮುಖ ಪ್ರಶ್ನೆಗಳನ್ನು ನಮ್ಮ ಮುಂದಿರಿಸಿದೆ. ಮೌಲ್ಯಗಳು ನ್ಯಾಯ ನಿರ್ಣಯಗಳು ಕೂಡ ಸಾಮಾಜಿಕ ಸಂದರ್ಭ ಹಾಗೂ ವಾಸ್ತವಿಕ ಸನ್ನಿವೇಶಗಳನ್ನು ಆಧರಿಸಿರುತ್ತವೆ. ಹಲವು ವಿಭಿನ್ನ ಹಿತಾಸಕ್ತಿಗಳು ಇರುವ ಸಮಾಜದಲ್ಲಿ ಕಾಲಕಾಲಕ್ಕೆ ಮೌಲ್ಯಗಳ ಪುನರ್ ವ್ಯಾಖ್ಯಾನ ಮತ್ತು ಕಂಡುಕೊಳ್ಳುವಿಕೆ ಅತ್ಯಗತ್ಯವಾಗಿ ಆಗಬೇಕು. ವಿವಾದ, ಚರ್ಚೆಗಳಿಂದ ಸಮಾಜ ತನ್ನ ಭವಿಷ್ಯದ ಹೊಸ ಹಾದಿ ಮೌಲ್ಯಗಳನ್ನು ಕಂಡುಕೊಳ್ಳಬೇಕು ಹಾಗೂ ರೂಡಿಸಿಕೊಳ್ಳಬೇಕು. ಪ್ರಜಾಪ್ರಭುತ್ವ, ಸ್ವಾತಂತ್ರ್ಯ-ಸಮಾನತೆ, ಪ್ರಗತಿ ಅಂತಹ ಉನ್ನತ ಮೌಲ್ಯಗಳ ಸಾಧನೆಯತ್ತ ಸಾಗಲು ಚರ್ಚೆ ವಿವಾದಗಳು ನಮ್ಮನ್ನು ಪ್ರೇರೇಪಿಸಬೇಕು. ವರ್ತಮಾನದಲ್ಲಿ ಸಂವಿಧಾನ, ನ್ಯಾಯ ನಿಯಮಗಳ ವ್ಯಾಖ್ಯಾನವೂ ಕೂಡ ಭವಿಷ್ಯವನ್ನು ಉನ್ನತೀಕರಿಸುವಂತಿರಬೇಕು. ಇಲ್ಲವಾದಲ್ಲಿ ಐತಿಹಾಸಿಕ ನಿರ್ಣಾಯಕ ಸನ್ನಿವೇಶದಲ್ಲಿ ಅದು ಕಪ್ಪು ಚುಕ್ಕೆಯಾಗಬಹುದು.

ಸಂವಿಧಾನದ ಉದ್ದೇಶಿತ ಸಾಮಾಜಿಕ ಬದಲಾವಣೆಗೆ ಶಿಕ್ಷಣ ಒಂದು ಪ್ರಮುಖ ಸಾಧನ. ಶಿಕ್ಷಣ ಎಲ್ಲರಿಗೂ ಸಿಗುವಂತಾಗ ಬೇಕು. ಅದು ಸಾಮಾಜಿಕ ಬದಲಾವಣೆಯನ್ನು ಉತ್ತೇಜಿಸುತ್ತದೆ. ಸಾಮಾಜಿಕ ವಸ್ತುಸ್ಥಿತಿ ಪಕ್ವಗೊಳ್ಳದ ಹೊರತು ಕಾನೂನು ಮೂಲಕ ತರಲು ಹೊರಡುವ ಸಾಮಾಜಿಕ ಬದಲಾವಣೆಗೆ ಹಲವು ಪ್ರತಿರೋಧ ನಿರ್ಮಿತವಾಗುವುದು ಸಹಜ. ಅದನ್ನು ಅರಿತು ವಿವೇಕದೊಂದಿಗೆ ವಿವೇಚಿಸಿ ಶಿಕ್ಷಣದ ಹಕ್ಕಿನ ಪ್ರಾಧಾನ್ಯತೆಯನ್ನು ಎತ್ತಿ ಹಿಡಿಯಲು ಇದ್ದ ಅವಕಾಶವನ್ನು ಬಳಸುವಲ್ಲಿ ನ್ಯಾಯಾಲಯ ಸೋತಿರುವುದು ವಿಷಾದನೀಯ. ಕಾನೂನಿನ ಮೂಲಕ ಸಾಮಾಜಿಕ ಬದಲಾವಣೆಗೆ ತೊಡರುಗಳೇ ಹೆಚ್ಚಿರುವಾಗ ಸಾಮಾಜಿಕ ಬದಲಾವಣೆಗೆ ಶಿಕ್ಷಣ ಒಂದು ಪ್ರಮುಖ ಆಧಾರವಾಗಲಿದೆ. ನ್ಯಾಯ ನಿಷ್ಠೂರತೆಗಿಂತ ನ್ಯಾಯ ಸಮ್ಮತ ತೀರ್ಪು ಈ ಕಾಲದ ಅನಿವಾರ್ಯವಾಗಿದೆ ಎಂಬ ನ್ಯಾಯಶಾಸ್ತ್ರೀಯ ತತ್ವಕ್ಕೆ ಹಿಜಾಬ್ ಕುರಿತ ತೀರ್ಪಿನಿಂದ ಸೋಲಾಗಿದೆ.

ಈ ತೀರ್ಪಿನ ಹಲವು ಮಿತಿಗಳ ನಡುವೆಯೂ ಪ್ರಸಕ್ತವಾಗಿ ವಿದ್ಯಾರ್ಥಿನಿಯರ ಶಿಕ್ಷಣಕ್ಕೆ ಎದುರಾಗಿರುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ರಾಜ್ಯ ಸರ್ಕಾರಕ್ಕೆ ಅವಕಾಶಗಳು ಕೂಡ ಅದರಲ್ಲೇ ಲಭ್ಯ ಇವೆ. ಶಿರವಸ್ತ್ರದ ಕಾರಣಕ್ಕೆ ತರಗತಿಗಳಿಂದ ಮತ್ತು ಪರೀಕ್ಷೆಗಳಿಂದ ದೂರ ಉಳಿಯುತ್ತಿರುವ ಗಂಭೀರ ಸ್ಥಿತಿಯಿಂದ ಪಾರು ಮಾಡಲು ಸರ್ಕಾರ ಕೂಡಲೇ ಮಧ್ಯಪ್ರವೇಶ ಮಾಡಬೇಕು. ಆಳುವ ಪಕ್ಷದ ಅಜೆಂಡಾಕ್ಕಿಂತಲೂ ಸಮಾಜದ ಒಳಿತು ವಿದ್ಯಾರ್ಥಿಗಳ ಭವಿಷ್ಯ ಮುಖ್ಯ ಎಂದು ಅರಿತು ಸಂವಿಧಾನದ ಮೇಲೆ ಪ್ರಮಾಣವಚನ ಮಾಡಿದ ಈ ಸರ್ಕಾರ ಯೋಚಿಸಬೇಕು.

ಕೃಷಿ ಬಜೆಟ್ ಹೇಗಿರಬೇಕು?

ಕೃಷಿ ಅಭಿವೃದ್ಧಿ ಹಾಗೂ ಸೌಹಾರ್ದ ಕರ್ನಾಟಕದ ಜನತಾ ಪರ್ಯಾಯ ನೀತಿ ವಚನಭ್ರಷ್ಟ. ಸರಕಾರಗಳ ಎದುರಲ್ಲಿ ಜನಪರ್ಯಾಯ ಬಜೆಟ್ ಹೇಗಿರಬೇಕು

ಸರ್ಕಾರಗಳು ಪ್ರತಿಬಾರಿ ಬಜೆಟ್ ಮಂಡಿಸುವಾಗ ಅದು ದೇಶದ, ಜನರ ಅಭಿವೃದ್ಧಿಯನ್ನು ಸಾಧಿಸಲೆಂದೇ ರೂಪಿಸಲಾಗಿದ್ದು ಎಂದೇ ಹೇಳುತ್ತವೆ. ಜನ ಮರುಳುಗೊಳಿಸುವ ಬಜೆಟ್ ಸ್ಕೀಮುಗಳುಗಳನ್ನು ಬಿಟ್ಟರೆ ಸಮೂಹ ಸರ್ವಾಂಗೀಣಾಭಿವೃದ್ಧಿ ಸಾಧಿಸಲು ಸಾಧ್ಯವಾಗಲ್ಲ. ಹಾಗಾದರೆ ಈ ಬಜೆಟ್‌ಗಳ ಜತನ, ಪರಿಣಾಮ ಏನು, ಅವು ಜನದ್ರೋಹಿ ಹೇಗೆ? ಜನಪರ ಬಜೆಟ್ ಎಂದರೆ ಏನು? ಎನ್ನುವ ಕುರಿತು ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಯು. ಬಸವರಾಜ ಇಲ್ಲಿ ವಿವರಿಸಿದ್ದಾರೆ.



1994 ರಲ್ಲಿಯೇ ನಮ್ಮ ಒಕ್ಕೂಟ ಹಾಗೂ ರಾಜ್ಯ ಸರಕಾರಗಳು ಜಗತ್ತಿನ ಅತಿ ದೊಡ್ಡ ಶ್ರೀಮಂತ ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಪರವಾದ ಮುಕ್ತ ವ್ಯಾಪಾರದ ಅಸಮಾನ ಒಪ್ಪಂದಗಳನ್ನು ಮತ್ತು ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳನ್ನು ಸಮರ್ಪಕವಾದ ಚೌಕಾಸಿಗೊಳಪಡಿಸದೇ ಒಪ್ಪಿ ಕೊಂಡಿವೆ. ಮಾತ್ರವಲ್ಲಾ, ಅವುಗಳನ್ನು ವ್ಯಾಪಕವಾಗಿ ಜಾರಿಗೊಳಿಸುತ್ತಿವೆ. ಕಳೆದರೆಡು ಸಂಸದೀಯ ಚುನಾವಣೆಗಳು ದೇಶದಲ್ಲಿನ ರಾಜಕಾರಣ ಬಲಪಂಥೀಯ ತಿರುವು ಪಡೆದಿರುವುದನ್ನು ತೋರುತ್ತಿವೆ. ಹೀಗಾಗಿ ಲೂಟಿಕೋರ ಕಾರ್ಪೋರೇಟ್ ಕಂಪನಿಗಳು ತಮ್ಮ ಲೂಟಿಯನ್ನು ಪ್ರತಿರೋಧವಿಲ್ಲದೆ ಮುಂದುವರೆಸಲು ಕೋಮುವಾದದ ಜೊತೆ ಕೈ ಜೋಡಿಸಿವೆ. ಆದ್ದರಿಂದ, ಅವುಗಳ ಬಜೆಟ್‌ಗಳು ಅದೇ ನೀತಿಗಳ ಆಧಾರದಲ್ಲಿಯೆ ರೂಪುಗೊಳ್ಳುತ್ತವೆಂಬುದು ಸ್ಪಷ್ಟವಾಗಿದೆ.

ಲೂಟಿಕೋರ ಜಾಗತೀಕರಣ ಉದಾರೀಕರಣ, ಮತ್ತು ಖಾಸಗೀಕರಣದ ನೀತಿಗಳಿಂದಾಗಿ ಜಗತ್ತಿನ ಮೇಲೆ ದೀರ್ಘ ಕಾಲದ ಅದಾಗಲೇ ಬಿಕ್ಕಟ್ಟು ಹೇರಲ್ಪಟ್ಟಿದೆ.ಇದರ ಭಾಗವಾಗಿಯೇ ನಮ್ಮ ದೇಶ ಹಾಗೂ ರಾಜ್ಯವೂ ಬಿಕ್ಕಟ್ಟಿಗೆ ಸಿಲುಕಿದೆ. ಇದರ ಪರಿಣಾಮವಾದ ಕೈಗಾರಿಕಾ ಬಿಕ್ಜಟ್ಟಿನಿಂದಾಗಿ, ಲಕ್ಷಾಂತರ ಸಣ್ಣ ಕೈಗಾರಿಕೆಗಳು ಮುಚ್ಚಲ್ಪಡುತ್ತಿವೆ. ಸಾರ್ವಜನಿಕ ರಂಗದ ಉದ್ದಿಮೆಗಳು, ಸಂಸ್ಥೆಗಳು ಖಾಸಗೀಕರಣಕ್ಕೊಳಪಡುತ್ತಿವೆ. ಇವುಗಳಿಂದಾಗಿ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಉದ್ಯೋಗವನ್ನು ಕಳೆದುಕೊಳ್ಳುತ್ತಿದ್ದಾರೆ. ಅದೇ ರೀತಿ, ಉದ್ಯೋಗ ದ ಭದ್ರತೆಯನ್ನು ಕಳೆದುಕೊಳ್ಳುತ್ತಿದ್ದಾರೆ. ನಿರುದ್ಯೋಗ ವ್ಯಾಪಕಗೊಳ್ಳುತ್ತಿದೆ. ಕೃಷಿರಂಗದ ಬಿಕ್ಕಟ್ಟು ಮತ್ತಷ್ಟು ಆಳಗೊಂಡಿದೆ. ಕೃಷಿ ಕೂಲಿಕಾರರು ಬಹುತೇಕ ಉದ್ಯೋಗಾವಕಾಶಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಹಸಿವಿನ ಅಪೌಷ್ಠಿಕತೆಯ ಸಾವುಗಳು ಹೆಚ್ಚುತ್ತಿವೆ. ರೈತರು ಕೃಷಿ ಉತ್ಪನ್ನಗಳಿಗೆ ಅಗತ್ಯ ಬೆಲೆಗಳು ಸಿಗದೇ, ಸಾಲಬಾಧಿತರಾಗಿ ಪ್ರತಿ ಅರ್ಧ ಗಂಟೆಗೊಬ್ಬ ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ ಅಥವಾ ಅವರ ಜಮೀನುಗಳು ಸಾಲಿಗರ ತೆಕ್ಕೆಗೆ ಸೇರುವಂತಾಗುತ್ತಿದೆ. ಇದು ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರನ್ನಾಗಿಸುತ್ತಿದೆ. ಅದೇ ರೀತಿ, ಬಡವರನ್ನು ಮತ್ತಷ್ಟು ಕಡುಬಡತನಕ್ಕೆ ದೂಡುತ್ತಿದೆ. ಇದರಿಂದಾಗಿ ಬಡವರು, ಮಹಿಳೆಯರು, ದಲಿತರು, ಆದಿವಾಸಿಗಳು ಹಾಗೂ ಅಲ್ಪ ಸಂಖ್ಯಾತರ ಮೇಲಿನ ದೌರ್ಜನ್ಯಗಳು ದಿನೇ ದಿನೇ ಹೆಚ್ಚುತ್ತಿವೆ. ಕೋಮುವಾದ, ಜಾತಿವಾದ ಬೆಳೆಯುತ್ತಿದೆ. ಅದೇ ರೀತಿ, ಇದರ ಪರಿಣಾಮವಾಗಿ ದೇಶದಲ್ಲಿ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳು ಹಾಗೂ ಒಟ್ಟಾರೆ ಪ್ರಜಾಪ್ರಭುತ್ವ ವೆಂಬುದು ಹಿಂದಿನ ಸ್ಥಿತಿಗೆ ಹೋಲಿಸಿದರೇ ದುರ್ಬಲಗೊಳ್ಳುತ್ತಿದೆ. ಸರ್ವಾಧಿಕಾರ ಬೆಳೆಯುತ್ತಿದೆ.

ದೇಶದ ಹಾಗೂ ರಾಜ್ಯದ ಅಭಿವೃದ್ಧಿಯ ಕಾರ್ಯಗಳನ್ನು ಶ್ರೀಮಂತ ವರ್ಗಕ್ಕೆ ಬಿಡಲಾಗಿದೆ. ಈ ಶ್ರೀಮಂತ ವರ್ಗವೇ ಅಭಿವೃದ್ಧಿಯ ಹರಿಕಾರರೆಂದು ಹಾಡಿ ಹೊಗಳಲಾಗುತ್ತಿದೆ. ಸರಕಾರಗಳು ಅಂದಿನಿಂದ ಬಹುತೇಕ ನಿಜ ಅಭಿವೃದ್ಧಿಯ ದಿಶೆಯಲ್ಲಿ ತನ್ನ ಜವಾಬ್ದಾರಿಗಳನ್ನು ಕಳಚಿಕೊಳ್ಳುತ್ತಾ ಬರುತ್ತಿವೆ. ಜನತೆಗಾಗಿ ವ್ಯಯಿಸುವುದನ್ನು ನಿಲ್ಲಿಸಲಾಗುತ್ತಿವೆ. ಬದಲಿಗೆ, ಶ್ರೀಮಂತ ವರ್ಗಕ್ಕೆ ನೆರವಾಗುವುದು ತನ್ನ ಆದ್ಯ ಕರ್ತವ್ಯಗಳೆಂದು ಅವು ಭಾವಿಸಿವೆ. ಇದರಿಂದಾಗಿ, ದೇಶದ ಜನ ಸಾಮಾನ್ಯರಿಂದ ಸಂಗ್ರಹಿಸಲಾಗುವ ಎಲ್ಲ ತೆರಿಗೆಯ ಹಣವೂ, ಇತರೆ ಎಲ್ಲ ಪ್ರಾಕೃತಿಕ ಸಂಪನ್ಮೂಲಗಳು ಜನ ಸಾಮಾನ್ಯರ ಸಂಕಷ್ಠಗಳ ಪರಿಹಾರಕ್ಕಾಗಿ ವಿನಿಯೋಗಿಸಲ್ಪಡುವ ಬದಲು ಶ್ರೀಮಂತ ಸಮುದಾಯಗಳು, ಕಾರ್ಪೋರೇಟ್ ವಲಯಗಳಿಗೆ ವಿನಿಯೋಗಿಸಲ್ಪಡುತ್ತಿವೆ. ಸರಕಾರಗಳು ಬಹುತೇಕ ಕಲ್ಯಾಣ ರಾಜ್ಯದ ಕಾರ್ಯಕ್ರಮಗಳನ್ನು ಕೈ ಬಿಡುತ್ತಿವೆ.

ಒಂದು ಕಡೆ ಜನರಿಂದ ಆರಿಸಲ್ಪಟ್ಟ ಮತ್ತು ಜನರ ತೆರಿಗೆಯ ಲಕ್ಷಾಂತರ ಕೋಟಿ ರೂ ಹಣದ ಮೂಲಕ ಕಾರ್ಯ ನಿರ್ವಹಿಸುವ ಸರಕಾರ ಜನ ಸಾಮಾನ್ಯರ ಸಮಸ್ಯೆಗಳ ಪರಿಹಾರಕ್ಕೆ ಕ್ರಮವಹಿಸುವ ಬದಲು ಗ್ರಾಮೀಣ ಹಾಗೂ ನಗರಗಳ ಭಾರೀ ಶ್ರೀಮಂತ ಸಮುದಾಯಕ್ಕೆ ಕಾರ್ಯ ನಿರ್ವಹಿಸುತ್ತದೆ ಮತ್ತು ಅದು ದೇಶದ ಮೂಲಭೂತ ಸಮಸ್ಯೆಗಳಾದ, ಬಡತನ, ನಿರುದ್ಯೋಗ, ಭಿಕ್ಷಾಟನೆ, ಅಪೌಷ್ಠಿಕತೆಯ ಸಾವುಗಳು, ಜಾತಿ ಹಾಗೂ ಲಿಂಗ ತಾರತಮ್ಯ, ಅಸ್ಪೃಶ್ಯಾಚರಣೆ, ಧಾರ್ಮಿಕ ಸೌಹಾರ್ಧತೆ, ದಲಿತರು, ಮಹಿಳೆಯರು, ಅಲ್ಪ ಸಂಖ್ಯಾತರ ಮೇಲಿನ ದೌರ್ಜನ್ಯಗಳ ತಡೆ ಇವುಗಳ ನಿವಾರಣೆ ತನ್ನ ಹೊಣೆಗಾರಿಕೆಯಲ್ಲವೆಂದು ನುಣುಚಿ ಕೊಳ್ಳುತ್ತಾ, ಅವುಗಳ ನಿವಾರಣೆಯ ಕರ್ತವ್ಯಗಳನ್ನು ಶ್ರೀಮಂತ ವರ್ಗಗಳು ನಿಭಾಯಿಸಲಿವೆಯೆಂದು ಹೇಳುತ್ತಿದೆ. ಆದರೇ, ನಿಜ ವಾಸ್ತವವೇನೆಂಬುದು ಈ ಮೇಲೆ ನಾವೀಗಾಗಲೇ ಗಮನಿಸಿದ್ದೇವೆ.

ಉಳುವವನು ಭೂ ಒಡೆಯನಾಗದೇ ಮೂಲಭೂತ ಸಮಸ್ಯೆಗಳಿಗೆ ಪರಿಹಾರವಿಲ್ಲ:

ದೇಶದ ಈ ಮೂಲ ಭೂತ ಸಮಸ್ಯೆಗಳ ಪರಿಹಾರಕ್ಕಾಗಿ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಪರಿಹಾರಗಳನ್ನುಹುಡುಕಿಕೊಳ್ಳಲಾಗಿತ್ತು.ಅಲ್ಲಿ ಅದಕ್ಕಾಗಿ ಸಮರಶೀಲ ಚಳುವಳಿಗಳನ್ನು ಸಂಘಟಿಸಲಾಗಿತ್ತು. ಉಳುವವನನ್ನು ಭೂ ಒಡೆಯನಾಗಿಸುವ ಘೋಷಣೆ ಸ್ವಾತಂತ್ರ್ಯ ನಂತರ ಈಡೇರದೇ ಹೋದುದೇ, ಇಂದಿನ ಬಿಕ್ಕಟ್ಟಿನ ಮೂಲವಾಗಿದೆ. ಉಳುವವನನ್ನು ಭೂ ಒಡೆಯನನ್ನಾಗಿಸುವ ಮೂಲಕ ಹಲವು ಸಮಸ್ಯೆಗಳ ಇತ್ಯರ್ಥಕ್ಕೆ ಅಗತ್ಯವಾದ ಪರಿಸ್ಥಿತಿಯನ್ನು ನಿರ್ಮಿಸಬೇಕಾಗಿತ್ತು. ಇದು ಒಂದೆಡೆ ಗ್ರಾಮೀಣ ಪ್ರದೇಶದ ಅಧಿಕಾರದ ಹಿಡಿತ ಹೊಂದಿ ಜಾತಿ ತಾರತಮ್ಯ ಅಸ್ಪೃಶ್ಯಾಚರಣೆ ಹಾಗೂ ಬಡತನವನ್ನು ಮುನ್ನಡೆಸುತ್ತಿರುವ ಭಾರೀ ಭೂಮಾಲಕತ್ವಕ್ಕೆ ಕೊಡಲಿ ಏಟು ನೀಡುತ್ತಿತ್ತು. ಇನ್ನೊಂದೆಡೆ ದೇಶದ ಸಮಸ್ತ ಆಹಾರದ ಪರಾವಲಂಬನೆಯನ್ನು ಕೈಗಾರಿಕೆಗಳಿಗೆ ಕಚ್ಚಾ ಮಾಲುಗಳನ್ನು ಹಾಗೂ ಕೈಗಾರಿಕಾ ಉತ್ನನ್ನಗಳಿಗೆ ಗ್ರಾಮೀಣ ಮಾರುಕಟ್ಟೆಯನ್ನು ಒದಗಿಸಲು ನೆರವಾಗುತ್ತಿತ್ತು.

ಆದರೇ, ಉಳುವವನನ್ನು ಭೂ ಒಡೆಯನನ್ನಾಗಿಸುವ ಬದಲು ಅವನನ್ನು ಒಕ್ಕಲೆಬ್ಬಿಸಿ ಭೂಹೀನ ಕೂಲಿಕಾರನನ್ನು ಹಾಗೂ ಕೈಗಾರಿಕೆಗಳಿಗೆ ಕಾರ್ಮಿಕನನ್ನಾಗಿ ಒದಗಿಸಲು ಕ್ರಮವಹಿಸಲಾಯಿತು. ಇದು ಅವನ ಆದಾಯವನ್ನು ಮತ್ತಷ್ಟು ಕುಗ್ಗಿಸಿತು. ಉಳಿದ ಭೂ ಒಡೆಯನ ಮೂಲಕವೇ ಆರ್ಥಿಕತೆಯನ್ನು ಕಟ್ಟಿಕೊಳ್ಳಲು ಅವನಿಗೆ ಎಲ್ಲ ರೀತಿಯ ಆಧುನಿಕ ತಂತ್ರಜ್ಞಾನ ಹಾಗೂ ಹಣಕಾಸಿನ ನೆರವು ಮುಂತಾಗಿ ಒದಗಿಸಲಾಯಿತು. ಇದರಿಂದಾಗಿ, ಗ್ರಾಮೀಣ ಪ್ರದೇಶದಲ್ಲಿ ಮತ್ತಷ್ಟು ಅಸಮಾನ ಬೆಳವಣಿಗೆಯಾಗಲು ವೇದಿಕೆಯನ್ನು ನಿರ್ಮಿಸಿತು. ಇದು ಗ್ರಾಮೀಣ ಪ್ರದೇಶದಲ್ಲಿ ಬಡತನ, ಜಾತಿ ಹಾಗೂ ಲಿಂಗ ತಾರತಮ್ಯ, ಅಸ್ಪೃಶ್ಯಾಚರಣೆ, ಮೌಢ್ಯತೆ, ಮುನ್ನಡೆಸುವ ಶಕ್ತಿಯನ್ನು ದುರ್ಬಲಗೊಳಿಸುವ ಬದಲು ಬಲಗೊಳಿಸಿತು.

ಮಾತ್ರವಲ್ಲಾ, ಅಂತಹ ದೌರ್ಜನ್ಯದ ವಿರುದ್ದ ಹೋರಾಟದ ಕಣದಲ್ಲಿದ್ದ ಉಳುವವನಿಗೆ ಭೂಮಿ ನೀಡುವ ಮೂಲಕ ಮತ್ತು ಅದರ ಅಭಿವೃದ್ಧಿಗಾಗಿ ನೆರವಾಗುವ ಮೂಲಕ ಸ್ವಾವಲಂಬಿಯನ್ನಾಗಿಸಿ ಬಲಪಡಿಸುವ ಬದಲು, ಅವರನ್ನು ಮತ್ತಷ್ಟು ಪರಾವಲಂಬಿಯಾಗಿಸುವ ಮೂಲಕ ದುರ್ಬಲಗೊಳಿಸಲಾಯಿತು.

ಇದು ಕೈಗಾರಿಕೆಗಳ ಬೆಳವಣಿಗೆಗಳಿಗೆ ಗ್ರಾಮೀಣ ಮಾರುಕಟ್ಟೆಯನ್ನು ವಿಸ್ತರಿಸುವ ಬದಲು ಕುಗ್ಗಿಸಿತು. ಇದು ಬಿಕ್ಕಟ್ಟಿಗೆ ದಾರಿಯಾಯಿತು. ಇದರಿಂದಾಗಿ, ಕೈಗಾರಿಕೆಗಳ ಉತ್ಪನ್ನಗಳಿಗೆ ಕೊಂಡು ಕೊಳ್ಳುವ ಶಕ್ತಿಯು ದೊರೆಯದಂತಾಗಿ ಕೈಗಾರಿಕೆಗಳು ಮುಚ್ಚುವಂತಹ ಪರಿಸ್ಥಿತಿಗೆ ಕಾರಣವಾಯಿತು.

ಭೂಮಿ ಕಳೆದುಕೊಂಡ ನಗರ ಪ್ರದೇಶದಲ್ಲಿ ದುಡಿಯಲು ಬಂದ ಜನತೆಗೆ ಕನಿಷ್ಠ ವೇತನವು ಇಲ್ಲದಂತಾದುದು ಕೂಡಾ ಕೊಂಡುಕೊಳ್ಳುವ ಶಕ್ತಿಯ ವಿಸ್ತರಣೆಗೆ ತೊಂದರೆ ಒದಗಿಸಿತು.

ಆದ್ದರಿಂದ ಈಗಲೂ, ಉಳುವವನನ್ನ ಭೂಮಿಯ ಒಡೆಯನಾಗಿಸುವ (ಅದು ಖಾಸಗಿಯದಾಗಲೀ, ಸರಕಾರದ್ದಾಗಲೀ, ಅರಣ್ಯ ಭೂಮಿಯೇ ಆಗಿರಲಿ) ಆತನ ಕೃಷಿ ಅಭಿವೃದ್ಧಿಗೆ ನೆರವಾಗುವ ಮತ್ತು ಆತನನ್ನು ಸ್ವಾವಲಂಬಿಯಾಗಿಸುವ ನೀತಿಗಳು ಮತ್ತು ಬಜೆಟ್‌ಗಳು ಇಂದಿನ ಪ್ರಾಥಮಿಕ ಅವಶ್ಯಕತೆಗಳಾಗಿವೆ.

ಕೊಳ್ಳೆಯ ಮಾರುಕಟ್ಟೆ – ರಕ್ಷಿತ ಮಾರುಕಟ್ಟೆ

ಮತ್ತೊಂದು ಪ್ರಮುಖ ವಿಚಾರವೆಂದರೇ, ರೈತರ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಬೆಲೆಗಳ ಏರಿಳಿತಗಳ ಮೂಲಕ ಭಾರಿ ಶ್ರೀಮಂತ ವ್ಯಾಪಾರಿಗಳು ಕೊಳ್ಳೆ ಹೊಡೆಯಲು ಬಿಡಲಾಯಿತು. ಅದೇ ಸಂದರ್ಭದಲ್ಲಿ ಕೃಷಿ ಉತ್ಪನ್ನಗಳ ಉತ್ಪಾದನಾ ವೆಚ್ಚವನ್ನು ಬೀಜ, ಗೊಬ್ಬರ, ಕ್ರಿಮಿನಾಶಕ, ಕೃಷಿ ಉಪಕರಣಗಳು ಮತ್ತು ದುಬಾರಿ ಬಡ್ಡಿ ಸಾಲ ಹಾಗೂ ಇಂಧನದ ಬೆಲೆ ಏರಿಕೆಗಳ ಮೂಲಕ ಹೆಚ್ಚಿಸಿ ಕೊಳ್ಳೆ ಹೊಡೆಯಲಾಯಿತು. ಇದು

ಪುಟ 10 ಕ್ಕೆ

ಸೌಹಾರ್ದ ಕರ್ನಾಟಕ ಸಂರಕ್ಷಣೆಗೆ ಪರ್ಯಾಯ ರಾಜಕೀಯ

ರಾಜಕಾರಣ ಬಲಪಂಥೀಯ ತಿರುವು ಪಡೆಯುವದರೊಂದಿಗೆ ದೇಶ ಹಾಗೂ ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳ ಆಟ ಅಪಾಯಕಾರಿಯಾಗಿ ಬೆಳೆಯುತ್ತಿದೆ. ಸರಕಾರವೇ ಕೋಮು ನೆಲೆಯಲ್ಲಿ ತಾರತಮ್ಯ ಎಸಗುವುದು ನಡೆದಿದೆ. ಇದು ಸಂವಿಧಾನ ಹೇಳಿದ ಜಾತ್ಯತ್ರೀತ ಸ್ವರೂಪದ ಸವೆತದ ಪರಿಣಾಮವಾಗಿದೆ. ಜಾತ್ಯಾತೀತತ ಅಥವಾ ಧರ್ಮ ನಿರಪೇಕ್ಷತೆಯೆಂದರೇ, ರಾಜಕಾರಣದಿಂದ ಮತ ಧರ್ಮವನ್ನು ದೂರವಿರಿಸುವುದಾಗಿದ್ದು ಸರಕಾರ ಹಾಗೂ ಸಾರ್ವಜನಿಕ ಸಂಸ್ಥೆಗಳು ಅದನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸುವಂತೆ ಕ್ರಮವಹಿಸ ಬೇಕು. ಜಾತ್ಯಾತೀತತೆಯೆಂದರೆ ರಾಜಕಾರಣದಲ್ಲಿ ಎಲ್ಲಾ ಧರ್ಮಗಳಿಗೂ ಸಮಾನ ಅವಕಾಶ ನೀಡುವುದೆಂಬ ವಾದವನ್ನು ಮತ್ತು ಹಿಂದುತ್ವ ವಾದಿ ಮತಾಂಧ ಶಕ್ತಿಗಳು ಹೇಳುವ ಹಾಗೆ ಜಾತ್ಯತೀತತೆ ಎಂದರೇ ರಾಜಕಾರಣದಲ್ಲಿ ಹಿಂದುತ್ವಕ್ಕೆ ಆದ್ಯತೆಯ ಅವಕಾಶ ನೀಡುವುದು ಎಂಬ ವಾದ ಗಳನ್ನು ಮತ್ತು ಆಚರಣೆಗಳನ್ನು ಸೈದ್ಧಾಂತಿಕವಾಗಿ, ರಾಜಕೀಯವಾಗಿ ಸೆಣಸ ಬೇಕಾಗಿದೆ. ಮತಾಂಧ ಶಕ್ತಿಗಳ ದ್ವೇಷಮಯ ರಾಜಕೀಯವನ್ನು ಮತ್ತು ಅವರ ಅರಾಜಕತೆಯ ಕೃತ್ಯಗಳನ್ನು ಕಠಿಣವಾಗಿ ವ್ಯವಹರಿಸಿ ತಡೆಯಲು ಕ್ರಮವಹಿಸಬೇಕು. ಅದೇ ರೀತಿ, ರಾಜ್ಯದೊಳಗಿನ ಸೌಹಾರ್ಧ ಪರಂಪರೆಯನ್ನು ರಕ್ಷಿಸಲು ಮತ್ತು ಅದನ್ನು ವಿಸ್ಥರಿಸಲು ಅಗತ್ಯ ಕ್ರಮವಹಿಸಬೇಕು. ಅದೇ ರೀತಿ, ಕರ್ನಾಟಕ ರಾಜ್ಯ ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆಯ ವಿಧೇಯಕ, ಜಾನುವಾರು ಹತ್ಯ ನಿಷೇಧ ತಿದ್ದುಪಡಿ ಕಾಯ್ದೆ ಮುಂತಾದ ಪ್ರಜಾಪ್ರಭುತ್ವ ವಿರೋಧಿಯಾದ ಜಾತಿವಾದ ಹಾಗೂ ಕೋಮುವಾದಕ್ಕೆ ಕುಮ್ಮಕ್ಕು ನೀಡುವ ಕಾಯ್ದೆಗಳನ್ನು ವಾಪಾಸು ಪಡೆಯಬೇಕು. ಶಿಕ್ಷಣದಲ್ಲಿ ಮತಾಂಧತೆಯನ್ನು ಬೆರೆಸುವ ಮತ್ತು ವ್ಯಾಪಾರೀಕರಣ ಮಾಡುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಹಿಂಪಡೆಯಬೇಕು. ಪ್ರಾಥಮಿಕ ಹಂತದಿಂದಲೇ ಸೌಹಾರ್ಧ ಶಿಕ್ಷಣಕ್ಕೆ ಆದ್ಯತೆ ನೀಡಬೇಕು.

ಒಕ್ಕೂಟವಾದಿ ಸ್ವರೂಪ ರಕ್ಷಣೆ:

ಒಕ್ಕೂಟ ಸರಕಾರ ಸಂವಿಧಾನ ಕೊಡ ಮಾಡಿದ ರಾಜ್ಯ ಸರಕಾರಗಳ ಅಧಿಕಾರಗಳನ್ನು ವಿವಿಧ ರೀತಿಯಲ್ಲಿ ಉಲ್ಲಂಘಿಸುತ್ತಾ ಸರ್ವಾಧಿಕಾರಿಯಾಗಿ ಕೇಂದ್ರೀಯ ನೀತಿಗಳನ್ನು ಹೇರುತ್ತಿದೆ. ಕೃಷಿ, ಶಿಕ್ಷಣ ರಂಗಗಳ ವಿಚಾರದಲ್ಲಿ ಇದನ್ನು ಕಂಡಿದ್ದೇವೆ. ರಾಜ್ಯ ಸರಕಾರದ ತೆರಿಗೆ ವ್ಯವಸ್ಥೆಯಲ್ಲಿ ಹಸ್ತಕ್ಷೇಪ ನಡೆಸಿ ಸಂಪನ್ಮೂಲಗಳ ಕೊರತೆ ಉಂಟು ಮಾಡುತ್ತಿದೆ. ಈ ಉಲ್ಲಂಘನೆಗಳ ತಡೆಗೆ ಕ್ರಮವಹಿಸಬೇಕು. ಅಧಿಕಾರ ಮತ್ತು ಸಂಪನ್ಮೂಲಗಳ ವಿಕೇಂದ್ರೀಕರಣಕ್ಕೆ ಕ್ರಮವಹಿಸಬೇಕು.

ಇಂತಹ ನೀತಿಗಳು ಮತ್ತು ಇವುಗಳಿಗೆ ಕ್ರಮವಹಿಸುವ ಬಜೆಟ್‌ಗಳು ಕರ್ನಾಟಕವನ್ನು ಸಮೃದ್ದ ಹಾಗೂ ಸೌಹಾರ್ಧ ಕರ್ನಾಟಕ ವನ್ನಾಗಿಸಲಿವೆ.

ರಾಜ್ಯದ ಬಜೆಟ್‌ಗಳು ನವಉದಾರವಾದಿ ಆರ್ಥಿಕ ನೀತಿಗಳ ಜಾಡಿನಲ್ಲಿ ನಡೆಯುತ್ತಾ ಇದೀಗ ಅದರ ರಹದಾರಿಯನ್ನೇ ಸೃಷ್ಟಿಸಿ ಬಿಟ್ಟಿವೆ. ಪರಿಣಾಮವಾಗಿ ಜನತೆಯ ಸಂಕಷ್ಟಗಳು ಹೆಚ್ಚುತ್ತಾ ಬಂದಿವೆ. ಇದೀಗ 2 ವರ್ಷ ಕೋವಿಡ್‌–19 ಮತ್ತು ಸಂಬಂಧಿತ ಲಕ್ಡೌನ್ ಪರಿಣಾಮವಾಗಿ ಈ ಸಂಕಷ್ಟಗಳು ತೀವ್ರಗೊಂಡಿವೆ. ಅವುಗಳನ್ನು ಗ್ರಹಿಸಿ ಪರಿಹರಿಸುವಲ್ಲಿ ಅಧಿಕಾರರೂಢ ಪಕ್ಷಗಳ ಸರ್ಕಾರಗಳು ವಿಫಲತೆ ಕಾಣಲು ಪ್ರಧಾನ ಕಾರಣವೇ ಆ ಪಕ್ಷಗಳು ನವಉದಾರವಾದಕ್ಕೆ ಬದ್ಧವಾಗಿರುವುದು. ಈ ಹಿನ್ನೆಲೆಯಲ್ಲಿ ಪರ್ಯಾಯ ಜನಪರ ಬಜೆಟ್ ಮುಂದಿರುವ ಕೈಗಾರಿಕೆ ಮತ್ತು ಕಾರ್ಮಿಕರ ಪ್ರಶ್ನೆಗಳನ್ನು ಪರಿಶೀಲಿಸಿದ್ದಾರೆ ಹಿರಿಯ ಕಾರ್ಮಿಕ ಮುಖಂಡರಾದ **ಕೆ.ಎನ್. ಉಮೇಶ್**ರವರು.

ಜನ ಪರ್ಯಾಯ ಅಧಿವೇಶನದ ಸಂದರ್ಭದಲ್ಲಿ ವಿಶೇಷ ಲೇಖನಗಳು-ಪುಟ ೮, ೯

ಪರ್ಯಾಯ ಜನಪರ ಬಜೆಟ್ ಕೈಗಾರಿಕೆ ಮತ್ತು ಕಾರ್ಮಿಕರ ಪ್ರಶ್ನೆಗಳು



ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನದ ಬೆಳವಣಿಗೆಯ (GDP) ದರವು ಸದಾ ರಾಷ್ಟ್ರೀಯ ಆಂತರಿಕ ಉತ್ಪನ್ನದ ಬೆಳವಣಿಗೆಯ (GDP) ದರಕ್ಕಿಂತ ಹೆಚ್ಚಿರುತ್ತಿತ್ತು. ಪ್ರಥಮ ಬಾರಿಗೆ ಶೇ.–0.5 ರಷ್ಟು ಋಣಾತ್ಮಕ ಬೆಳವಣಿಗೆ ದರವನ್ನು 2020–21 ರಲ್ಲಿ ಕಾಣುತ್ತಿದೆ. 2016–17 ರಲ್ಲಿ ಶೇಕಡ 13.3 ಬೆಳವಣಿಗೆ ದರ ಹೊಂದಿದ್ದ ರಾಜ್ಯವು ಪ್ರತಿ ವರ್ಷ ನಿರಂತರವಾಗಿ ಕಡಿಮೆಯಾಗುತ್ತಾ ಬಂದಿದೆ.

ಚಾಲ್ತಿ ಬೆಲೆಗಳಲ್ಲಿ 2016–17 ರಿಂದ 2020–21ರವರೆಗಿನ 5 ವರ್ಷಗಳ ಕ್ರೋಢೀಕೃತ ಸರಾಸರಿ ಬೆಳವಣಿಗೆ ದರ (CAGR) ಕೃಷಿ ವಲಯದಲ್ಲಿ ಶೇಕಡ 16.6, ಕೈಗಾರಿಕಾ ವಲಯದಲ್ಲಿ ಶೇಕಡ 6.1, ಸೇವಾ ವಲಯದಲ್ಲಿ ಶೇಕಡ 11.6 ರಷ್ಟಾಗಿದ್ದರೆ, ರಾಜ್ಯದಲ್ಲಿನ ಒಟ್ಟಾರೆ ಮೌಲ್ಯವರ್ಧನೆ (GSVA) ಶೇಕಡ 11 ರಷ್ಟಾಗಿದೆ. 2016–17ರಲ್ಲಿ ರೂ.12.08 ಲಕ್ಷಕೋಟಿಯಿದ್ದ ಒಟ್ಟಾರೆ ರಾಜ್ಯದ ಆಂತರಿಕ ಉತ್ಪನ್ನವು 2020–21 ರಲ್ಲಿ ರೂ.17.31 ಕೋಟಿಯಾಗಿದೆ ಎಂದು ಅಂದಾಜಿಸಲಾಗಿದೆ. ರಾಜ್ಯದ ಒಟ್ಟಾರೆ ಆಂತರಿಕ ತಲಾ ಉತ್ಪನ್ನವು ರೂ.1.86 ಲಕ್ಷದಿಂದ ರೂ.2.60 ಲಕ್ಷಕ್ಕೆ ಹೆಚ್ಚಳವಾಗಿದೆ, ಕ್ರೋಢೀಕೃತ ಸರಾಸರಿ ಬೆಳವಣಿಗೆ ದರವು 10.4 ಶೇಕಡವಾಗಿದೆ. 2016–17 ರಲ್ಲಿ ರೂ.169898 ರೂಗಳಿದ್ದ ತಲಾ ಆದಾಯವು 2020–21 ರಲ್ಲಿ ರೂ.236451 ರಷ್ಟಾಗಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿನ ತಲಾ ಆದಾಯವು ಗರಿಷ್ಟ ರೂ.541638 ಆಗಿರುವಾಗ ಗುಲ್ಬರ್ಗ ಜಿಲ್ಲೆಯಲ್ಲಿನ ತಲಾ ಆದಾಯವು 1,00,446 ರೂಗಳಾಗಿದೆ.

ರಾಜ್ಯದ ಸಾಲದ ಹೊರೆ:

2019–20 ರಲ್ಲಿ ಪರಿಷ್ಕೃತ ಅಂದಾಜಿನಂತೆ 3,25,969 ಕೋಟಿ ರೂಗಳಿಷ್ಟಿದ್ದ ಸಾಲ, 2020–21 ರಲ್ಲಿ ಆಯವ್ಯಯ ಅಂದಾಜಿನಂತೆ 3,68,692 ಕೋಟಿ ರೂಗಳಿಗೆ ಹೆಚ್ಚಾಗಲಿದೆ. 2015–16 ರಲ್ಲಿ 1,83,320 ಕೋಟಿ ರೂಗಳಿದ್ದ ರಾಜ್ಯದ ಸಾಲವು 2016–17 ರಲ್ಲಿ ರೂ.2,21,320 ಕೋಟಿಗೆ ಮತ್ತು 2017–18 ರಲ್ಲಿ ರೂ.2,46,232 ಕೋಟಿಗೆ ಹಾಗೂ 2018–19 ರಲ್ಲಿ ರೂ.2,85,238 ಕೋಟಿ ರೂಗಳಿಗೆ ಹೆಚ್ಚಳವಾಗಿದೆ. ರಾಜ್ಯ ಬಿಜೆಪಿ ಸರ್ಕಾರವು 2019–20 ರಲ್ಲಿ 48,490.01 ಕೋಟಿ ರೂ ಮತ್ತು 2020–21 ರಲ್ಲಿ 52,917.50 ಕೋಟಿ ರೂಗಳ ಸಾಲ ಮಾಡಿದೆ. 2022–23 ರ ಬಜೆಟ್‌ನಲ್ಲಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿಯವರು 72,000 ರೂಗಳ ಸಾಲಗಳನ್ನು ಪಡೆಯಲು ಅಂದಾಜಿಸಿದ್ದಾರೆ. 2021–22 ರಲ್ಲಿ 63100 ಕೋಟಿ ರೂಗಳ ಸಾಲ ಪಡೆದಿದ್ದಾರೆ.

ಕೇಂದ್ರ ತೆರಿಗೆಗಳಲ್ಲಿನ ರಾಜ್ಯದ ಪಾಲು 2,328 ಕೋಟಿ ರೂಗಳಷ್ಟು ಅಂದರೆ ಶೇಕಡ 7.53 ಇಳಿಕೆಯಾಗುವ ನಿರೀಕ್ಷೆಯಿದೆ. ಸರಕು ಮತ್ತು ಸೇವಾ ತೆರಿಗೆ ಹೊರತುಪಡಿಸಿ 2019–20 ರಲ್ಲಿ 19,840 ಕೋಟಿ ರೂಗಳಷ್ಟಿರುವ ಕೇಂದ್ರದ ಅನುದಾನವು 2020–21 ರಲ್ಲಿ 15,454.46 ಕೋಟಿ ರೂಗಳಿಗೆ ಇಳಿಕೆಯಾಗಿದೆ. ಅಂದರೆ 4,385.54 ಕೋಟಿ ರೂಗಳ ಅನುದಾನವನ್ನು ಕೇಂದ್ರ ಬಿಜೆಪಿ ಸರ್ಕಾರವು ಕಡಿಮೆ ಮಾಡಿದೆ. ಒಟ್ಟಾರೆ ಕೇಂದ್ರೀಯ ಅನುದಾನವು 2019–20 ರಲ್ಲಿ ರೂ.37,088.83 ಕೋಟಿ ಇದ್ದದ್ದು 2020–21 ರಲ್ಲಿ ರೂ.31,570.46 ಕೋಟಿಗಳಿಗೆ (ಶೇಕಡ 14.87 ರಷ್ಟು) ಇಳಿಕೆಯಾಗಿದೆ. ಅಂತೆಯೇ 2019–20 ಕ್ಕೆ ಹೋಲಿಸಿದಾಗ 2020–21 ರಲ್ಲಿ ರಾಜ ಸ್ವಜಮೆಯಲ್ಲಿ ಕೇಂದ್ರಿಯ ಅನುದಾನವು 20.92 ಶೇಕಡದಿಂದ 17.55 ಕ್ಕೆ ಇಳಿಕೆಯಾಗಿದೆ. ಕೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ರಾಜ್ಯಕ್ಕೆ ಅನುದಾನವನ್ನು ನಿರಂತರವಾಗಿ ಕಡಿಮೆ ಮಾಡುತ್ತಿದೆ. ಪರಿಣಾಮವಾಗಿ ಕೇಂದ್ರದ ಯೋಜನೆಗಳಿಗೂ ಕೇಂದ್ರದ ಪಾಲು ಕನಿಷ್ಟಕ್ಕೆ ಇಳಿದಿದ್ದು, ಬಹುತೇಕ ಪಾಲನ್ನು ರಾಜ್ಯ ಸರ್ಕಾರವೇ ಭರಿಸಬೇಕಾಗಿ ಬಂದಿದೆ.

ರಾಷ್ಟ್ರದಲ್ಲಿನ ರಾಜ್ಯಗಳಲ್ಲಿ ಕೈಗಾರಿಕಾ ಅಭಿವೃದ್ಧಿ ಆಧಾರಿತವಾಗಿ 4ನೇ ಸ್ಥಾನದಲ್ಲಿರುವ ರಾಜ್ಯದ ಒಟ್ಟಾರೆ ಮೌಲ್ಯವರ್ಧನೆಗೆ ಕೈಗಾರಿಕೆಯ ಕೊಡುಗೆಯ ಶೇಕಡವಾರು ಪಾಲು ಶೇಕಡ 19.4 ರಷ್ಟಾಗಿದೆ. ಆದರೆ ಪ್ರಥಮ ಸ್ಥಾನದಲ್ಲಿರುವ ಗುಜರಾತಿನಲ್ಲಿ ಅದರ ಪಾಲು ಶೇಕಡ 48.2, ತಮಿಳುನಾಡಿನಲ್ಲಿ ಶೇಕಡ 33 ಮತ್ತು ಮಹಾರಾಷ್ಟ್ರದಲ್ಲಿ ಕೈಗಾರಿಕಾ ವಲಯದ ಪಾಲು ಶೇಕಡ 28.4 ರಷ್ಟಿದೆ.

2021–22 ರ ಸಾಲಿನಲ್ಲಿ ನೊಂದಾಯಿತ 532 ನೂತನ ಕಾರ್ಖಾನೆಗಳನ್ನು ಒಳಗೊಂಡಂತೆ ಒಟ್ಟು 17,034 ನೊಂದಾಯಿತ ಕಾರ್ಖಾನೆಗಳಲ್ಲಿ 16,08,924 ಕಾರ್ಮಿಕರಿದ್ದಾರೆ. ಆದರೆ ದೊಡ್ಡ ಪ್ರಮಾಣದ ಉದ್ಯೋಗಗಳಿಗೆ ಕಾರಣವಾಗಿರುವ ಅತಿ ಸಣ್ಣ, ಸಣ್ಣ ಮತ್ತು ಮದ್ಯಮ ಗಾತ್ರದ ಕಾರ್ಖಾನೆಗಳಲ್ಲಿ ಹಲವು ಕಾರ್ಖಾನೆಗಳು ಮುಚ್ಚಿವೆ. ಪರಿಣಾಮವಾಗಿ 2019–20 ರಲ್ಲಿ 1.30 ಲಕ್ಷ ಬಂಡವಾಳ ಹೂಡಿಕೆಯೊಂದಿಗೆ 60.21 ಲಕ್ಷ ಉದ್ಯೋಗ ಒದಗಿಸಿದ್ದ 8.75 ಲಕ್ಷ ಅತಿ ಸಣ್ಣ, ಸಣ್ಣ ಮತ್ತು ಮದ್ಯಮಗಾತ್ರದ ಕಾರ್ಖಾನೆಗಳ ಸಂಖ್ಯೆ 2021 ನವೆಂಬರ್ 30 ರ ವೇಳೆಗೆ ಉದ್ಯಮ ನೊಂದಾಯಿತ ಪೋರ್ಟಲ್ ಮಾಹಿತಿಯಂತೆ 0.60 ಲಕ್ಷ ಕೋಟಿ ರೂ ಹೂಡಿಕೆಯೊಂದಿಗೆ 36.31 ಲಕ್ಷ ಉದ್ಯೋಗದೊಂದಿಗೆ 3.32 ಲಕ್ಷಕ್ಕೆ ಕುಸಿದಿದೆ. ಅಂದರೆ 23.90 ಲಕ್ಷ ಉದ್ಯೋಗಿಗಳು ಕೆಲಸ ಕಳೆದುಕೊಂಡಿದ್ದಾರೆ. 5.43 ಲಕ್ಷ ಕಾರ್ಖಾನೆ ಮುಚ್ಚಿವೆ ಎಂಬ ಅಂಶವನ್ನು ಮನಗಾಣಬಹುದಾಗಿದೆ.



ಆದಕಾರಣ ಇತ್ತೀಚೆಗೆ ಸಣ್ಣ ಕೈಗಾರಿಕೆಗಳ ಮಾಲೀಕರ ಸಂಘವು ಸಹಾ ಎರಡು ದಿನಗಳ ಮುಷ್ಕರ ನಡೆಸಿ, ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು. ಅವರ ಪ್ರಮುಖ ಪ್ರಶ್ನೆ ಎಂದರೆ ತಯಾರಿಕಾ ವಲಯದ ದೊಡ್ಡ ಕೈಗಾರಿಕೆಗಳು, ಬಹುರಾಷ್ಟ್ರೀಯ ಕಂಪನಿಗಳ ಬೇಡಿಕೆಗಳ ಆಧಾರಿತ ಬಿಡಿ ಭಾಗಗಳ ತಯಾರಿಸುವ ಅದಕ್ಕಾಗಿ ನಿರ್ದಿಷ್ಟ ಕಾಲ ಮಿತಿಯ ಒಪ್ಪಂದ ಆಧಾರಿತ ಉತ್ಪಾದನ ವೆಚ್ಚ ಆಧರಿಸಿ ಉತ್ಪಾದಿಸುವ ಕಾರ್ಖಾನೆಗಳು ಇವು. ಇತ್ತೀಚಿನ ದಿನಗಳಲ್ಲಿ ನಿರಂತರವಾಗಿ ಏರಿಕೆಯಾಗುತ್ತಿರುವ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು, ಅನಿಲದ ಬೆಲೆ, ತೆರಿಗೆಗಳು, ಜಿಎಸ್‌ಟಿ, ಮುಂತಾದ ಕಾರಣದ ಜೊತೆಗೆ ಲಾಕ್ಡೌನ್ ಹಾಗೂ ವರ್ಷಂ ಪ್ರತಿ ಉತ್ಪಾದನೆ ವೆಚ್ಚ ಕಡಿತ ಬೇಡಿಕೆ ಮುಂದಿಡುವ ಕಂಪನಿಗಳ ಸವಾಲನ್ನು ಎದುರಿಸಲಾಗದೆ, ಈ ಕಾರ್ಖಾನೆಗಳು ದೊಡ್ಡ ಪ್ರಮಾಣದಲ್ಲಿ ಮುಚ್ಚಿವೆ.

ಅದೇ ವೇಳೆ ರಾಷ್ಟ್ರದಲ್ಲಿನ ಒಟ್ಟಾರೆ ಆಂತರಿಕ ಉತ್ಪನ್ನಕ್ಕೆ ಬ್ಯಾಂಕ್‌ಗಳ ಸಾಲದ ಅನುಪಾತ 2019 ರಲ್ಲಿ ಶೇಕಡ 25 ರಷ್ಟು ಇದ್ದದ್ದು 2021 ರಲ್ಲಿ ಶೇಕಡ 58 ಕ್ಕೆ ಏರಿಕೆ ಆಗಿದೆ. ಆದರೆ ಹೆಚ್ಚು ಠೇವಣಿ ಮತ್ತು ಉಳಿತಾಯ ಹೊಂದಿರುವ ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನಕ್ಕೆ ಬ್ಯಾಂಕ್ ಸಾಲದ ಅನುಪಾತ 2021 ರಲ್ಲಿ ಶೇಕಡ 40.51 ರಷ್ಟಾಗಿದೆ. ಅಂದರೆ ರಾಜ್ಯದಲ್ಲಿ ಬ್ಯಾಂಕ್‌ಗಳಲ್ಲಿರುವ ಠೇವಣಿ ಮತ್ತು ಉಳಿತಾಯ ರಾಜ್ಯದ ಉದ್ದಿಮೆ ಮತ್ತು ಜನತೆಗೆ ಸಾಲದ ರೂಪದಲ್ಲಿ ಲಭಿಸುವ ಬದಲು, ಇತರೆ ರಾಜ್ಯಗಳಿಗೆ ಲಭಿಸುತ್ತಿದೆ. ಪರಿಣಾಮವಾಗಿ ಸಾಲದ ಮೇಲೆ ಅವಲಂಬಿತವಾದ ಸಣ್ಣ ಮತ್ತು ಮಧ್ಯಮ ಗಾತ್ರದ ಕಾರ್ಖಾನೆಗಳು ವಂಚಿತವಾಗಿವೆ.

ವಲಯವಾರು ಉದ್ಯೋಗದ ಪಾಲು:

ಕೃಷಿ ವಲಯದಲ್ಲಿನ ಉದ್ಯೋಗಿಗಳ ಪ್ರಮಾಣ 2011–12 ರಲ್ಲಿ ಶೇಕಡ 49.8 ರಷ್ಟಿದ್ದದ್ದು 2019–20 ರಲ್ಲಿ 46.6ಕ್ಕೆ ಇಳಿದಿದೆ. ಶೇಕಡ 12.6 ರಷ್ಟಿದ್ದ ಕೈಗಾರಿಕಾ ವಲಯದ ಪಾಲು 12ಕ್ಕೆ ಇಳಿದಿದೆ. ಶೇಕಡ 37.6 ರಷ್ಟಿದ್ದ ಸೇವಾ ವಲಯದ ಪಾಲು 41.4 ಕ್ಕೆ ಹೆಚ್ಚಳವಾಗಿದೆ.

ಇದನ್ನು ರಾಜ್ಯ ಸರ್ಕಾರವು ಬದಲಾಯಿಸುವ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಶ್ರಮ ಶಕ್ತಿಯನ್ನು ಕೈಗಾರಿಕಾ ವಲಯಕ್ಕೆ ರೂಪಿಸುವ ನಿಟ್ಟಿನಲ್ಲಿ ಅಗತ್ಯ ಕೌಶಲ್ಯ ಹಾಗೂ ಕೈಗಾರಿಕಾ ವಲಯ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತಿದೆ.

ಆದರೆ ಸಣ್ಣ, ಮಧ್ಯಮಗಾತ್ರದ ಕಾರ್ಖಾನೆಗಳ ಪರಿಸ್ಥಿತಿ ಮೇಲಿನಂತಿರುವಾಗ, ದೊಡ್ಡ ಕಾರ್ಖಾನೆಗಳು ನೀತಿ ಆಯೋಗವು ರೂಪಿಸುತ್ತಿರುವ ಕೈಗಾರಿಕೆಗಳು 4.0 ಮುನ್ನೋಟದ ದಿಕ್ಕಿನಲ್ಲಿ ಕೃತಕ ಬುದ್ಧಿಮತ್ತೆ ಮತ್ತು ರೋಬೋಟಿಕ್ಸ್ ಕಡೆ ಮುಖ ಮಾಡಿವೆ. ಆ ನಿಟ್ಟಿನಲ್ಲಿ ಕೈಗಾರಿಕಾ ತರಬೇತಿ ಪಡೆದಿರುವ ಕಾರ್ಮಿಕರನ್ನು ಹೊರದಬ್ಬಿ, ಡಿಪ್ಲಮೊ ಹಾಗೂ ಇಂಜಿನಿಯರಿಂಗ್ ಪದವಿ ಪಡೆದಿರುವವರನ್ನು ನೇಮಿಸಿಕೊಳ್ಳಲು ಮುಂದಾಗಿವೆ.

ಅದಕ್ಕಾಗಿ ಇತ್ತೀಚಿಗೆ ರಾಜ್ಯ ಸರ್ಕಾರವು ಕೈಗಾರಿಕಾ ಸ್ಥಾಯಿ ಆದೇಶಗಳ ಕಾಯ್ದೆಗೆ ತಿದ್ದುಪಡಿ ಮಾಡಿ ಅನುವುಗೊಳಿಸಿರುವ "ನಿಶ್ಚಿತ ಕಾಲಾವಧಿಯ ಕಾರ್ಮಿಕ" ರನ್ನು ನೇಮಿಸಿಕೊಳ್ಳುವ ಶತಪ್ರಯತ್ನಗಳನ್ನು ಕಾರ್ಖಾನೆಗಳು ನಡೆಸಿವೆ.

ಸಂಘ ಕಟ್ಟಿದೊಡನೆ ಕಾರ್ಮಿಕರನ್ನು ಅಮಾನತ್ತು ಮಾಡುವ, ವರ್ಗಾಯಿಸುವ, ಬಲಿಪಶು ಮಾಡುವ ಇಲ್ಲ ಸ್ವಯಂ ನಿವೃತ್ತಿ ಪ್ರಕಟಿಸಿ ಹೊರದೂಡುವ ಯತ್ನ ನಡೆಸಿವೆ. ಇದಾವುದು ಸಾಧ್ಯವಾಗದಿದ್ದರೆ ಕಾರ್ಮಿಕ ಕಾನೂನುಗಳ ಸಂಹಿತಿಕರಣದಿಂದ ಲಭಿಸಿರುವ ಸರ್ಕಾರದ ಅನುಮತಿ ಇಲ್ಲದೆ 300ಕ್ಕಿಂತ ಕಡಿಮೆ ಉದ್ಯೋಗಿಗಳನ್ನು ಹೊಂದಿರುವ ಕಾರ್ಖಾನೆಗಳನ್ನು ರಿಟ್ರೆಂಚ್ ಮಾಡುವ, ಕಾರ್ಖಾನೆ ಮುಚ್ಚುವ ಅವಕಾಶಗಳನ್ನು ಬಳಸಲು ತುದಿಗಾಲಲ್ಲಿ ನಿಂತಿವೆ. ಅದಕ್ಕೆ ಪೂರಕ ಎಂಬಂತೆ ರಾಜ್ಯ ಸರ್ಕಾರವು ಸಹಾ ಕಾರ್ಮಿಕ ಸಂಹಿತೆಗಳ ಅಡಿ ನಿಯಮಾವಳಿಗಳನ್ನು ರೂಪಿಸಿ ಜಾರಿಗೊಳಿಸಲು ಮುಂದಾಗಿದೆ.

ಇದರಿಂದಾಗಿ ರಾಜ್ಯದ ತಯಾರಿಕಾ ವಲಯದ ಕಾರ್ಖಾನೆಗಳಲ್ಲಿನ ನಿವ್ವಳ ಮೌಲ್ಯವರ್ಧನೆಯಲ್ಲಿನ ಶೇಕಡ 18.04 ರಷ್ಟಿರುವ ಕಾರ್ಮಿಕರ ವೇತನದ ಪಾಲನ್ನು ಕಡಿಮೆ ಮಾಡಿ, ಶೇಕಡ 45.70 ರಷ್ಟಿರುವ ಮಾಲೀಕರ ಲಾಭದ ಪಾಲನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವ ಯತ್ನದಲ್ಲಿ ಬಂಡವಾಳವು ಮುಂದಾಗಿದೆ. ಪರಿಣಾಮವಾಗಿ ಸಂಘಟಿತ ವಲಯದಲ್ಲಿನ ಉದ್ಯೋಗಗಳ ಸಂಖ್ಯೆ ಕುಸಿಯಲಿದೆ, ಅಸಂಘಟಿತ ವಲಯದ ಉದ್ಯೋಗಗಳನ್ನು ಅರೆಸುವ ಕಾರ್ಮಿಕರು ಹೆಚ್ಚಲಿದ್ದಾರೆ. ಇವರೊಂದಿಗೆ ರಾಜ್ಯದಲ್ಲಿರುವ 65.45 ಲಕ್ಷ ಅಂತರರಾಜ್ಯ ವಲಸೆ ಕಾರ್ಮಿಕರು ಸೇರಿ ರಾಜ್ಯದಲ್ಲಿ ದೊಡ್ಡ ಪ್ರಮಾಣದ ಅಸಂಘಟಿತ ಕಾರ್ಮಿಕರ ಸಂಖ್ಯೆಯಿದೆ. ಕೋವಿಡ್ ಲಾಕ್ಡೌನ್‌ನಿಂದಾಗಿ ನಗರಗಳಿಂದ ಗ್ರಾಮಾಂತರ ಪ್ರದೇಶಕ್ಕೆ ಮರು ವಲಸೆ ಹೋಗಿದ್ದ ಜನತೆ ಗ್ರಾಮಾಂತರ ಪ್ರದೇಶದಲ್ಲಿ ಜೀವನೋಪಾಯ ಅರೆಸುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಒಟ್ಟು

ಪುಟ 14 ಕ್ಕೆ

ಪಿಂಚಣಿ-ಪುನರ್ವಸತಿ ಕಲ್ಪಿಸಲು ಸರ್ಕಾರ ಭರವಸೆ: ದೇವದಾಸಿ ಮಹಿಳೆಯರ ಧರಣಿ ಅಂತ್ಯ



ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದಿಂದ ನಡೆಯುತ್ತಿದ್ದ ಧರಣಿ ಸ್ಥಳಕ್ಕೆ ಸಚಿವ ಹಾಜಲ್ಲಪ ಆಚಾರ್ ಭಾಗವಹಿಸಿ ಭರವಸೆ ನೀಡಿದ ಹಿನ್ನೆಲೆಯಲ್ಲಿ ಧರಣಿ ಅಂತ್ಯಗೊಂಡಿದೆ.

2022ರ ರಾಜ್ಯ ಬಜೆಟ್‌ನಲ್ಲಿ ದೇವದಾಸಿ ಮಹಿಳೆಯರ ಮಾಸಿಕ ಪಿಂಚಣಿಯನ್ನು ರೂ.3000ಕ್ಕೆ ಏರಿಸಬೇಕು. ಇದನ್ನು ಅವರ ಮಕ್ಕಳಿಗೂ ವಿಸ್ತರಿಸಬೇಕು. ದೇವದಾಸಿ ಮಹಿಳೆಯರ ಎಲ್ಲ ಮಕ್ಕಳು ಮತ್ತು ಸದಸ್ಯರನ್ನು ಸಮೀಕ್ಷೆ ನಡೆಸಿ ಅದರಂತೆ ಪುನರ್ವಸತಿ ಕಲ್ಪಿಸಬೇಕು ಎಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಮಟ್ಟದ ಪ್ರತಿಭಟನಾ ಧರಣಿ ಹಮ್ಮಿಕೊಳ್ಳಲಾಗಿತ್ತು.

ರಾಜ್ಯದ ವಿವಿಧ ಭಾಗಗಳಿಂದ 1500ಕ್ಕೂ ಹೆಚ್ಚು ದೇವದಾಸಿ ಮಹಿಳೆಯರು ಮತ್ತು ಅವರ ಮಕ್ಕಳು ಧರಣಿಯಲ್ಲಿ ಭಾಗವಹಿಸಿದ್ದರು. ಕರ್ನಾಟಕ ರಾಜ್ಯ ದೇವದಾಸಿ ವಿಮೋಚನಾ ಸಂಘದ ಗೌರವ ಅಧ್ಯಕ್ಷ ಯು. ಬಸವರಾಜ ಧರಣಿಯನ್ನು ಉದ್ಘಾಟಿಸಿದ್ದರು. ಧರಣಿಯ ನೇತೃತ್ವವನ್ನು ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ಕಾರ್ಯಾಧ್ಯಕ್ಷೆ ರೇಣುಕಮ್ಮ, ಪ್ರಧಾನ ಕಾರ್ಯದರ್ಶಿ ಮಾಳಮ್ಮ, ಉಪಾಧ್ಯಕ್ಷೆ ಪದ್ಮಾ ವಹಿಸಿದ್ದರು.

ಇತ್ತೀಚಿಗೆ, ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಮೂರು ದಿನಗಳಿಂದ ಪ್ರತಿಭಟನೆ ನಡೆಸಿದರೂ ಸರ್ಕಾರದಿಂದ ಯಾವುದೇ ಸ್ಪಂದನೆ ದೊರೆಯದ ಹಿನ್ನೆಲೆಯಲ್ಲಿ ರಾಜ್ಯ ಮಟ್ಟದ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಸರ್ಕಾರಕ್ಕೆ 13 ಪ್ರಮುಖ ಬೇಡಿಕೆಗಳೊಂದಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಸಚಿವರ ಆಗಮನಕ್ಕೂ ಮುನ್ನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ನಿಗಮ ಹಾಗೂ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಬೇಡಿಕೆಗಳ ಕುರಿತು ಪರಿಶೀಲಿಸುವುದಾಗಿ ಭರವಸೆ ನೀಡಿದರು. ಆದರೆ, ಪ್ರತಿಭಟನೆ ಹಿಂಪಡೆಯಲು ಸಂಘಟಕರು ನಿರಾಕರಿಸಿದರು.

ಪರಿಣಾಮವಾಗಿ, ರಾತ್ರಿ 10 ಗಂಟೆ ಸುಮಾರಿಗೆ ಸಚಿವ ಹಾಲಪ್ಪ ಆಚಾರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ನಿಗಮದ ಆಯುಕ್ತರು ಹಾಗೂ ಇತರ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಆಗಮಿಸಿದರು. ಮಾಸಿಕ ಪಿಂಚಣಿ ಹೆಚ್ಚಳ ಹಾಗೂ ಇತರೆ ಬೇಡಿಕೆಗಳನ್ನು ಈಡೇರಿಸುವುದಾಗಿ ಸಚಿವರು ಭರವಸೆ ನೀಡಿದರು.

ಕೃಷಿ ಬಜೆಟ್ ಹೇಗಿರಬೇಕು?......

ಪುಟ 8 ರಿಂದ

ಕೂಡಾ, ಸಾಲ ಬಾಧಿತನು ತನ್ನ ಉತ್ಪಾದನಾ ಸಾಧನವಾದ ಜಮೀನನ್ನು ಗ್ರಾಮೀಣ ಶ್ರೀಮಂತನಿಗೆ ವರ್ಗಾವಣೆ ಮಾಡುವಂತೆ ಕ್ರಮವಹಿಸಿತು. ರೈತನನ್ನು ಕೂಲಿಕಾರನನ್ನಾಗಿ ಬದಲಾಯಿಸಿತು. ಇದು ಕೂಡಾ ಗ್ರಾಮೀಣ ಶ್ರೀಮಂತನ ವಿರುದ್ಧ ಸ್ವಾವಲಂಬಿಯಾಗಿ ನಿಲ್ಲಲು ಸಾಧ್ಯವಿದ್ದ ಈ ರೈತನನ್ನು ಒಂದೆಡೆ ದುರ್ಬಲಗೊಳಿಸಿದರೇ ಮತ್ತೊಂದೆಡೆ ಕೈಗಾರಿಕೆಗಳಿಗೆ ಕೊಂಡುಕೊಳ್ಳುವ ಶಕ್ತಿಯನ್ನು ಕುಗ್ಗಿಸಿತು.

ಇದಕ್ಕೆ ವ್ಯತಿರಿಕ್ತವಾಗಿ ಬೆಲೆಗಳ ಏರಿಳಿತ ಮಾಡಿ ಕೊಳ್ಳೆ ಹೊಡೆಯುವುದನ್ನು ತಡೆಯಲು ಈ ಗಿರುವ ಎಪಿಎಂಸಿ ಮಾರುಕಟ್ಟೆಗಳನ್ನು ಬಲಗೊಳಿಸಬೇಕು. ಅದಕ್ಕಾಗಿ ಕೃಷಿ ಆಯೋಗದ ಅಧ್ಯಕ್ಷರಾದ ಡಾ.ಎಂ. ಎಸ್ ಸ್ವಾಮಿನಾಥನ್ ಸಲಹೆಯಂತೆ ಕೃಷಿ ಉತ್ಪನ್ನಗಳ ಉತ್ಪಾದನಾ ವೆಚ್ಚಕ್ಕೆ ಶೇ. 50 ರಷ್ಟು ಲಾಭಾಂಶ ಸೇರಿಸಿ ನಿಗದಿಸುವ ಬೆಂಬಲ ಬೆಲೆ ಖಾತರಿಯಾಗಿ ದೊರೆಯುವಂತೆ ಕನಿಷ್ಟ ಬೆಂಬಲ ಬೆಲೆ ಕಾಯ್ದೆಯನ್ನು ಅಂಗೀಕರಿಸಬೇಕು. ಅದೇ ರೀತಿ, ಹಾಗೆ ನಿಗದಿಸಲಾದ ಕನಿಷ್ಠ ಬೆಂಬಲ ಬೆಲೆಗೆ ಎಪಿಎಂಸಿಗಳಲ್ಲಿ ಖರೀದಿಸಲು ಸರಕಾರಿ ಖರೀದಿ ಕೇಂದ್ರಗಳನ್ನು ಸುಗ್ಗಿ ಪೂರ್ವದಲ್ಲಿ ಸಾಕಷ್ಟು ಬಂಡವಾಳದೊಂದಿಗೆ ಸಿದ್ದವಾಗಿರಬೇಕು. ಈ ಕ್ರಮಗಳೊಂದಿಗೆ ದೈತ್ಯ ಕಂಪನಿಗಳು ಬೆಲೆಗಳ ಏರಿಳಿತ ಮಾಡಿ ಕೊಳ್ಳೆ ಹೊಡೆಯುವುದನ್ನು ಪರಿಣಾಮಕಾರಿಯಾಗಿ ತಡೆಯಬಹುದಾಗಿದೆ.

ಸಾಲ ನೀತಿ ಹಾಗೂ ಋಣ ಮುಕ್ತ ಕಾಯ್ದೆ:

ಒಕ್ಕೂಟ ಹಾಗೂ ರಾಜ್ಯ ಸರಕಾರಗಳ ಕೃಷಿ ಸಾಲ ನೀತಿಯು ಅಸಮರ್ಪಕವಾಗಿದೆ. ಸಾರ್ವಜನಿಕ ಹಾಗೂ ಸಹಕಾರಿ ಬ್ಯಾಂಕ್ ಗಳು ಮತ್ತು ಸಂಘಗಳ ಮೂಲಕ ಒದಗಿಸುವ ಕೃಷಿ ಸಾಲವನ್ನು ವ್ಯಾಪಕವಾಗಿ ಹಾಗೂ ಎಲ್ಲರಿಗೂ ದೊರೆಯುವಂತೆ ಕ್ರಮವಹಿಸಲಿಲ್ಲ. ಕೇವಲ ಶ್ರೀಮಂತ ರೈತರು ಹಾಗೂ ಹೊಸ ಭೂಮಾಲಿಕ ಶಕ್ತಿಗಳಿಗೆ ನೀಡುವ ಸಾಲ ನೀತಿಗಳನ್ನು ಅನುಸರಿಸಲಾಯಿತು. ಜನತೆಯ ಒತ್ತಾಯದ ಮೇರೆಗೆ ಒಂದು ಸಣ್ಣ ಭಾಗದ ಬಡ ಹಾಗೂ ಮಧ್ಯಮ ರೈತರು ಸೇರಿಕೊಂಡರು. ಬಹುತೇಕ ಕೂಲಿಕಾರರು ಬಡ ರೈತರು, ಕಸುಬುದಾರರು, ಗೇಣಿದಾರರುಗಳು ಈಗಲೂ ಲೂಟಿಕೋರ ದುಬಾರಿ ಬಡ್ಡಿಯ ಸಾಲಕ್ಕೆ ಮೊರೆ ಹೋಗಿದ್ದಾರೆ.

ಆದೇ ರೀತಿ, ಸಾಲ ಪಡೆದ ಈ ಬಡ ಹಾಗೂ ಮಧ್ಯಮ ರೈತರು ಕೃಷಿಯಲ್ಲಿ ಉಂಟು ಮಾಡಲಾದ ನಷ್ಟದಿಂದಾಗಿ ಈ ಸಾರ್ವಜನಿಕ ಸಾಲದ ಜಾಲದಿಂದ ಹೊರಗೆಸೆಯಲ್ಪಟ್ಟರು. ಮಾತ್ರವಲ್ಲ, ದುಬಾರಿ ಬಡ್ಡಿ ಸಾಲಕ್ಕಾಗಿ ಶ್ರೀಮಂತ ಸಾಲಿಗರ ಮುಂದೆ ಸಾಲು ಗಟ್ಟಿದರು. ಒಕ್ಕೂಟ ಹಾಗೂ ರಾಜ್ಯ ಸರಕಾರಗಳು ಕೃಷಿ ಉತ್ಪನ್ನಗಳಿಗೆ ಪರಿಣಾಮಕಾರಿಯಾದ ಸಮಗ್ರ ಹಾಗೂ ವೈಜ್ಞಾನಿಕ ಬೆಲೆ ನಿಗದಿಸಿ ಖಾತರಿಯಾಗಿ ನೀಡದೇ ಹೋದುದರಿಂದ ಸಾಲದ ಬಾಧೆಯಲ್ಲಿ ಸಿಲುಕ ಬೇಕಾಯಿತಲ್ಲದೇ ಅಂತಹ ಒಟ್ಟು ಸಾಲದ ಬಾಧೆಯಿಂದ ಇವರನ್ನು ರಕ್ಷಿಸಲು ಒಕ್ಕೂಟ ಹಾಗೂ ರಾಜ್ಯ ಸರಕಾರಗಳು ರೈತರ ತೀವ್ರ ಒತ್ತಾಯದಿಂದಲೂ ಮುಂದೆ ಬರಲಿಲ್ಲ. ಅಲ್ಪ ಸ್ವಲ್ಪ ಆಗಾಗ ಸಾಲ ಹಾಗು ಬಡ್ಡಿ ಮನ್ನಾ ಘೋಷಣೆಗಳು ಆಳುವವರ ರಾಜಕೀಯ ಹಿತಾಸಕ್ತಿಯಿಂದ ಬಂದವುಗಳೇ ಹೊರತು ಕೃಷಿಕರ ಸಂರಕ್ಷಣೆಯ ಹಿತದಿಂದ ಬರಲಿಲ್ಲ.

ಒಕ್ಕೂಟ ಸರಕಾರ ಈಚೆಗೆ ಸಾರ್ವಜನಿಕ ಬ್ಯಾಂಕುಗಳಿಂದ ಕೇವಲ 100 ಜನ ಶ್ರೀಮಂತ ಬಂಡವಾಳಿಗರು ಪಡೆದ 12 ಲಕ್ಷ ಕೋಟಿ ರೂ. ಗಳ ಸಾಲವನ್ನು ಬಾರದ ಕೆಟ್ಟ ಸಾಲವೆಂದು ಮತ್ತು ಸರಕಾರವೇ ತನ್ನ ಬಜೆಟ್ ನಿಂದ ಬ್ಯಾಂಕುಗಳಿಗೆ ಹಣ ಒದಗಿಸಿ ಎಲ್ಲ ಸಾಲ ಮನ್ನಾ ಮಾಡಿರುವುದು ಮತ್ತು ಸಾರ್ವಜನಿಕ ಬ್ಯಾಂಕುಗಳನ್ನು ದಿವಾಳಿ ತೆಕ್ಕೆಗೆ ತಳ್ಳಿದುದು ಕಂಡು ಬಂದಿದೆ.

ರೈತ–ಕೂಲಿಕಾರರು ಮತ್ತು ಕಸುಬುದಾರರು ದುಬಾರಿ ಬಡ್ಡಿ ಖಾಸಗೀ ಸಾಲ ಹಾಗೂ ಬ್ಯಾಂಕ್ ಮತ್ತು ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಸಾಲದ ಬಾಧೆಯಿಂದ ನಲುಗಿ ಹೋಗಿದ್ದಾರೆ. ಈ ಬಾಧೆಯಿಂದಾಗಿ ಬೆಳೆಯುತ್ತಿರುವ ಇವರ ಆತ್ಮಹತ್ಯೆಗಳನ್ನು ತಡೆಯಲು, ಇವರ ಜಮೀನುಗಳು ಮುಂತಾದ ಸಣ್ಣ– ಪುಟ್ಟ ಆಸ್ತಿಗಳನ್ನು ದುಬಾರಿ ಬಡ್ಡಿ ಸಾಲನೀಡಿ ಲೂಟಿಗೈವವರ ಕಪಿ ಮುಷ್ಠಯಿಂದ ಪಾರು ಮಾಡಲು ಈಗಲೂ ಕೂಡಾ, ಒಂದು ಬಾರಿ ಎಂಬಂತೆ ಎಲ್ಲ ರೀತಿಯ ಸಾಲ ಮನ್ನಾಕ್ಕೆ ಕ್ರಮವಹಿಸುವುದು ಅನಿವಾರ್ಯವಾಗಿದೆ. ಅದೇ ರೀತಿ, ಪ್ರಕೃತಿ ವಿಕೋಪಗಳಾದ ಅತೀವೃಷ್ಟಿ, ಪ್ರವಾಹ ಅನಾವೃಷ್ಠಿ (ಬರಗಾಲ) ಸಾಂಕ್ರಾಮಿಕದ ಹಾವಳಿ ಮುಂತಾದ ಸಂದರ್ಭಗಳಿಂದುಂಟಾದ ನಷ್ಟ ಅದರಿಂದಾಗುವ ಸಾಲವನ್ನು ಆಗಿಂದಾಗ್ಗೆ ನಿವಾರಿಸಲು ಕೇರಳ ಮಾದರಿಯ ಋಣ ಮುಕ್ತ ಕಾಯ್ದೆಯನ್ನು ಜಾರಿಗೊಳಿಸಿ ಪ್ರಕೃತಿ ವಿಕೋಪಗಳಿಂದಾಗುವ ಹಾನಿಯನ್ನು ತುಂಬಿಕೊಡಲು ಕ್ರಮವಹಿಸಬೇಕು.

ಗ್ರಾಮೀಣ ನಿರುದ್ಯೋಗ–ಉದ್ಯೋಗ ಖಾತ್ರಿ

ಕರ್ನಾಟಕದಲ್ಲಿ ಜಾಗತೀಕರಣದ ನೀತಿಗಳಿಂದಾಗಿ ರೈತಾಪಿ ಜನತೆಯ ದಿವಾಳಿತನದಿಂದಾಗಿ, ಕೃಷಿಯ ಆಧುನಿಕರಣದಿಂದಾಗಿ, ಜೀವನಕ್ಕೆ ಏನೇನು ಸಾಲದ ಅತ್ಯಂತ ಸಣ್ಣ ಅವಧಿಯ ಕೆಲಸ ಹೊಂದಿದ ಗ್ರಾಮೀಣ ಕೂಲಿಕಾರರ ಸಂಖ್ಯೆ ಒಂದು ಕೋಟಿ ಯನ್ನು ದಾಟಿದೆ. ಇಂತಹ ಸಂದರ್ಭದಲ್ಲಿ ಉದ್ಯೋಗ ಖಾತ್ರಿಯೋಜನೆಯನ್ನು ಭ್ರಷ್ಠತೆಯ ಕಪಿಮುಷ್ಠಿಯಿಂದ ಮುಕ್ತಗೊಳಿಸಿ, ಹೆಚ್ಚಿನ ಅಗತ್ಯನುಸಾರ ಅನುದಾನ ಒದಗಿಸ ಬೇಕಾದುದು ಒಕ್ಕೂಟ ಹಾಗೂ ರಾಜ್ಯ ಸರಕಾರಗಳ ಕರ್ತವ್ಯವಾಗಿದೆ. ಆದರೆ ಅವುಗಳು ಸಾರ್ವಜನಿಕ ವೆಚ್ಚ ಕಡಿತ ಮಾಡುವ ಇಂಗಿತದಂತೆ ಇದಕ್ಕೆ ಹೆಚ್ಚಿನ ಅನುದಾನ ಒದಗಿಸುತ್ತಿಲ್ಲ ಮತ್ತು ಇಲ್ಲಿನ ವ್ಯಾಪಕ ಭ್ರಷ್ಟತೆಯನ್ನು ತಡೆಯಲು ಕ್ರಮವಹಿಸುತ್ತಿಲ್ಲ.

ಈ ಜನಸಮುದಾಯಕ್ಕೆ ಮಹತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೆಲಸವನ್ನು 200 ದಿನಗಳಿಗೆ ವಿಸ್ತರಿಸಿ ವೈಜ್ಞಾನಿಕ ಮತ್ತು ಸಮರ್ಪಕ ಕನಿಷ್ಠ ವೇತನವನ್ನು ನಿಗದಿಸಿ, ಗ್ರಾಮೀಣ ಹಾಗೂ ಕೃಷಿ ಅಭಿವೃದ್ಧಿಯಲ್ಲಿ ತೊಡಗಿಸುವುದು ಅಗತ್ಯವಾಗಿದೆ. ಅದು ಅವರ ತಲಾ ಆದಾಯವನ್ನು ಹೆಚ್ಚಿಸಲಿದೆ. ಗ್ರಾಮೀಣ ಮಾರುಕಟ್ಟೆಯ ವಿಸ್ತರಣೆಗೆ ಕ್ರಮವಹಿಸಲಿದೆ.

ಪಡಿತರ ವಿತರಣೆ ಬಲಪಡಿಸಿ:

ರಾಜ್ಯದಲ್ಲಿ ಸರಕಾರದ ಅಂದಾಜಿನಂತೆ ಕೂಲಿಕಾರರು, ಬಡರೈತರು, ಕಸುಬುದಾರರು ಮತ್ತು ಕಾರ್ಮಿಕರು, ಸಣ್ಣ ವ್ಯಾಪಾರಿಗಳು ಸೇರಿ 1.35 ಕೋಟಿ ಬಿಪಿಎಲ್ ಪಡಿತರ ಚೀಟಿದಾರರಿದ್ದಾರೆ. ಆದರೇ ಅವರಿಗೆ ನೀಡಲಾಗುವ ಪಡಿತರವು ಅಸಮರ್ಪಕವಾಗಿದೆ. ಅದನ್ನು ಬಲಗೊಳಿಸುವುದು ಮತ್ತು ವ್ಯಾಪಕ ಗೊಳಿಸುವುದು ಈ ಕುಟುಂಬಗಳು ಪೌಷ್ಠಿಕತೆಯನ್ನು ಪಡೆಯಲು ಮತ್ತು ರಾಜ್ಯದ ಜನತೆ ಅಗತ್ಯ ವಸ್ತುಗಳ ಬೆಲೆ ಏರಿಕೆಗಳ ಕೊಳ್ಳೆಯಿಂದ ಪಾರಾಗಲು ಅವಶ್ಯಕವಾಗಿದೆ. ಈಗ ನೀಡಲಾಗುವ ತಲಾ ವ್ಯಕ್ತಿಗೆ 5 ಕೆ.ಜಿ. ಅಕ್ಕಿಗೆ ಬದಲು ತಲಾ ವ್ಯಕ್ತಿಗೆ ಮಾಸಿಕ ಕನಿಷ್ಟ 10 ಕೆ.ಜಿ. ಅಗತ್ಯ 16 ಆಹಾರ ಮತ್ತಿತರೆ ಗುಣ ಮಟ್ಟದ ಸಾಮಗ್ರಿಗಳು ದೊರೆಯುವಂತೆ ಕ್ರಮವಹಿಸಬೇಕಾಗಿದೆ. ಹಬ್ಬ, ಜಾತ್ರೆ ಮುಂತಾದ ದಿನಗಳಲ್ಲಿ ಮತ್ತಷ್ಟು ಅಂದಿನ ಅಗತ್ಯ ವಸ್ತುಗಳು ದೊರೆಯುವಂತೆ ಕ್ರಮವಹಿಸಬೇಕಾಗಿದೆ.

ಆದರೇ ಒಕ್ಕೂಟ ಹಾಗೂ ರಾಜ್ಯ ಸರಕಾರಗಳು ಕಾರ್ಪೋರೇಟ್ ಕಂಪನಿಗಳ ಕಾಳ ಸಂತೆಗೆ ನೆರವಾಗುವ ದೃಷ್ಟಿಯಿಂದ ಅಗತ್ಯ ವಸ್ತುಗಳ ಕಾಯ್ದೆಗೆ ತಿದ್ದುಪಡಿ ಮಾಡಲು ಕ್ರಮವಹಿಸಿವೆ. ಪಡಿತರ ವ್ಯವಸ್ಥೆಯನ್ನೇ ಕಳಚಿ ಹಾಕಲು ಹೊರಟಿವೆ. ಅದರ ಆರಂಭವಾಗಿ ಫಲಾನುಭವಿಗಳ ಖಾತೆಗೆ ಸಹಾಯಧನ ವರ್ಗಾಯಿಸುವುದು ಸಾರ್ವಜನಿಕ ಪಡಿತರ ವಿತರಣೆ ಅಂಗಡಿಗಳನ್ನು ಮುಚ್ಚುವುದು, ಈ ಕ್ರಮಗಳನ್ನು ತಡೆಯಬೇಕಾಗಿದೆ.

ಸಾರ್ವಜನಿಕ ಸಂಪನ್ಮೂಲದ ಹೂಡಿಕೆ ಹೆಚ್ಚಳ:

ಸಹಾಯ ಧನದ ಬೀಜ, ಗೊಬ್ಬರ, ಕ್ರಿಮಿನಾಶಕಗಳು, ಕೃಷಿ ಯಂತ್ರೋಪಕರಣಗಳು, ಸಹಾಯಧನದ ಇಂಧನ ಮತ್ತು ಕೃಷಿ ಉತ್ಪನ್ನಗಳ ಬೆಲೆಗಳ ಏರಿಳಿತ ತಡೆಯಲು ಸಾರ್ವಜನಿಕ ರಂಗದ ಮದ್ಯ ಪ್ರವೇಶ ಇಂದಿನ ಅಗತ್ಯವಾಗಿದೆ. ಬಡ್ಡಿ ರಹಿತ ಸಾಲ, ಇದಕ್ಕಾಗಿ ಸಾರ್ವಜನಿಕ ಬಂಡವಾಳದ ತೊಡಗಿಸುವಿಕೆಯ ಅಗತ್ಯವಿದೆ. ಇದು ಕೃಷಿ ಉತ್ಪನ್ನಗಳನ್ನು ಅಂತಿಮವಾಗಿ ಪಡೆಯುವ ಗ್ರಾಹಕರಿಗೆ ಬೆಲೆ ಏರಿಕೆಯ ಭಾರವನ್ನು ತಡೆಯಲಿದೆ.

ಕಂಪನಿ ಕೃಷಿ – ಸಹಕಾರಿ ಕೃಷಿ

ಇಂದಿಗೂ ಶೇ 50 ಕ್ಕೂ ಅಧಿಕ ಮಾನವ ಸಂಪನ್ಮೂಲ ತೊಡಗಿಸಿಕೊಂಡಿರುವ ಕೃಷಿ ರಂಗದ ಒಟ್ಟು ಆಂತರಿಕ ಉತ್ಪಾದನೆಗೆ ಈಗಿನ ಕೊಡುಗೆ ಕೇವಲ ಶೇ 18 ಕ್ಕಿಂತಲೂ ಕಡಿಮೆ ಇದ್ದು, ಅದನ್ನು ವ್ಯಾಪಕವಾಗಿ ಹೆಚ್ಚಿಸಲು ಅತ್ಯಂತ ಆಧುನಿಕವಾದ ತಂತ್ರಜ್ಞಾನದ ಮೂಲಕ ಭಾರೀ ಬಂಡವಾಳದೊಂದಿಗೆ ಕೃಷಿಯಲ್ಲಿ ತೊಡಗುವ ಕಾರ್ಪೋರೇಟ್ ಕಂಪನಿ ಇಂದಿನ ಅಗತ್ಯವೆಂದು ಸರಕಾರಗಳು ಕಾರ್ಪೋರೇಟ್ ಕೃಷಿಗೆ ಅಥವಾ ಕಂಪನಿ ಕೃಷಿಯನ್ನು ಮುಂದೆ ತರುತ್ತಿವೆ.

ಆದ್ದರಿಂದ ಕಾರ್ಪೋರೇಟ್ ಕಂಪನಿಗಳು ಕೃಷಿ ಹಾಗೂ ಕೃಷಿ ಸಂಬಂಧಿ ಉಪಕಸುಬುಗಳು ಮತ್ತು ಕೃಷಿ ವ್ಯಾಪಾರದಲ್ಲಿ ತೊಡಗಲು ಅಡ್ಡಿಯಾದ ಕಾಯ್ದೆಗಳನ್ನು ತಿದ್ದುಪಡಿ ಮಾಡಲಾಗಿದೆ.

ಹಾಲಿ ರೈತಾಪಿ ಕೃಷಿಯಲ್ಲಿನ ಉದ್ಯೋಗ ಭದ್ರತೆಯನ್ನೊದಗಿಸುತ್ತಾ ದೈತ್ಯ ಕೃಷಿಕ ಕಂಪನಿಗಳು ಕೃಷಿಯನ್ನು ಪ್ರವೇಶಿಸಿದಂತೆ ನಿರ್ಬಂಧಿಸುತ್ತಿದ್ದ ಕರ್ನಾಟಕ ಭೂ ಸುಧಾರಣೆ ಕಾಯ್ದೆ–1961 ನ್ನು ಎಷ್ಠೇ ಆದಾಯ ಹೊಂದಿದ, ಯಾರು ಬೇಕಾದರೂ ಬೇಸಾಯದಲ್ಲಿ ತೊಡಗಬಹುದೆಂದು ತಿದ್ದುಪಡಿ ಮಾಡಲಾಗಿದೆ. ಎಷ್ಠು ಎಕರೆ ಬೇಕಾದರೂ ಗುತ್ತಿಗೆ ಬೇಸಾಯಮಾಡಲು ಅವಕಾಶ ನೀಡಲಾಗಿದೆ. ಅದೇ ರೀತಿ, ಮಾರುಕಟ್ಟೆಯ ದೈತ್ಯ ಶಕ್ತಿಗಳ ಕೃಷಿ ಉತ್ಪನ್ನಗಳ ಬೆಲೆಗಳನ್ನು ಏರಿಳಿತ ಮಾಡುವುದನ್ನು ಸ್ವಲ್ಪವಾದರೂ ನಿಯಂತ್ರಿಸಲು ಅವಕಾಶಗಳಿದ್ದ ಎಪಿಎಂಸಿ ಕಾಯ್ದೆಯನ್ನು ತಿದ್ದುಪಡಿ ಮಾಡಿ ರೈತರು ತಮ್ಮ ಕೃಷಿ ಉತ್ಪನ್ನಗಳೊಂದಿಗೆ ಮಾರುಕಟ್ಟೆ ಪ್ರವೇಶಿಸದಂತೆ ಪ್ರತಿರೋಧಗಳನ್ನು ಹುಟ್ಟು ಹಾಕಲಾಗಿದೆ. ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ ಮೂಲಕ ಹೈನುಗಾರಿಕೆ, ಹೈನೋದ್ಯಮ, ಮಾಂಸ ಹಾಗೂ ಚರ್ಮೋದ್ಯಮಗಳ ಲೂಟಿಗೆ ತೆರೆಯಲಾಗಿದೆ. ರೈತನ ಮನೆ ಬಾಗಿಲಿಗೆ ಉತ್ತಮ ಬೀಜ, ರಸಾಯನಿಕ ಗೊಬ್ಬರ, ಕ್ರಿಮಿನಾಶಕ ಹಾಗೂ ಉನ್ನತ ತಂತ್ರಜ್ಞಾನ ಒದಗಿಸುವ ಮತ್ತು ಬಿತ್ತುವ ಪೂರ್ವವೇ ಖರೀದಿಸುವ ಒಪ್ಪಂದ ಕೃಷಿಯ ಆಸೆಯನ್ನು ತೋರುವ ಮೂಲಕ ಮತ್ತು ದೇಶದ ಕೋಟ್ಯಾಂತರ ಹಾಗೂ ರಾಜ್ಯದ 50 ಲಕ್ಷ ಎಕರೆ ಬೀಳು ಭೂಮಿ ಅಭಿವೃದ್ಧಿಯಲ್ಲಿ ಗುತ್ತಿಗೆ ಕಂಪನಿ ಬೇಸಾಯದ ಹೆಸರಿನಲ್ಲಿ ಬಂಡವಾಳ ತೊಡಗಿಸಿ ರಾಜ್ಯದ ಒಟ್ಟು ಕೃಷಿ ಭೂಮಿಯನ್ನು ಕಬಳಿಸಲು ಕ್ರಮವಹಿಸಲಾಗಿದೆ.

ಇದು ಮುಂಬರುವ ದಿನಗಳಲ್ಲಿ ರಾಜ್ಯದ ಗ್ರಾಮೀಣ ಪ್ರದೇಶವನ್ನು ದೊಡ್ಡ ಮಸಣವಾಗಿ ಪರಿವರ್ತಿಸಿದರೇ ಆಶ್ಚರ್ಯ ಪಡಬೇಕಾಗಿಲ್ಲ. ಈ ಎಲ್ಲ ರೀತಿಯಲ್ಲಿ ಕಾರ್ಪೋರೇಟ್ ಕೃಷಿ, ರೈತಾಪಿ ಕೃಷಿ, ಕೃಷಿ ಸಂಬಂದಿ ಉಪಕಸಬು, ಕೃಷಿ ವ್ಯಾಪಾರ ಹಾಗೂ ಕೃಷಿ ಹಾಗೂ ಉಪಕಸುಬು ಆಧಾರಿತ ಎಲ್ಲಾ ಕೈಗಾರಿಕಾವಲಯಗಳನ್ನು ಇದು ಆಕ್ರಮಿಸಿ ಅಲ್ಲಿ ಬದುಕು ಕಂಡುಕೊಂಡಿರುವ ಎಲ್ಲರನ್ನು ಅವುಗಳಾಚೆ ದೂಡಲ್ಪಡುವುದರಿಂದ ಅಂತಹ ಪರಿಣಾಮ ಇಲ್ಲದಿಲ್ಲ. ಇಂತಹದೊಂದು ಕೆಟ್ಟ ಪರಿಣಾಮ ಬೀರುವ ಕಾರ್ಪೋರೇಟ್ ಕೃಷಿ ನಮಗೆ ಅಗತ್ಯವಿಲ್ಲ. ಹೌದು ಚಿಕ್ಕ ಚಿಕ್ಕ ಹಿಡುವಳಿಗಳು, ಬಂಡವಾಳದ ಕೊರತೆ, ಆಧುನಿಕ ತಂತ್ರಜ್ಞಾನದ ಕೊರತೆ ಇರುವ ರೈತರ ಕೃಷಿಯಿಂದ ಅಗಾಧವಾದ ಕಂಪನಿ ಕೃಷಿ ರೀತಿಯ ಹೇರಳ ಉತ್ಪಾದನೆ ಸಾಧ್ಯವಿಲ್ಲವೆಂಬುದು ನಿಜವೇ! ಆದರೇ ಈ ಚಿಕ್ಕ ಚಿಕ್ಕ ಹಿಡುವಳಿಗಳನ್ನು ಒಟ್ಟು ಗೂಡಿಸಿ ಸಹಕಾರಿ ಬೇಸಾಯದಲ್ಲಿ ಒಗ್ಗೂಡಿಸಿ ಆಧುನಿಕತೆಯ ಹಾಗೂ ಬಂಡವಾಳದ ನೆರವು ಒದಗಿಸಿದಲ್ಲಿ ನಮ್ಮ ರೈತರು ಕಾರ್ಪೋರೇಟ್ ಬೇಸಾಯವನ್ನು ಎದುರಿಸಬಲ್ಲರು. ಕಂಪನಿ ಬೇಸಾಯಕ್ಕೆ ಸಹಕಾರಿ ಬೇಸಾಯ ಪರ್ಯಾಯವಾಗಲಿದೆ. ಕಂಪನಿ ಬೇಸಾಯಕ್ಕೆ ನೆರವಾಗುವ ಎಲ್ಲಾ ತಿದ್ದುಪಡಿ ಕಾಯ್ದೆಗಳನ್ನು ವಾಪಾಸು ಪಡೆದು ಸಹಕಾರಿ ಬೇಸಾಯವನ್ನು ಬಲಗೊಳಿಸಲು ಕ್ರಮವಹಿಸಿದಲ್ಲಿ ಖಂಡಿತ ಯಶವನ್ನು ಪಡೆಯಬಹುದಾಗಿದೆ.

ಪತಿವ್ರತಾ ಧರ್ಮ, ಬಾಲ್ಯ ವಿವಾಹ ಎಂಬ ಬಾಲ ಕಾರ್ಮಿಕ ಪದ್ಧತಿ


ಜಿ.ಎನ್. ನಾಗರಾಜ್

ಮನುಸ್ಮೃತಿ ಮೊದಲಾದ ಧರ್ಮಶಾಸ್ತ್ರ ಗ್ರಂಥಗಳು ಸಂಸ್ಕೃತದಲ್ಲಿವೆ. ಅದರಲ್ಲಿರುವ ವಿಚಾರ ಮಹಿಳೆಯರಿಗೆ ಹೇಗೆ ಗೊತ್ತಾಗುತ್ತದೆ? ಎಲ್ಲದಕ್ಕೂ ಮನುಸ್ಮೃತಿ, ವೈದಿಕ ಗ್ರಂಥಗಳನ್ನು ಸುಖಾಸುಮ್ಮನೆ ದೂರುತ್ತೀರಿ ಎಂದು ವೈದಿಕ ಮನಸ್ಥಿತಿಯ ಹಲವರು ಕೇಳುತ್ತಾರೆ. ಆದರೆ ಈ ಗ್ರಂಥಗಳಲ್ಲಿಯ ವಿಚಾರಗಳನ್ನು ಹಳ್ಳಿಗಳಲ್ಲಿಯೂ, ನಗರ, ಪಟ್ಟಣಗಳ ವಿವಿಧ ಭಾಗಗಳಲ್ಲಿಯೂ ಮಾಡುತ್ತಿದ್ದ ಹರಿಕತೆ, ಪುರಾಣಗಳು, ಮಹಾಪತಿವ್ರತೆಯರ ಕತೆಗಳು, ರಾಮಾಯಣ, ಮಹಾಭಾರತದ ಮೇಲೆ ಆಧಾರಿತವಾದ ಯಕ್ಷಗಾನ, ಬಯಲಾಟಗಳು, ನಾಟಕಗಳು, ಸಿನೆಮಾ, ಟಿವಿ ಸೀರಿಯಲ್, ಕೆಲವು ಜಾನಪದ ಹಾಡುಗಳು, ಕತೆಗಳ ಮೂಲಕ ಜನ ಸಾಮಾನ್ಯರ ನಡುವೆ ಹಬ್ಬಿಸುವ ಕೆಲಸ ಸಾವಿರಾರು ವರ್ಷಗಳಿಂದ ನಡೆಯುತ್ತಿದೆ.

ಇಂತಹ ಒಂದು ರೂಪ ಸಂಚಿಯ ಹೊನ್ನಮ್ಮನ ಹದಿಬದೆಯ ಧರ್ಮ ಅರ್ಥಾತ್ ಪತಿವ್ರತೆಯ ಧರ್ಮ ಎಂಬ ಕಾವ್ಯ. ಹದಿನೇಳನೇ ಶತಮಾನದಲ್ಲಿ ಮೈಸೂರರಸ ಚಿಕ್ಕದೇವರಾಜ ಒಡೆಯರ ಆ ಸ್ಥಾನದಲ್ಲಿ ಎಲೆ ಅಡಿಕೆಯ ಸಂಚಿಯನ್ನು ಹಿಡಿದು ಸೇವೆ ಸಲ್ಲಿಸುತ್ತಿದ್ದ ಹೊನ್ನಮ್ಮ ಬರೆದ ಕಾವ್ಯವಿದು.

ಅದರಲ್ಲಿ ಅತ್ತೆ ಮಾವಂದಿರನ್ನು ಹೇಗೆ ಸೇವೆ ಮಾಡಬೇಕೆಂಬುದನ್ನು ಹೊನ್ನಮ್ಮ ಹೀಗೆ ವಿವರಿಸುತ್ತಾಳೆ:

ಮಾನಗೊಳದೆ, ಮೈಲಿಗೆಯೆಂಜಲೆಂದನುಮಾನ
ಗೆಯ್ಯದೆ ಮನವೊಲಿದು
ಬೇನೆ ಬಿದ್ದಿರೆ ಪೇಸದೆ ಬೇಸರದೆ
ಸನ್ಮಾನದೊಳುಪಚರಿಸುವುದು 4–14
ಆವ ವೇಳೆಯೊಳು ಆವುದನು ಬಯಸಸಿದರೆ ಆ
ವೇಳೆಯೊಳು ಅವನೆಲ್ಲ
ಸಾವಧಾನದೊಳು ಸಂಗತಿಗೊಳಿಸುವುದು ಇಷ್ಟ
ದೇವತೆಯೆಂದೆಣಿಸುವುದು 4–16
ಒತ್ತಿನೊಳಿದ್ದು ಒಲವರಿತು ಅಡಿಗಳನು
ಒತ್ತುವುದು ಒಂದುವರೆದು
ಸುತ್ತುಗೆಲಸವ ಸೊಲ್ಲಿಸದೆ ಎಸಗುವುದು
ಇದರಿಂದತ್ತೆಯ ಅನುವರ್ತಿಸುವುದು 4–17
ಬೀಸುವುದೊಮ್ಮೆ ಪಿಡಿದು ಬಿಜ್ಜಣಿಗೆ(ಬೀಸಣಿಗೆ)
ಯ
ಪಾಸುವುದೊಮ್ಮೆ ಪಾಸಿಗೆಯ
ಸೂಸುವುದೊಮ್ಮೆ ಪನ್ನೀರ ಸುಗಂಧವ
ಪೂಸುವುದೊಮ್ಮೆ ಪೂಜುವುದು 4.18
ತಾನೇ ನೀರೆರೆದು ಮೀಯಿಸುವುದು ಮತ್ತೊಮ್ಮೆ
ತಾನೇ ತೊಡಿಗೆ ತೊಡಿಸುವುದು
ಎಲ್ಲವನು
ಸಾನಂದದೊಳು ಸಮನಿಪುದು 4.19



ವೃದ್ಧರಾದ ಅವರ ಅನಾರೋಗ್ಯದ ಸಮಯದಲ್ಲಿ ಅವರ ಎಂಜಲು, ಉಚ್ಚೆ ಬಳಿಯುವುದು ಮೊದಲಾದವನ್ನು ಬೇಸರಿಸದೆ ಮಾಡಬೇಕೆಂಬ ಮಾನವೀಯತೆ ಇರಲಿ. ಆದರೆ ಅವರು ಏನು ಬಯಸಿದರೂ ಆಗಲೆ ಮಾಡಬೇಕು, ಅತ್ತೆಯ ಕಾಲೊತ್ತಿ ಸೇವೆ ಮಾಡುತ್ತಾ ಮನೆಯ ಕೆಲಸಗಳನ್ನು ಅವರ ಆದೇಶದಂತೆ ಮಾಡಬೇಕು. ಬೀಸಣಿಗೆಯಿಂದ ಬೀಸುವುದು, ಹಾಸಿಗೆ ಹಾಸಿಕೊಡುವುದು, ಗಂಧವನ್ನು ಮೈಗೆ ಹಚ್ಚುವುದು, ಪಾದ ಸೇವೆ ಮಾಡಿ ಪೂಜಿಸುವುದು, ಸ್ನಾನ ಮಾಡಿಸುವುದು, ಉಡುಗೆಗಳನ್ನು ತೊಡಿಸುವುದು ಇವುಗಳನ್ನೆಲ್ಲ ಅನಾರೋಗ್ಯದ ಸಮಯದಲ್ಲಿ ಮಾತ್ರವಲ್ಲದೆ ನಿತ್ಯ ಮಾಡಬೇಕು ಎಂಬುದು ಸಮಾಜದಲ್ಲಿ ರೂಪಿತವಾಗಿದ್ದ ಲೋಕಾರೂಢಿ.

ಅತ್ತೆ, ಮಾವಂದಿರ ಸೇವೆ ಹೇಗೆ ಮಾಡಬೇಕೆಂಬ ಬಗ್ಗೆ ಹೊನ್ನಮ್ಮನ ಸೂಚನೆಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿದೆ.

ಅಡಿಗೆ ಮಾಡುವುದು, ನೀರು ತರುವುದು, ಪಾತ್ರೆ ತೊಳೆಯುವುದು, ಮನೆಯ ಸ್ವಚ್ಚತೆ, ಮಕ್ಕಳನ್ನು ಹೆರುವುದು, ತನ್ನ ಮತ್ತುನೆಯಲ್ಲಿರುವ ಎಲ್ಲರ ಮಕ್ಕಳ ಆರೈಕೆ, ಶಿಕ್ಷಣ ಇತ್ಯಾದಿ ಇತ್ಯಾದಿಗಳ ಬಗ್ಗೆ ಬಹಳ ವಿವರವಾದ ಸೂಚನೆಗಳಿವೆ.

ಇವೆಲ್ಲವೂ ಸಾವಿರಾರು ವರ್ಷಗಳ ಕಾಲದ ರಾಜಪ್ರಭುತ್ವವೆಂಬ ಪಾಳೆಯಗಾರಿ ವ್ಯವಸ್ಥೆಯಲ್ಲಿ ಮಹಿಳೆ ಪಾಲಿಸಬೇಕಾಗಿದ್ದ ಹೊಣೆಯ ಹೊರೆಯನ್ನು ನಮಗೆ ವೇದಿಸುತ್ತವೆ.

ಸ್ವಾತಂತ್ರ್ಯಾನಂತರ ಪ್ರಜಾಪ್ರಭುತ್ವ, ಸಂವಿಧಾನದ ಮೂಲ ತತ್ವಗಳಾದ ಸಮಾನತೆ ಮತ್ತು ಇತರೆಲ್ಲ ಸಮುದಾಯಗಳ ಸಮಾನತೆಯ ಜೊತೆಗೆ ಲಿಂಗ ಸಮಾನತೆಗೆ ಸಂಬಂಧಿಸಿದ ಪರಿಚ್ಛೇಧಗಳು, ವಿಶೇಷ ಕಾನೂನುಗಳ ನಂತರವೂ ಪಾಳೆಯಗಾರಿ ಪುರುಷಾಧಿಪತ್ಯದ ಮೌಲ್ಯಗಳು ಮೆರೆಯುತ್ತಿವೆ. ಸ್ವಲ್ಪ ಮಟ್ಟಿಗೆ ಮಾತ್ರ ಮಹಿಳೆಯರ ಸಮಾನತೆ ಅದರಿಂದ ಅವರ ದುಡಿಮೆಯಿಂದ ಸ್ವಲ್ಪ ವಿನಾಯತಿ, ಬಿಡುವು ಮತ್ತು ಅದರ ಉಪಯೋಗದ ಸ್ವಾತಂತ್ರ್ಯ ಲಭ್ಯವಾಗಿದೆ. ಅದರಿಂದಾಗಿ ಈ ಪರಂಪರಾಗತ, ಧಾರ್ಮಿಕ ಕಟ್ಟಳೆಗಳಾಗಿಬಿಟ್ಟಿರುವ ಪಾಳೆಯಗಾರಿ ಮೌಲ್ಯಗಳನ್ನು ತೊಡೆಯಬೇಕೆಂದರೆ ಅವುಗಳ ಬಗ್ಗೆ ತಿಳಿದುಕೊಳ್ಳುವುದು ಅನಿವಾರ್ಯ ಮತ್ತು ಮುಖ್ಯ ಕೆಲಸವಾಗಿದೆ.

ಭಾರತದಲ್ಲಿ ಪ್ರಚಲಿತವಾಗಿರುವ ಇತರ ಧರ್ಮಗಳೂ ಇಂತಹ ಕಟ್ಟಲೆಗಳನ್ನು ವಿವಿಧ ಪ್ರಮಾಣದಲ್ಲಿ ಮಹಿಳೆಯರ ಮೇಲೆ ಹೇರಿ ಅವರ ದುಡಿಮೆ, ಅಸ್ವಾತಂತ್ರ್ಯ, ವಿರಾಮದ ಅಲಭ್ಯತೆಯನ್ನು ನಿರ್ದೇಶಿಸಿವೆ. ಅವುಗಳ ಬಗೆಗೆ ಆಯಾ ಧರ್ಮಗ್ರಂಥಗಳ ಬಗ್ಗೆ ಅಧ್ಯಯನ ಮಾಡಿರುವುದನ್ನೂ ಪರಿಶೀಲಿಸುವ ಅಗತ್ಯ ಇದೆ.

ಬಾಲ್ಯ ವಿವಾಹ ಎಂಬ ಬಾಲ ಕಾರ್ಮಿಕ ಪದ್ಧತಿ:

ಬಾಲ್ಯ ವಿವಾಹ ಎಂಬುದು ಭಾರತದಲ್ಲಿ ಸಾವಿರಾರು ವರ್ಷಗಳಿಂದ ರೂಢಿಯಲ್ಲಿರುವ ಬಹು ವ್ಯಾಪಕವಾಗಿದ್ದ ಪದ್ಧತಿ. ಇಂದೂ ಹಳ್ಳಿಗಾಡಿನಲ್ಲಿ, ನಗರಗಳ ಸ್ಲಂಗಳಲ್ಲಿ ಗಣನೀಯವಾಗಿ ಅನುಸರಿಸುವ ಪದ್ಧತಿ. ಹುಟ್ಟುತ್ತಲೇ ತೊಟ್ಟಿಲು ಮದುವೆ ಮಾಡುವ ಪದ್ಧತಿಯೂ ಇತ್ತು. ನಾಲ್ಕು ವರ್ಷದಿಂದಲೇ ಆರಂಭಿಸಿ ಹತ್ತು ಹನ್ನೆರಡು ವರ್ಷಗಳಷ್ಟು ಸಣ್ಣ ವಯಸ್ಸಿನ ಲೈಂಗಿಕ ಬೆಳವಣಿಗೆ ಆರಂಭವಾಗದ ಬಾಲಕಿಯರಿಗೆ ಮದುವೆ ಮಾಡುವ, ನಂತರ ಮೈ ನೆರೆದ ಕೂಡಲೇ ಗಂಡನ, ಅಲ್ಲಲ್ಲ ಅತ್ತೆಯ ಮನೆಗೆ (ಅದು ಇನ್ನೂ ಬಾಲಕನಾಗಿರುವ ಗಂಡನ ಮನೆಯಾಗುವ ಸಾಧ್ಯತೆ ಇಲ್ಲ. ಅದು ಮಾವನ ಒಡೆತನದ ಮನೆಯಾಗಿರುತ್ತದೆ. ಒಬ್ಬ ಹೆಣ್ಣಿಗೆ ಅತ್ತೆಯ ಮನೆಯಾಗಿರುತ್ತದೆ.) ಸೇರಿಸುವ ಪದ್ಧತಿ ಇದು. ಪುರಾಣಗಳು, ಮನುಸ್ಮೃತಿಯ ಕಾಲದಿಂದ ಎಂದರೆ ಕ್ರಿಸ್ತ ಪೂರ್ವ ಎರಡನೆಯ ಶತಮಾನದಿಂದ ಈ ಪದ್ಧತಿಯ ಉಲ್ಲೇಖಗಳು ಕಾಣ ಸಿಗುತ್ತವೆ. ಕೌಟಿಲ್ಯನ ಅರ್ಥ ಶಾಸ್ತ್ರದಲ್ಲಿ ಕೂಡಾ ಇದರ ಉಲ್ಲೇಖ ಇದೆ.

ಮೈನೆರೆಯುವ ಮೊದಲು ಮದುವೆಯಾಗದಿದ್ದರೆ ಕಣ್ಣು ಕಟ್ಟಿ ಕಾಡಿನಲ್ಲಿ ಬಿಟ್ಟು ಬಿಡುವ ಪದ್ಧತಿ ಕೂಡಾ ಇತ್ತೆಂಬುದರ ಬಗ್ಗೆ ಹಲವು ಐತಿಹ್ಯ, ಜಾನಪದ ಕತೆಗಳಿವೆ.

ಬಾಲ್ಯ ವಿವಾಹ ಪದ್ಧತಿ ಬಾಲಕಿ, ಬಾಲಕಿಯರ ಮತ್ತು ಮುಂದೆ ಅವರ ಇಡೀ ಜೀವನದ ಮೇಲೆ ಹಲವು ರೀತಿಯ ಪರಿಣಾಮ ಬೀರುತ್ತದೆ. ಅದರಲ್ಲಿ ಮುಖ್ಯವಾದ ಒಂದು ಅಂಶವನ್ನು ಕಡೆಗಣಿಸಲಾಗಿದೆ. ಬಾಲ್ಯದಲ್ಲಿಯೇ ವಿವಾಹವಾಗಿ ಅತ್ತೆ ಮನೆ ಸೇರುವ ಬಾಲಕಿಯ ಮೇಲೆ ಮನೆಯ ಚಾಕರಿಯ ಹೊರೆ ಬೀಳುತ್ತದೆ. ಆ ವಯಸ್ಸಿನಲ್ಲಿ ತಾಯ ಮನೆಯಲ್ಲಿ ಆಟವಾಡಿಕೊಂಡು, ಉಂಡುಟ್ಟು ಬೆಳೆಯುತ್ತಿದ್ದ ಬಾಲಕಿಯ ಮೇಲೆ ಇದ್ದಕ್ಕಿದ್ದಂತೆ ಕೆಲಸದ ಹೊರೆ ಬೀಳುತ್ತದೆ. ಅತ್ತೆಯ ಮನೆಯಲ್ಲಿ ತೊತ್ತಾಗಿ ದುಡಿಯಬೇಕಾಗುತ್ತದೆ. ಇದು ಆ ವಯಸ್ಸಿನಲ್ಲಿ ಅವರ ಬೌದ್ಧಿಕ, ಮಾನಸಿಕ ಹಾಗೂ ದೈಹಿಕ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ. ಅವರಿಗೆ ವಿರಾಮವೆಂಬುದು ಕನಸಿನಂತೆ ಕಾಣುತ್ತದೆ. ಮೇಲೆ ನೀಡಿದ ಜಾನಪದ ಕಾವ್ಯದ ಉಲ್ಲೇಖಗಳಲ್ಲಿ ಕಾಣುವುದು ಇಂತಹ ಬಾಲಕಿಯೊಬ್ಬಳ ಕಷ್ಟದ ಅಭಿವ್ಯಕ್ತಿ ಎನ್ನಬಹುದು.

ಇಂತಹ ಕಷ್ಟಕರ ಜೀವನದ ಇನ್ನೊಂದು ಮಗ್ಗುಲು ತವರಿನ ಹಂಬಲ. "ತವರೂರ ಹಾದೀಲಿ ಮುಳ್ಳಿಲ್ಲ ಕಲ್ಲಿಲ್ಲ" ಎಂಬ ಜಾನಪದ ತ್ರಿಪದಿ "ತವರ ಸುಖದೊಳಗೆನ್ನ ಮರೆತಿಹಳು ಎನ್ನದಿರಿ" ಎನ್ನುವ ಜನಪ್ರಿಯ ಕವಿತೆಯ ಸಾಲು ನೆನಪಿಗೆ ಬರುತ್ತದೆ. ಹೆಣ್ಣಿಗೆ

ತವರಿಗೆ ಹೋದಾಗಲೇ ಸ್ವಲ್ಪ ವಿಶ್ರಾಂತಿ,ವಿರಾಮ ಮತ್ತು ಆರೈಕೆ. ಬಾಲ್ಯ ವಿವಾಹವೆಂಬುದು ತಮ್ಮ ಮನೆಯ ಬಾಲಕಿಯನ್ನು ಮತ್ತೊಂದು ಮನೆಗೆ ದುಡಿಯಲು ಕಳಿಸುವ ಒಮ್ಮುಖದ ಸಂಬಂಧವಲ್ಲ. ಮತ್ತೊಬ್ಬರ ಮನೆಯಿಂದ ಅಂತಹುದೇ ಬಾಲೆಯೊಬ್ಬಳನ್ನು ದುಡಿಯಲು ತರುವ ಅವಕಾಶವೂ ಹೌದು. ನಮ್ಮ ಮನೆಯ ಬಾಲಕಿಯನ್ನು ನೀವು ದುಡಿಸಿಕೊಳ್ಳಿ, ನಿಮ್ಮ ಮನೆಯಲ್ಲಿ ದುಡಿಯಲು ನಿಮ್ಮ ಮನೆಯ ಬಾಲಕಿಯನ್ನು ಕಳಿಸಿ ಎಂಬಂತಹ ಮುಯ್ಯಾಳಿನ ಪದ್ಧತಿ ಇದು. ಹೀಗೆ ಈ ವಿವಾಹ ಬಾಲ ಕಾರ್ಮಿಕ ಪದ್ಧತಿಯ ತಿರುಳನ್ನು ಒಳಗೊಂಡಿದೆ.

ಬಾಲ್ಯ ವಿವಾಹ ಮಾಡಿ 11–13 ವರ್ಷಕ್ಕೆ ಮೈನೆರೆದ ಕೂಡಲೇ ಅತ್ತೆಯ ಮನೆಗೆ ಕಳಿಸುವುದಕ್ಕೆ ಬದಲಾಗಿ 20–21 ರ ವಯಸ್ಸಿನ ಯುವತಿಯಾದ ಮೇಲೆ ಮದುವೆ ಮಾಡಿಕೊಡುವುದೆಂದರೆ ಎಂಟರಿಂದ ಹತ್ತು ವರ್ಷದ ದುಡಿಮೆಯನ್ನು ಕಳೆದುಕೊಂಡಂತೆ. ಜೊತೆಗೆ ಬಾಲಕಿಯ ಮೇಲೆ ಕಠಿಣ ದುಡಿಮೆ ಹೇರುವುದಕ್ಕಿಂತ ಯುವತಿಯಿಂದ ಆ ದುಡಿಮೆಯನ್ನು ಪಡೆಯುವುದು ಕಠಿಣ. ಅದೇ ಬಾಲಕಿಯಾಗಿ ಬಂದವಳನ್ನು ಯುವತಿಯಾಗುವ ವೇಳೆಗೆ ಅಂತಹ ದುಡಿಮೆಗೆ ಒಗ್ಗಿಸಿಕೊಂಡಿರಬಹುದು ಅಲ್ಲವೇ.

ಬಾಲಕಿಯಾಗಿರುವಾಗ ವ್ಯಕ್ತಿತ್ವದ ಬೌದ್ಧಿಕ, ಮಾನಸಿಕ, ದೈಹಿಕ ಬೆಳವಣಿಗೆಗೆ ಅತ್ಯಗತ್ಯವಾದ ವಿರಾಮವನ್ನು ಅವರಿಂದ ಕಿತ್ತುಕೊಳ್ಳುತ್ತದೆ, ಅವರ



ವ್ಯಕ್ತಿತ್ವವನ್ನು ಕುಬ್ಜವಾಗಿಸುತ್ತದೆ ಬಾಲ್ಯ ವಿವಾಹ ಪದ್ಧತಿ.

ಸಾಮಾಜಿಕ ಸ್ತರ ಮತ್ತು ವೃತ್ತಿ ಬೇಧಗಳ ಪರಿಣಾಮ:

ದುಡಿಮೆವಿರಾಮವೆಂಬುದು ಎಲ್ಲ ಮಹಿಳೆಯರಿಗೂ ಒಂದೇ ರೀತಿಯ ಪ್ರಶ್ನೆ ಅಲ್ಲ. ಅದು ಅವರ ವೃತ್ತಿ ಮತ್ತು ಸಾಮಾಜಿಕ ಸ್ತರಗಳನ್ನು ಅವಲಂಬಿಸಿದೆ. ದಾಸಿ ಅಥವಾ ಜೀತಗಾರ ಮಹಿಳೆ, ಕೂಲಿಕಾರ ಮಹಿಳೆ, ರೈತ ಮಹಿಳೆ, ಕುಶಲಕರ್ಮಿ ಮಹಿಳೆಯರು ಮನೆಯ ಒಳಗೂ ಹೊರಗೂ ದುಡಿಯುವ ದುಪ್ಪಟ್ಟು ದುಡಿಮೆಯ ಮಹಿಳೆಯರಾಗಿದ್ದಾರೆ. ದುಡಿಮೆಯ ಪ್ರಮಾಣ ಮತ್ತು ತೀವ್ರತೆಯ ಮೇಲೆ ಅವರ ವಿರಾಮದ ಲಭ್ಯತೆ ಅವಲಂಬಿಸಿದೆ. ಇವರುಗಳಲ್ಲಿ ಯಾವುದೇ ಸ್ವಾತಂತ್ರ್ಯವಿಲ್ಲದ ಜೀತಗಾರ ಮಹಿಳೆಯರ ದುಡಿಮೆಯ ಪ್ರಮಾಣ ಮತ್ತು ತೀವ್ರತೆ ಬಹು ಹೆಚ್ಚಿರುವುದು ಸ್ಪಷ್ಟ. ಅವರಿಗೆ ವಿರಾಮವಿರಲಿ, ವಿಶ್ರಾಂತಿಯೂ ದೊರಕಲಾರದ ಬದುಕು. ಈ ವರ್ಗಗಳ ವಿರುದ್ಧ ದಿಕ್ಕಿನಲ್ಲಿ ಕೈಗೊಬ್ಬರು, ಕಾಲಿಗೊಬ್ಬರಂತೆ ಆಳುಕಾಳುಗಳು ಚೆಲ್ಲಾಡುವ ಜಮೀನುದಾರ, ಜಹಗೀರುದಾರ ಕುಟುಂಬಗಳ, ರಾಜಪರಿವಾರಗಳ ಮಹಿಳೆಯರ ವಿರಾಮದ ಪುಷ್ಕಳತೆ ಬೇರೆಯೇ. ಈ ಎರಡು ವರ್ಗಗಳ ನಡುವಣ ಗೃಹಿಣೀ ಮಹಿಳೆಯರ ವಿರಾಮದ ಪ್ರಶ್ನೆ ಬೇರೊಂದು ರೀತಿಯದು.

ಮೊದಲ ವರ್ಗದ ಮಹಿಳೆಯರೇ ಬಹು ಸಂಖ್ಯಾತರಾಗಿದ್ದರೂ ಕೂಡಾ ಮೇಲಿನೆಲ್ಲ ಕಾವ್ಯ,ಧಾರ್ಮಿಕ ಗ್ರಂಥಗಳ ಉದಾಹರಣೆಗಳೂ ಅಂದಿಗೆ ಬಹಳ ಸಣ್ಣ ಸಂಖ್ಯೆಯ ಗೃಹಿಣಿ ಮಹಿಳೆಯರ ಕುರಿತೇ ಇದೆ ಎನ್ನುವುದು ವಿಪರ್ಯಾಸ.

ಈ ವಿಭಜನೆ ಭಾರತದಲ್ಲಿ ವರ್ಣ– ಜಾತಿ ವ್ಯವಸ್ಥೆಯ ಭಾಗವಾಗಿ ಅಸ್ತಿತ್ವಕ್ಕೆ ಬಂದಿದೆ.

ಜೀತಗಾರರು ಮತ್ತು ಕೂಲಿಕಾರರಲ್ಲಿ ಹೆಚ್ಚಿನವರು ದಲಿತರಾದರೆ, ರೈತ, ಕುಶಲ ಕರ್ಮಿಗಳು ಶೂದ್ರರಾಗಿದ್ದು ಹೆಚ್ಚಿನ ಗೃಹಿಣಿಯರು ಅಗ್ರಹಾರ, ಪಟ್ಟಣ, ನಗರಗಳಲ್ಲಿ ವಾಸಿಸುತ್ತಿದ್ದ ಮೇಲ್ವರ್ಣಗಳ ಮಹಿಳೆಯರಾಗಿದ್ದಾರೆ.

ಗೃಹಿಣೀ ಮಹಿಳೆಯರ ದುಡಿಮೆಯೂ ಬಹಳ ಹೆಚ್ಚಿನದಾಗಿದ್ದರೂ ಜೀತದಾಳುಗಳ ಬಳಕೆಯ ಸಾಧ್ಯತೆಗೆ ತಕ್ಕಂತೆ ಅವರಿಗೆ ವಿರಾಮ ಸಿಗುತ್ತಿತ್ತು. ಅದನ್ನು ಇವರು ಪಾಕಕಲೆ, ಹಾಡು ಹಸೆ, ಕಸೂತಿ, ಚಿತ್ತಾರ ಮೊದಲಾದವುಗಳಿಗೆ ಬಳಸಿಕೊಂಡು ಅದನ್ನು ಬೆಳೆಸಿದ್ದಾರೆ. ಹಲ ಹಲವು ರೀತಿಯ ತಿಂಡಿ ತೀರ್ಥಗಳು, ಮದುವೆ ನಾಮಕರಣಗಳಲ್ಲಿ ಹಾಡುವ ಹಾಡುಗಳು ಇತರ ಕಲೆಗಳು ಇಂತಹ ವಿರಾಮದ ಫಲ.

ಅರಮನೆ, ಸಿರಿಮನೆಗಳ ಮಹಿಳೆಯರು, ರಾಜರ ಅಂತಃಪುರಗಳ ಮಹಿಳೆಯರಿಗೆ ಸಿಗುತ್ತಿದ್ದ ಪುಷ್ಕಳ ವಿರಾಮ ವ್ಯಕ್ತಿತ್ವದ ಬೆಳವಣಿಗೆ ಮತ್ತು ಅಭಿವ್ಯಕ್ತಿಗೆ ಸದುಪಯೋಗವಾದ ಉದಾಹರಣೆಗಳು ಬಹಳ ಅಪರೂಪ. ಒಬ್ಬ ನಾಟ್ಯರಾಣಿ ಶಾಂತಲೆ, ಮಧುರಾ ವಿಜಯದ ಕರ್ತೃ ಗಂಗಾಂಬಿಕೆ, ಉತ್ತಮ ಆಡಳಿತ ನೀಡಿದ ಕೆಲವರನ್ನು ಮಾತ್ರ ಕಾಣುತ್ತೇವೆ. ಉಳಿದಂತೆ ಸವತಿಯರ ಮೇಲಾಟ, ಒಳಸಂಚುಗಳಿಗೇ ಈ ವಿರಾಮ ಬಳಕೆಯಾದಂತೆ ಇತಿಹಾಸದ ಹಲವು ಉದಾಹರಣೆಗಳಿಂದ ತಿಳಿಯಬರುತ್ತದೆ.

ಪುಟ 14 ಕ್ಕೆ

ಹಿಜಾಬ್ ತೀರ್ಪು – ತಪ್ಪು ಪ್ರಶ್ನೆ ಕೇಳಿ ತಪ್ಪು ಉತ್ತರ ಪಡೆದ ಪ್ರಸಂಗ.............

ಪುಟ 5 ರಿಂದ

ಧರ್ಮ ಮತ್ತು ನಂಬಿಕೆಗಳ ಹೊರತಾಗಿಯೂ ವಿದ್ಯಾರ್ಥಿಗಳ ಮಧ್ಯೆ ಏಕರೂಪತೆಯ ಭಾವನೆಯನ್ನು ಉಂಟುಮಾಡುವ ದೃಷ್ಟಿಯಿಂದ ತಂದಿರುವ ವಸ್ತ್ರಸಂಹಿತೆಗೆ ಧಕ್ಕೆ ತರುತ್ತದೆ."

ಮುಖ್ಯವಾಗಿ ಗಮನಿಸಬೇಕಾಗಿರುವುದು ಏನೆಂದರೆ ಏಕರೂಪತೆಗೋಸ್ಕರ ಏಕರೂಪತೆಯು ಏನನ್ನೂ ಸಾಧಿಸುವುದಿಲ್ಲ. ಅತ್ಯಾವಶ್ಯಕವಾದ ಕನಿಷ್ಠ ಮಟ್ಟದ ಸರಿಸಮಾನತೆಯನ್ನು ಸಾಧಿಸುವುದು ಸಮವಸ್ತ್ರದ ಕೇಂದ್ರ ಚಿಂತನೆಯಾಗಿದೆ. ಅಂದರೆ, ವಸ್ತ್ರಸಂಹಿತೆಯಲ್ಲಿನ ಶಿಸ್ತಿನ ಜತೆಯಲ್ಲಿ ಶ್ರೀಮಂತ ಮಕ್ಕಳು ಧರಿಸುವ ಬಟ್ಟೆ ಮತ್ತು ಶ್ರೀಮಂತರಲ್ಲದ ಮಕ್ಕಳ ಬಟ್ಟೆಯ ನಡುವಿನ ತಾರತಮ್ಯವನ್ನು ಸಮವಸ್ತ್ರವು ತೊಡೆದುಹಾಕುತ್ತದೆ. ಸಮವಸ್ತ್ರ ಧರಿಸುವುದರಿಂದ ಮಾತ್ರವೇ ಸಮಾಜದ ಒಂದು ಸದಸ್ಯನಿಂದ ಮತ್ತೊಬ್ಬಸದಸ್ಯರ ನಡುವಿನ ತಾರತಮ್ಯಕ್ಕೆ ಕಾರಣವಾದ ಎಲ್ಲಾ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಗುರುತುಗಳು ಮಾಯವಾಗುತ್ತವೆ ಎನ್ನುವುದು ನಮ್ಮ ಭೋಳೆತನವಾಗುತ್ತದೆ ಅಷ್ಟೆ. ಆದಕಾರಣ, ಕೋರ್ಟಿನ ಸಮರ್ಥನೆಗೆ ಜೀವಾಳವಾಗಿರುವ 'ಸಾಮಾಜಿಕ ಪ್ರತ್ಯೇಕತೆಯನ್ನು' ತೊಡೆದುಹಾಕುವ ಅದರ ಪ್ರಾಥಮಿಕ ಪ್ರಯತ್ನದಲ್ಲಿ ಪ್ರಧಾನ ಸಾಂವಿಧಾನಿಕ ಸ್ವಾತಂತ್ರ್ಯಗಳಾದ ಅಸ್ಮಿತೆ, ಸ್ವಾಯತ್ತತೆ, ಆಯ್ಕೆ, ಅಭಿವ್ಯಕ್ತಿ, ಮತ್ತು ಶಿಕ್ಷಣ ಎಲ್ಲವೂ ಆದ್ಯತೆಯ ಪಟ್ಟಿಯಲ್ಲಿ ಪಾತಾಳಕ್ಕೆ ಹೋಗಿವೆ. ಸಾಂವಿಧಾನಿಕ ಸ್ವಾತಂತ್ರಗಳಿಗೆ ಹಾನಿಯುಂಟು ಮಾಡುವ ಏಕರೂಪತೆಯು ಸ್ವಾತಂತ್ರ್ಯಗಳು ಪ್ರಾಥಮಿಕ ಹಾಗೂ ಅವಕ್ಕೆ ಸಮರ್ಥನೆ ಬೇಕಿಲ್ಲ ಎಂಬ ಮೂಲ ತತ್ವವನ್ನೇ ಪಲ್ಲಟಗೊಳಿಸುತ್ತದೆ. ಸ್ವಾತಂತ್ರ್ಯಗಳ ಮೇಲಿನ ನಿರ್ಬಂಧಗಳುನಿಷ್ಪಕ್ಷಪಾತ, ನ್ಯಾಯ ಹಾಗೂ ವಿವೇಕಯುತವಾಗಿರುವ ಕಾನೂನುಬದ್ಧ ಸಮರ್ಥನೆಗಳನ್ನು ಹೊಂದಬೇಕಿರುವುದು ಅತ್ಯಗತ್ಯ. ಈ ನಿರ್ದಿಷ್ಟ ಪ್ರಕರಣದಲ್ಲಿ ಮುಸ್ಲಿಂ ಹುಡುಗಿಯರಿಗೆ ಮುಕ್ತ ಹಾಗು ಅಡಚಣೆಯಿಲ್ಲದ ಶಿಕ್ಷಣದ ಅವಕಾಶಕ್ಕಿಂತಲೂ ಹಿಜಾಬಿಲ್ಲದ ಸಮವಸ್ತ್ರದ ಸತ್ವವನ್ನು ಸರ್ಕಾರವು ಉನ್ನತ ಸ್ಥಾನದಲ್ಲಿ ಇರಿಸಿದೆ ಎಂಬುದನ್ನು ಮರೆಯಲು ಸಾಧ್ಯವಿಲ್ಲ.

ಹಿಜಾಬ್ ಮತ್ತು ಭಗವಾ ಶಾಲುಗಳು – ಮಹಿಳೆಯರ ತಾರತಮ್ಯವನ್ನು ಕಡೆಗಣಿಸುವ ಹುಸಿ–ಸಮಾನತೆಯ ಪ್ರಸಂಗ

ಕೋರ್ಟು ಕಲಾಪಗಳು ನಡೆಯುತ್ತಿರುವಾಗಲೇ ಹಿಜಾಬ್ ಧರಿಸಿದ ಹುಡುಗಿಯರು ಎದುರಿಸಿದ ಆಕ್ರಮಣಕಾರಿ ಪ್ರತೀಕಾರದತ್ತ ಕುರುಡಾಗಿದ್ದ ಸಂಗತಿ ಈ ಕೋರ್ಟು ತೀರ್ಪಿನ ಬಗೆಹರಿಯದ ಭಾಗವಾಗಿದೆ. ಹಿಜಾಬ್ ಧರಿಸಿದ್ದ ಏಕಾಂಗಿ ಮಹಿಳೆಯೊಬ್ಬಳನ್ನು ಮಂಡ್ಯದಲ್ಲಿ ಕೇಸರಿ ಶಾಲು ಹೊದ್ದಿದ್ದ ಕಿಡಿಗೇಡಿ ಗುಂಪು ಅಟ್ಟಿಸಿಕೊಂಡು ಹೋಗುತ್ತಿದ್ದ ವೀಡಿಯೋವನ್ನು ಪಕ್ಕಕ್ಕೆ ಸರಿಸಲು ಸಾಧ್ಯವಿಲ್ಲ.

ಕೋರ್ಟು ತೀರ್ಪಿನ 124 ನೇ ಪುಟದಲ್ಲಿ ಕೋರ್ಟ್ ತಾನು ಕಂಡುಕೊಂಡಿದ್ದ ಅಂಶಗಳ ಬಗ್ಗೆ ಮಾತನಾಡುತ್ತಾ ಹಿಜಾಬ್ ಮತ್ತು ಕೇಸರಿ ಶಾಲುಗಳನ್ನು ಒಂದೇ ರೀತಿಯ ಆಚರಣೆಗಳೆಂದು ಮತ್ತು ಅವರ ಬಗ್ಗೆ ಒಂದೇ ಉಸಿರಿನಲ್ಲಿ ಹೇಳುವುದರ ಮೂಲಕ ಸಂತ್ರಸ್ತರು ಹಾಗೂ ಆಕ್ರಮಣಕಾರರನ್ನು ಒಂದೇ ತಕಡಿಯಲ್ಲಿ ಹಾಕಲಾಗಿತ್ತು. ಕೋರ್ಟು ಹೀಗೆ ಅಭಿಪ್ರಾಯಪಟ್ಟಿದೆ: "ಹಿಜಾಬ್, ಭಗವಾ ಅಥವಾ ಧಾರ್ಮಿಕ ಸಂಕೇತವಾದ ಯಾವುದೇ ಉಡುಪಿನ ಹೊರತಾದ ಶಾಲಾ ವಸ್ತ್ರ ಸಂಹಿತೆಯನ್ನು ವಿಧಿಸುವುದು ವಿಮೋಚನೆಯತ್ತ ಮತ್ತು ಬಹಳ ನಿರ್ದಿಷ್ಟವಾಗಿ ಶಿಕ್ಷಣದ ಅವಕಾಶಕ್ಕಾಗಿನ ದಿಕ್ಕಿನಲ್ಲಿ ಒಂದು ಹೆಜ್ಜೆ ಮುಂದೆ ಎನ್ನಬಹುದು. ಇದು ಮಹಿಳೆಯರ ಸ್ವಾಯತ್ತತೆಯನ್ನು ಅಥವಾ ಅವರ ಶಿಕ್ಷಣದ ಹಕ್ಕನ್ನು ಕಸಿದುಕೊಳ್ಳುವುದಿಲ್ಲ ಎಂದು ಹೇಳಬೇಕಾದ ಅಗತ್ಯವಿಲ್ಲ ಏಕೆಂದರೆ ತರಗತಿಯ ಹೊರಗಡೆಯಲ್ಲಿ ಅವರು ತಮಗೆ ಇಷ್ಟವಾದ ಯಾವ ಉಡುಪನ್ನೂ ಧರಿಸಬಹುದು."

ಹಿಜಾಬನ್ನು ಧರಿಸಲು ಬಯಸಿದ ಹುಡುಗಿಯರು, ಮತ್ತು ಹಿಜಾಬ್ ಧರಿಸಿದ್ದ ಮಹಿಳೆಯರನ್ನು ಚುಡಾಯಿಸುತ್ತಿದ್ದ ಕೇಸರಿ ಶಾಲು ಹೊದ್ದ ಪುರುಷರ ನಡುವೆ ಹುಸಿ–ಸಮೀಕರಣ ಮಾಡಿದ ಕೋರ್ಟಿನ ನಡೆಯು ವಿಷಾದಕರ. ಮಹಿಳೆಯರು ಹಿಜಾಬ್ ಧರಿಸಿದ್ದು ತಮ್ಮ ವೈಯಕ್ತಿಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಆಚರಣೆಯ ಭಾಗವಾಗಿತ್ತು, ಅದೇ ಕೇಸರಿ ಶಾಲು ಹೊದ್ದಿದ್ದ ಪುರುಷರದ್ದು ಹಿಜಾಬ್ ಧರಿಸಿದ್ದ ಮಹಿಳೆಯರ ವಿರುದ್ಧದ ಆಕ್ರಮಣ ಹಾಗೂ ಪ್ರತೀಕಾರದ ಪ್ರದರ್ಶನವಾಗಿತ್ತು. ಅವರಿಬ್ಬರನ್ನೂ ಒಂದೇ ಎಂದು ಸಮೀಕರಿಸುವುದು ಅರ್ಜಿದಾರರು ಕೋರ್ಟಿನ ಮುಂದೆ ಹೂಡಿದ್ದ ದಾವೆಯನ್ನು ಅವಮಾನಿಸಿದಂತಿತ್ತು. ಈ ಧೋರಣೆಯಲ್ಲಿ, ಕಾನೂನಿನ ಸರಿಯಾದ ಪ್ರಶ್ನೆಯನ್ನು ಕೋರ್ಟು ನಿರಾಕರಿಸಿದ್ದು ಮಾತ್ರವೇ ಅಲ್ಲ, ಶಿಕ್ಷಣದ ಅವಕಾಶಕ್ಕಾಗಿನ ಹಕ್ಕನ್ನು ಸಾಧಿಸಿದ ಮಹಿಳೆಯರ ಘನತೆಗೂ ಕುಂದು ಉಂಟುಮಾಡಿತು; ಹಾಗೆಯೇ ನಿರ್ದಿಷ್ಟ ನೀತಿಬದ್ಧವಾದ ನ್ಯಾಯನಿಷ್ಠವಾದ ಆಚರಣೆ ಹಾಗೂ ವಸ್ತ್ರದ ಆಯ್ಕೆಯ ಅವಕಾಶವನ್ನು ಚುಡಾಯಿಸುವವರ ವಿಟೋದಂತಹ (ನಿರಾಕರಣಾಧಿಕಾರಕ್ಕೇ) ಕೆಳ ಮಟ್ಟಕ್ಕೆ ಇಳಿಸಲಾಯಿತು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ತೀರ್ಪಿನ ಈ ಭಾಗವು ಕಾನೂನಿನ ಸಮಾನತೆ ಹಾಗೂ ಕಾನೂನುಗಳ ಸಮಾನ ರಕ್ಷಣೆಯನ್ನು ಖಾತರಿಪಡಿಸುವ ಸಂವಿಧಾನದ 14 ನೇ ಪರಿಚ್ಛೇದವನ್ನು ಉಲ್ಲಂಘಿಸುತ್ತದೆ.

ಈ ಮೇಲಿನ ಎಲ್ಲಾ ಅಂಶಗಳ ಬಗ್ಗೆ, ಅರ್ಜಿದಾರರ ಹಕ್ಕುಗಳನ್ನು ಕೋರ್ಟು ಮಾನ್ಯಮಾಡಬೇಕಿತ್ತು ಎಂದು ಯಾರಿಗಾದರೂ ಅನಿಸುತ್ತದೆ. ದಕ್ಷಿಣ ಆಫ್ರಿಕಾದ ಒಂದು ಅಧಿಕಾರಯುತವಾದ ತೀರ್ಮಾನದಿಂದ ಸ್ಫೂರ್ತಿಯನ್ನು ಕೋರ್ಟು ಪಡೆಯಲುಅವಕಾಶವಿತ್ತು. ಎಂಇಸಿ ಫಾರ್ ಎಜುಕೇಷನ್: ಎಂಬ ಕ್ವಾಜುಲು – ನಾಟಲ್ ವಿರುದ್ಧ ನವನೀತುಂ ಪಿಳ್ಳೈಯವರ ಆ ಪ್ರಕರಣದಲ್ಲಿ ದಕ್ಷಿಣ ಆಫ್ರಿಕಾದ ಸಾಂವಿಧಾನಿಕ ಕೋರ್ಟು ಒಂದು ತೀರ್ಪು ನೀಡಿತ್ತು. ಭಾರತದ ತಮಿಳುನಾಡು ಮೂಲದ ಹುಡುಗಿ ತನ್ನ ಸಾಂಸ್ಕೃತಿಕ ಆಚರಣೆಯ ಭಾಗವಾಗಿ ಶಾಲೆಗೆ ಮೂಗುತಿ ಧರಿಸಿ ಹೋಗುತ್ತಿದ್ದ ಸಂಗತಿ ವಿವಾದವಾಗಿ ಪರಿಣಮಿಸಿತ್ತು. ಆ ಹುಡುಗಿಯು ತನ್ನ ಶಾಲೆಯ ಸಮವಸ್ತ್ರದ ಜತೆಯಲ್ಲಿ ಮೂಗುತಿಯನ್ನು ಧರಿಸಿ ಹೋಗಲು ದಕ್ಷಿಣ ಆಫ್ರಿಕಾದ ಸಾಂವಿಧಾನಿಕ ಪೀಠವು ಅವಕಾಶ ಮಾಡಿಕೊಟ್ಟಿತ್ತು. ಶಾಲೆಯ ತೀರ್ಮಾನವನ್ನು ರದ್ದುಗೊಳಿಸಿದ ದಕ್ಷಿಣ ಆಫ್ರಿಕಾದ ಸರ್ವೋಚ್ಚ ನ್ಯಾಯಾಲಯವು 'ಸಾಂವಿಧಾನಿಕ ಯೋಜನೆಯು ವೈವಿಧ್ಯತೆಯನ್ನು ಸಮರ್ಥಿಸುವುದಷ್ಟೇ ಅಲ್ಲ ಅದನ್ನು ಬೆಳೆಸಬೇಕು ಹಾಗೂ ಸಂಭ್ರಮಿಸಬೇಕು' ಎಂದು ಅಭಿಪ್ರಾಯಪಟ್ಟಿತು. ವಿಷಾದಕರ ಸಂಗತಿಯೆಂದರೆ, ಕರ್ನಾಟಕ ಉಚ್ಚ ನ್ಯಾಯಾಲಯವು ದಕ್ಷಿಣ ಆಫ್ರಿಕಾದ ಬೋಧಪ್ರದವಾದಂತಹ ಈ ತೀರ್ಮಾನವನ್ನು ಪಕ್ಕಕ್ಕೆ ಸರಿಸಿತು. ದಕ್ಷಿಣ ಆಫ್ರಿಕಾವು ತನ್ನದೇ ಆದ ವೈವಿಧ್ಯತೆಯ, ಸ್ವೀಕಾರದ ಹಾಗೂ ಆಧುನಿಕ ಸಂವಿಧಾನವಾದವನ್ನು ಹೊಂದಿರುವ ದೇಶ. ವಿದೇಶಿ ಸಂವಿಧಾನದ ಆಧಾರದ ಮೇಲಿನ ವಿದೇಶಿ ತೀರ್ಪುಗಳು ನೆರವಿಗೆ ಬರುವುದಿಲ್ಲ ಎಂದು ಕರ್ನಾಟಕ ಉಚ್ಚ ನ್ಯಾಯಾಲಯ ಅದನ್ನು ತಳ್ಳಿಹಾಕಿತು.

ಅತ್ಯಗತ್ಯ ಧಾರ್ಮಿಕ ಆಚರಣೆ ಮತ್ತು ಧರ್ಮಪ್ರಜ್ಞೆಯ ಹಕ್ಕು. ಹಿಜಾಬ್ ಧರಿಸುವುದು ಇಸ್ಲಾಂ ಅಡಿಯಲ್ಲಿ ಅತ್ಯಗತ್ಯ ಧಾರ್ಮಿಕ ಆಚರಣೆಯೆ ಎನ್ನುವುದನ್ನು ತೀರ್ಮಾನಿಸಲು ತೀರ್ಪಿನ ಬಹುಭಾಗವನ್ನು ಮೀಸಲಿಡಲಾಗಿದೆ. ಒಂದು ನಿರ್ದಿಷ್ಟ ಧಾರ್ಮಿಕ ಹಕ್ಕು ಸಂವಿಧಾನದ 25 ನೇ ಪರಿಚ್ಛೇದದ ಅಡಿಯಲ್ಲಿ ರಕ್ಷಣೆಗೆ ಅರ್ಹವೇ ಎಂದು ತೀರ್ಮಾನಿಸುವ ಮಾನದಂಡವಾಗಿ ಅತ್ಯಗತ್ಯ ಧಾರ್ಮಿಕ ಆಚರಣೆ (ಎಸೆನ್ಶಿಯಲಿ ರಿಲಿಜಿಯಸ್ ಪ್ರಾಕ್ಟೀಸ್ – ಇಆರ್‌ಪಿ) ಅಥವಾ ಇಆರ್‌ಪಿ ಪರೀಕ್ಷೆಯನ್ನು ಕೋರ್ಟು ನಿಗದಿಗೊಳಿಸಿದೆ. ಒಳ್ಳೆಯದೋ ಅಥವಾ ಕೆಟ್ಟದ್ದೋ, ಒಂದು ನಿರ್ದಿಷ್ಟ ಧರ್ಮಕ್ಕೆ ಒಂದು ನಿರ್ದಿಷ್ಟ ಆಚರಣೆಯು ಮೂಲಾಧಾರವಾದ ಮುಖ್ಯಾಂಶವೇ ಎಂದು ತೋರಿಸಲು ಸಾಧಿಸಲಾಗದ ಮಾನದಂಡಕ್ಕೆ ಸಮೀಪವಾಗಿ ಗೊತ್ತುಪಡಿಸುವ ರೀತಿಯಲ್ಲಿ ಇಆರ್‌ಪಿ ಪರೀಕ್ಷೆಯನ್ನು ವಿಕಾಸಗೊಳಿಸಲಾಗಿದೆ. ಇಆರ್‌ಪಿ ಪ್ರಶ್ನೆಯ ಮೇಲಿನ ಬಹುಪಾಲು ನಿವೇದನೆಗಳು (ಸಬ್‌ಮಿಷನ್ಸ್) ಮತ್ತು ನಿರ್ಧಾರಗಳು ಪವಿತ್ರ ಕುರಾನ್ ಮತ್ತು ಇಸ್ಲಾಂ ಕಾನೂನಿನ ಇತರ ಮೂಲಗಳ ಖಂಡಗಳ (ವರ್ಸಸ್ – ನುಡಿಗಳ) ಸುತ್ತ ಗಿರಕಿ ಹೊಡೆಯುತ್ತವೆ. ಇಆರ್‌ಪಿ ಮಾನದಂಡಗಳ ಬಗ್ಗೆ ಸಾಕಷ್ಟು ಹೇಳಲಾಗಿದೆ ಮತ್ತು ಬರೆಯಲಾಗಿದೆ. ತೀರ್ಪಿನ ಈ ಅಂಶದ ಬಗ್ಗೆ ವಿವರವಾದ ಚರ್ಚೆಗೆ ಈಗ ಹೋಗುವುದಿಲ್ಲ, ಏಕೆಂದರೆ ಒಂದು ಧರ್ಮಕ್ಕೆ ಯಾವುದು ಅತ್ಯಗತ್ಯ ಮತ್ತು ಯಾವುದು ಅತ್ಯಗತ್ಯ ಅಲ್ಲ ಎಂದು ನಿರ್ಧರಿಸಲು ಸಾಕಷ್ಟು ನಿರ್ಣಾಯಕವಾಗಿ ಕಂಡುಹಿಡಿಯಬಲ್ಲ ಮಾನದಂಡಗಳು ಇರಬಹುದು ಅಥವಾ ಇಲ್ಲದಿರಬಹುದು. ಈ ಪ್ರಶ್ನೆಗಳ ಬಗ್ಗೆ ಪರಿಶೋಧಿಸಲು ನ್ಯಾಯಾಲಯಗಳು ಮತ್ತು ನ್ಯಾಯಾಧೀಶರುಗಳು ಸಮರ್ಥರೆ ಮತ್ತು ಸಜ್ಜುಗೊಂಡಿದ್ದಾರೆಯೇ ಎಂಬ ಪ್ರಶ್ನೆಯನ್ನು ಸಾರ್ವಜನಿಕ ಉಪನ್ಯಾಸಗಳಲ್ಲಿ ಉತ್ತರಿಸಬಹುದು. ಅದೇನೇ ಇರಲಿ, ಧರ್ಮ ಅತ್ಯಗತ್ಯವೋ ಅಥವಾ ಅಲ್ಲವೋ, ಶಿಕ್ಷಣ ಅತ್ಯಗತ್ಯ ಎಂಬ ಅಂಶವು ಉಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಬಿಟ್ಟುಹೋಗಿದೆ. ಶಾಲೆಗಳ ಅವಕಾಶದ ಹಕ್ಕಿನ ವಿರುದ್ಧ ಎದುರಿಗೆ ಹಿಜಾಬನ್ನು ನಿಲ್ಲಿಸಿ ಕಾದಾಡುವಂತೆ ಮಾಡುವ ಮೂಲಕ ಹಿಜಾಬ್ ನಿಷೇಧಿಸುವುದುಮತ್ತು ಶಿಕ್ಷಣದ ಅವಕಾಶಪಡೆಯುವುದು ಎರಡನ್ನೂ ನ್ಯಾಯಾಲಯ ಒಂದೇ ಸಮತಲದಲ್ಲಿ ಇಟ್ಟಿದೆ. ನಿಸ್ಸಂಶಯವಾಗಿಯೂ, ಶಿಕ್ಷಣವು ಎಲ್ಲರಿಗೂ ಲಭಿಸಬೇಕು ಎಂಬಸಂವಿಧಾನದ ಆಶಯವು ಹಿಜಾಬನ್ನು ಗುರಿಯಾಗಿಸಿದ ಸರ್ಕಾರದ, ನಿಷ್ಕಪಟವಾದ ಅಥವಾ ದುರುದ್ದೇಶದ, ಆಶಯವನ್ನು ಸೋಲಿಸಬೇಕಾಗಿತ್ತು ಅಥವಾ ಮೇಲುಗೈ ಪಡೆಯಬೇಕಿತ್ತು.

ಧರ್ಮಪ್ರಜ್ಞೆಯ ಕುರಿತು ಬಿಜೊಯ್ ಇಮ್ಯಾನುಯಲ್ ಪ್ರಕರಣದಲ್ಲಿ ಮೈಲುಗಲ್ಲಾಗಿ ಹೊರಹೊಮ್ಮಿರುವ ಮಾನದಂಡವನ್ನು ಅನ್ವಯಿಸುವಲ್ಲಿ ನ್ಯಾಯಾಲಯವು ವಿಫಲವಾಗಿದೆ. ಬಿಜೊಯ್ ಇಮ್ಯಾನುಯಲ್‌ಪ್ರಕರಣದಲ್ಲಿ ರಾಷ್ಟ್ರಗೀತೆಯನ್ನು ಹಾಡಲು ನಿರಾಕರಿಸಿದರು ಎಂಬ ಕಾರಣಕ್ಕೆ ಶಾಲಾಧಿಕಾರಿಗಳು ಮೂರು ಮಕ್ಕಳನ್ನು ಶಾಲೆಯಿಂದ ತೆಗೆದುಹಾಕಿದ್ದರು. ಆ ಪ್ರಕರಣದಲ್ಲಿಜಹೋವನ ಸಾಕ್ಷಿ ಸಮುದಾಯ (ಧಾರ್ಮಿಕ ತತ್ವಗಳ ಮೇಲೆ ರಾಷ್ಟ್ರಕ್ಕೆ ಪರಮಾಧಿಕಾರ ಇದೆಯೆಂಬ ವಾದವನ್ನು ನಿರಾಕರಿಸುವ ಸಹಸ್ರಮಾನವಾದಿ ಪಂಥದವರು) ಕ್ಕೆ ಸೇರಿದ ಮಕ್ಕಳು ತಮ್ಮ ಧರ್ಮದ ಪ್ರಕಾರ ಒಂದು ದೇಶದ ಗತವೈಭವವನ್ನು ಹೊಗಳುವ ಗೀತೆಯನ್ನು ಹಾಡಲು ಸಾಧ್ಯವಿಲ್ಲ, ದೇವರನ್ನು ಮಾತ್ರ ತಾವು ಸ್ತುತಿಸುತ್ತೇವೆ ಎಂದು ರಾಷ್ಟ್ರಗೀತೆ ಹಾಡಲು ನಿರಾಕರಿದರು. ಧರ್ಮಪ್ರಜ್ಞೆ ಎನ್ನುವುದು ವ್ಯಕ್ತಿನಿಷ್ಠ ಕಲ್ಪನೆ ಮತ್ತು ಅದರ ಸಾಚಾತನವನ್ನು ಅದರಲ್ಲಿ ಒಳಗೊಂಡ ವ್ಯಕ್ತಿಯ ದೃಷ್ಟಿಕೋನದಿಂದ ಅಳೆಯಬೇಕಾಗುತ್ತದೆ, ಸರ್ಕಾರ ಅಥವಾ ನ್ಯಾಯಾಲಯದ ಮೂಲಕ ಅಲ್ಲ ಎಂದು ಸುಪ್ರೀಂಕೋರ್ಟು ಅಭಿಪ್ರಾಯಪಟ್ಟಿತು. ಪ್ರಜ್ಞೆ ಎನ್ನುವುದು ಧಾರ್ಮಿಕ ನಂಬಿಕೆಯಿಂದ ಅಥವಾ ಸಂಪೂರ್ಣವಾಗಿ ಧರ್ಮದ ಹೊರತಾಗಿ ಕೂಡ ಹುಟ್ಟಬಹುದು. ಬಾಕ್ಸರ್ ಆಗಿ ದಂತಕತೆಯಾದ ಮತ್ತು ಸಾಮಾಜಿಕ ಕಾರ್ಯಕರ್ತರಾಗಿದ್ದ ಮಹಮದ್ ಅಲಿ ಪ್ರಕರಣವನ್ನು ನೆನಪಿಸಿಕೊಳ್ಳಬಹುದು. ವಿಯೆಟ್ನಾಮ್ ವಿರುದ್ಧ ಹೋರಾಡಲು ಅಲಿಯವರನ್ನು ಸೈನ್ಯಕ್ಕೆ ಸೇರಲು ಆದೇಶ ಮಾಡಿದಾಗ, ತನ್ನ ಧಾರ್ಮಿಕ ನಂಬಿಕೆಯ ಪ್ರಕಾರ ತಾನು ಯುದ್ಧ ಮಾಡುವ ಹಾಗಿಲ್ಲ, ಆದ್ದರಿಂದ ತಾನು ಸೈನ್ಯಕ್ಕೆ ಸೇರುವುದಿಲ್ಲ ಎಂದು ನಿರಾಕರಿಸಿದರು. ಅದೇ ರೀತಿಯಲ್ಲಿ ಪ್ರಖ್ಯಾತ ವಿಜ್ಞಾನಿ ಎಡಿಂಗ್ಟನ್ ಯುದ್ಧ ಮಾಡಲು ನಿರಾಕರಿಸಿದರು, ಏಕೆಂದರೆ ತಾನು ಕ್ವೇಕರ್ ಸಮುದಾಯದವನು (ಶಾಂತಿ ತತ್ವಗಳಲ್ಲಿ ನಿಷ್ಠೆಯುಳ್ಳವರು ಮತ್ತು ಉಡುಪಿನಲ್ಲಿ ಸರಳರೂ ಹಾಗೂ ಬಿರುದುಗಳು ಮತ್ತಿತರ ಗೌರವಾಂಕಿತಗಳನ್ನು ಬಳಸದಿರುವವರು) ತಾವು ಶಾಂತಿಪ್ರಜ್ಞೆಯನ್ನು ಪಾಲಿಸುವವರು ಎಂದು ಹೇಳಿದರು. ಇವು ಧರ್ಮಾಧಾರಿತ ಉದಾಹರಣೆಗಳು. ಈಗ ನಾವು ಧರ್ಮಗಳ ಹೊರತಾದ ಪ್ರಕರಣಗಳನ್ನು ನೋಡೋಣ. ಸಂಸತ್ತಿಗೆ ಚುನಾಯಿತರಾದ ಮತ್ತು ಸರ್ಕಾರದಲ್ಲಿರುವ ನಿರೀಶ್ವರವಾದಿಗಳು ಮತ್ತು ಕಮ್ಯೂನಿಸ್ಟರು (ನಾಸ್ತಿಕರು) ಪ್ರಮಾಣ ವಚನ ಸ್ವೀಕರಿಸುವಾಗ, ಇತರರು ದೇವರ ಹೆಸರಿನಲ್ಲಿ ಸ್ವೀಕರಿಸಿದರೆ, ಸಂವಿಧಾನದ ಹೆಸರಿನಲ್ಲಿ ಸ್ವೀಕರಿಸುವುದನ್ನು ನಾವು ನೋಡಿದ್ದೇವೆ. ಈ ಹಕ್ಕನ್ನು ಸಂವಿಧಾನದೊಳಗಡೆಯೇ ಅಳವಡಿಸಲಾಗಿದೆ. ಆದ್ದರಿಂದ, ಸರಿಯಾದ ಆತ್ಮಸಾಕ್ಷಿಯ ಸ್ಥಾನ ಏನು ಎನ್ನುವುದನ್ನು ತೀರ್ಮಾನಿಸುವುದು ಕೋರ್ಟಿನ ಕೆಲಸವಲ್ಲ, ಯಾವ ಆಧಾರದ ಮೇಲೆ ವ್ಯಕ್ತಿಯು ನಿರ್ದಿಷ್ಟ ಆತ್ಮಸಾಕ್ಷಿಯ ಮಾತನ್ನಾಡುತ್ತಿದ್ದಾನೆ ಎಂದು ಪರೀಕ್ಷಿಸುವುದಷ್ಟೆ ಅದರ ಕೆಲಸ. ಬಿಜೊಯ್ ಎಮ್ಯಾನುಯಲ್ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಹೀಗೆ ಹೇಳಿದೆ: "ತಮ್ಮ ಪ್ರಜ್ಞಾಪೂರ್ವಕ ಧಾರ್ಮಿಕ ನಂಬಿಕೆಗಳ ಕಾರಣ ಮತ್ತು ಅವರು ಬೆಳಗಿನ ರಾಷ್ಟ್ರಗೀತೆಯ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನಿಂತು ರಾಷ್ಟ್ರಗೀತೆಯನ್ನು ಹಾಡಿಲ್ಲದ ಕಾರಣ, ಮೂರು ಮಕ್ಕಳನ್ನು ಶಾಲೆಯಿಂದ ಉಚ್ಚಾಟನೆ ಮಾಡಿರುವುದು ಧರ್ಮಪ್ರಜ್ಞೆಯ ಸ್ವಾತಂತ್ರ್ಯ ಹಾಗೂ ಮುಕ್ತವಾಗಿ ಧರ್ಮವನ್ನು ಘೋಷಿಸಿಕೊಳ್ಳುವ, ಆಚರಿಸುವ ಮತ್ತು ಪ್ರಚಾರ ಮಾಡುವ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ."

ವಿಷಾದವೆಂದರೆ, ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪಿನಲ್ಲಿ ನ್ಯಾಯಾಲಯವು ಹಿಜಾಬ್ ಪ್ರಕರಣದಲ್ಲಿ ಬಿಜೊಯ್ ಎಮ್ಯಾನುಯಲ್ ಪ್ರಕರಣದಲ್ಲಿನ ಸುಪ್ರೀಂಕೋರ್ಟಿನ ನಿಲುವನ್ನು ಅಳವಡಿಸಿಕೊಳ್ಳಲು ವಿಫಲವಾಗಿದೆ. ಕೋರ್ಟು ಯಾರನ್ನೋ ಮೆಚ್ಚಿಸಲು ಅದನ್ನು ಕಡೆಗಣಿಸಿತೇ, ಸುಪ್ರೀಂಕೋರ್ಟಿನ ತೀರ್ಪು ಮಕ್ಕಳ ಒಳ್ಳೆಯ ನಡವಳಿಕೆಯ ಬಗ್ಗೆ ತೂಗಿನೋಡಿದೆ ಎಂದಷ್ಟೇ ಹೇಳಿದೆ. ಬಿಜೊಯ್ ಎಮ್ಯಾನುಯಲ್ ತೀರ್ಪನ್ನು ಅವಸರದ ರೀತಿಯಲ್ಲಿ ಕಡೆಗಣಿಸಿರುವುದು ತಬ್ಬಿಬ್ಬುಗೊಳಿಸಿದೆ. ಹಿಜಾಬ್ ಧರಿಸಿದ ಹುಡುಗಿಯರು ಸರಿಯಾಗಿ ವರ್ತಿಸಲಿಲ್ಲವೇ ಅಥವಾ ಹಿಜಾಬನ್ನು ಧರಿಸಿರುವುದೇ ಕೆಟ್ಟ ನಡವಳಿಕೆಯೇ ಎಂಬ ಭಾವನೆ ಮೂಡಿಸಿದೆ. ಈ ತೀರ್ಮಾನಗಳು ಯಾವುವೂ ಪ್ರೋತ್ಸಾಹಕಾರಿಯಾಗಿಲ್ಲ. ಈ ಬಗ್ಗೆ ಸುಪ್ರೀಂಕೋರ್ಟಿಗೆ ಮನವಿ ಸಲ್ಲಿಸುವುದರ ಮೂಲಕ ಅವನ್ನು ಸರಿಪಡಿಸಬಹುದು ಎಂಬ ಭರವಸೆ ಇದೆ.

ಒಟ್ಟಿನಲ್ಲಿ, ಹಿಜಾಬ್ ಪ್ರಕರಣದಲ್ಲಿ ಉಚ್ಚ ನ್ಯಾಯಾಲಯದ ತೀರ್ಪು ಕುರಿತ ಚರ್ಚೆಯಿಂದ ವ್ಯಕ್ತವಾಗುತ್ತಿರುವುದು ಏನೆಂದರೆ ಮೂಲ ಸಾಂವಿಧಾನಿಕ ಮೌಲ್ಯಗಳನ್ನು ದೂರದೃಷ್ಟಿಯಿಲ್ಲದೇ ನಿರಾಕರಿಸಲಾಗಿದೆ. "ನಮ್ಮ ಸಂವಿಧಾನವು ಕಾರ್ಲ್ ಮಾರ್ಕ್ಸ್‌ನ ರಾಚನಿಕ–ಕ್ರಿಯಾತ್ಮಕವಾದಿ ನಿಲುವಾದ 'ಮತಧರ್ಮವು ಜನಸಮುದಾಯದ ಅಫೀಮು' ಎಂಬ ಕಾಯಿದೆ ಮಾಡಿಲ್ಲ" ಎಂದು ತೀರ್ಪಿನ ಆರಂಭಿಕ ಮಾತುಗಳಲ್ಲಿ ಅಭಿಪ್ರಾಯಪಡಲಾಗಿದೆ. ಬದಲಾಗಿ, ನ್ಯಾಯಾಲಯದ ನ್ಯಾಯಾಧೀಶರುಗಳು ಉದ್ಘೋಷಿತ ನ್ಯಾಯಶಾಸ್ತ್ರಜ್ಞ ಹೆಚ್.ಎಂ.ಸೀರ್ವಾಯ್ ಅವರನ್ನು ಉಲ್ಲೇಖಿಸಿ "ಭಾರತವು ಜಾತ್ಯತೀತವಾದುದು ಆದರೆ ಧರ್ಮವಿರೋಧಿ ಪ್ರಭುತ್ವವಲ್ಲ, ಏಕೆಂದರೆ ನಮ್ಮ ಸಂವಿಧಾನವು ಧರ್ಮಪ್ರಜ್ಞೆ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ಖಾತರಿಪಡಿಸಿದೆ. ಪರಿಚ್ಛೇದ27 ಮತ್ತು 28 ಪ್ರಭುತ್ವದ ಜಾತ್ಯಾತೀತ ಲಕ್ಷಣಗಳನ್ನು ಒತ್ತಿ ಹೇಳಿದೆ . .." ಎಂದು ಅಭಿಪ್ರಾಯಪಟ್ಟಿದೆ. ಭಾರತದ ಜಾತ್ಯಾತೀತವಾದವು ಸರ್ವ ಧರ್ಮ ಸಮಭಾವಮತ್ತು ಧರ್ಮನಿರಪೇಕ್ಷತೆಯ ನಡುವೆ ತೂಗಾಡುತ್ತಿದೆ. ವಿಷಾದವೆಂದರೆ, ಹಿಜಾಬ್ ಪ್ರಕರಣದಲ್ಲಿ ಉಚ್ಚ ನ್ಯಾಯಾಲಯದ ತೀರ್ಪು ಸಾಂವಿಧಾನಿಕ ಜಾತ್ಯಾತೀತವಾದಕ್ಕೆ–ಸರ್ವಧರ್ಮ ಸಮಭಾವ ಹಾಗೂ ಧರ್ಮ ನಿರಪೇಕ್ಷತೆ ಎರಡೂ ಅಂಶಗಳಲ್ಲಿ–ಅಪಕಾರಮಾಡಿದೆ.

ಈ ತೀರ್ಪಿನಲ್ಲಿ ನ್ಯಾಯಾಲಯವು ಕುರಾನ್, ಒಂದು ಧರ್ಮವಾಗಿ ಇಸ್ಲಾಂ, ಧರ್ಮಪ್ರಜ್ಞೆಯ ಹಕ್ಕು, ಮತ್ತು ವಾಕ್ ಸ್ವಾತಂತ್ರ್ಯ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಮಿತಿಗಳ ಬಗ್ಗೆ ಬಹಳವಾಗಿ ಹೇಳಿದೆ. ಆದರೆ, ಈ ಪ್ರಕರಣವು ಧರ್ಮದ ಬಗ್ಗೆ ಬಹಳ ಕಡಿಮೆ ಇದೆ ಎಂಬ ಅಂಶವನ್ನು ಗ್ರಹಿಸಲು ವಿಫಲವಾಗಿದೆ. ಮಹಿಳಾ ಹಕ್ಕು, ಮಹಿಳೆಯರ ವಿರುದ್ಧ ತಾರತಮ್ಯ, ಮುಸ್ಲಿಂ ಮಹಿಳೆಯರನ್ನೇ ಗುರಿಯಾಗಿಸಿರುವುದು, ಮಹಿಳೆಯರ ಶಿಕ್ಷಣದ ಹಕ್ಕಿನ ಮೇಲೆ ಪರೋಕ್ಷವಾದ ದಾಳಿ, ಮಹಿಳೆಯರ ಆಯ್ಕೆಯ, ಸ್ವಯಮಾಧಿಕಾರದ, ಸ್ವಾಯತ್ತತೆಯ, ಅಭಿವ್ಯಕ್ತಿ ಹಕ್ಕನ್ನು ಹೀನಾಯಗೊಳಿಸಿರುವುದು, ಮತ್ತು ಅವರ ವಿಮೋಚನೆಯ ಬಗ್ಗೆ ನಿಜವಾದ ಕಟುಟೀಕೆಇವು ಈ ಪ್ರಕರಣದ ಮುಖ್ಯ ಬಿಂದುಗಳಾಗಿವೆ. ಈ ತೀರ್ಪು ಮಹಿಳಾ ಹಕ್ಕುಗಳಿಗೆ ಅಧಿಕ ಅಡಚಣೆಯಾಗಿ ತಾನೇ ತಾನಾಗಿ ತಲೆದೋರಿದೆ. ನಮ್ಮ ಸಂವಿಧಾನದ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಲ್ಲಿ ಈ ತೀರ್ಪು ಅನೂರ್ಜಿತಗೊಳ್ಳಬೇಕಿದೆ ಮತ್ತು ಸುಪ್ರೀಂಕೋರ್ಟು ಇದರತ್ತ ಕ್ರಮವಹಿಸಬೇಕಿದೆ.

ಅನು: ಟಿ. ಸುರೇಂದ್ರರಾವ್



2022-23 ರ ಬಜೆಟ್ ಕೃಷಿ ಕೂಲಿಕಾರರ ಮತ್ತು ಗ್ರಾಮೀಣ ಕೆಲಸಗಾರರ ಪ್ರಮುಖ ಬೇಡಿಕೆಗಳನ್ನು ಈಡೇರಿಸದ ನಿರಾಶಾದಾಯಕ ಬಜೆಟ್

ಗ್ರಾಮೀಣ ದುಡಿಮೆಗಾರರಿಗೆ ಆದ್ಯತೆ ಇರಲಿ

ನಿತ್ಯಾನಂದಸ್ವಾಮಿ

ಬೊಮ್ಮಾಯಿ ಸರ್ಕಾರದ 2022-23 ರ ಬಜೆಟ್ ಜನಪರವಾಗಿರುತ್ತದೆ ಎಂದು ಆಶಿಸಲಾಗಿತ್ತು. ಅದರಲ್ಲಿಯೂ ರಾಜ್ಯದ ಒಟ್ಟು ಜನಸಂಖ್ಯೆಯ 20% ರಷ್ಟಿರುವ ಭೂಹೀನ ಕೃಷಿ ಕೂಲಿಕಾರರು, ದಲಿತರು, ಗ್ರಾಮೀಣ ದುಡಿಮೆಗಾರರು ಹಿಂದಿನ ಎಲ್ಲಾ ಸರ್ಕಾರಗಳಿಂದಲೂ ಕಡೆಗಣಿಸಲ್ಪಟ್ಟವರಾಗಿದ್ದಾರೆ.

ಕೃಷಿ ಕೂಲಿಕಾರರು ಆರ್ಥಿಕವಾಗಿಯೂ ಸಾಮಾಜಿಕ ವಾಗಿಯೂ ತುಳಿತಕ್ಕೆ ಒಳಪಟ್ಟವ ರಾಗಿರುತ್ತಾರೆ. ಕೃಷಿ ಬಿಕ್ಕಟ್ಟು ತೀವ್ರವಾಗುತ್ತಿದ್ದು ಕೃಷಿ ಕೂಲಿಕಾರರಿಗೆ ಹಳ್ಳಿಗಳಲ್ಲಿ ಮೊದಲಿನಂತೆ ಸರಿಯಾಗಿ ಕೆಲಸ ಸಿಗುತ್ತಿಲ್ಲ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯೂ ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಅಗತ್ಯ ವಸ್ತುಗಳ ಬೆಲೆ ಏರಿಕೆ ಇವರನ್ನು ತೀವ್ರವಾಗಿ ಕಾಡುತ್ತಿರುತ್ತದೆ. ಪ್ರಸಕ್ತ ಪಡಿತರ ವ್ಯವಸ್ಥೆ ಅವರ ನೆರವಿಗೆ ಬರುತ್ತಿಲ್ಲ. ಈ ಹಿನ್ನೆಲೆಯಲ್ಲಿ ನಗರಗಳತ್ತ ಅವರ ವಲಸೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ.

ಕೃಷಿ ಕೂಲಿಕಾರರಿಗೆ ಕಾಯಂ ಕೆಲಸದ ಭರವಸೆ ಇಲ್ಲ. ಖಚಿತ ಆದಾಯವಿಲ್ಲ. ವಾಸಕ್ಕೆ ಮನೆಗಳಿಲ್ಲ. ಬೇಸಾಯ ಮಾಡಿ ಜೀವನ ಸಾಗಿಸಲು ಸ್ವಂತಕ್ಕೆ ಕೃಷಿ ಭೂಮಿ ಇಲ್ಲ. ನಮ್ಮ ರಾಜ್ಯದಲ್ಲಿ ಗಿಡ ಮರಗಳಿಗೆ ಕಾನೂನುಗಳಿವೆ. ಪಶು ಪಕ್ಷಿಗಳಿಗೆ ಕಾನೂನುಗಳಿವೆ. ಆದರೆ ಕೃಷಿ ಕೂಲಿಕಾರರಿಗೆ ವರ್ಷವಿಡೀ ಕೆಲಸ, ಆಹಾರದ ಭದ್ರತೆ, ಉಚಿತ ಆರೋಗ್ಯ ಸೇವೆ, ನಿವೃತ್ತಿ ವೇತನ, ಮಕ್ಕಳಿಗೆ ಉಚಿತ ಶಿಕ್ಷಣ ಒದಗಿಸುವ ಒಂದು ಕಾನೂನು ಸಹ ರಚನೆಯಾಗಿಲ್ಲ.

ಕೇರಳ, ತಮಿಳುನಾಡು ಮುಂತಾದ ಕೆಲವು ರಾಜ್ಯಗಳಲ್ಲಿ ಇರುವಂತೆ ರಾಜ್ಯದಲ್ಲಿಯೂ ಕೃಷಿ ಕೂಲಿಕಾರರಿಗಾಗಿ ಒಂದು ಸಮಗ್ರವಾದ ಕಲ್ಯಾಣ ಕಾಯ್ದೆಯನ್ನು ಮತ್ತು ಅದರ ನಿರ್ವಹಣೆಗಾಗಿ ಕೃಷಿ ಕೂಲಿಕಾರರ ಕಲ್ಯಾಣ ನಿಧಿಯೊಂದನ್ನು ಸ್ಥಾಪನೆ ಮಾಡುವ ಒಂದು ಐತಿಹಾಸಿಕ ಘೋಷಣೆಯನ್ನು ಮಾಡಬೇಕೆಂದು ಕೃಷಿ ಕೂಲಿಕಾರರ ಸಂಘ ಮನವಿ ಮಾಡಿತ್ತು. ಕಟ್ಟಡ ನಿರ್ಮಾಣ ಕಾರ್ಮಿಕರು, ಹಮಾಲಿ ಕಾರ್ಮಿಕರಿಗೆ, ಬೀಡಿ ಕಾರ್ಮಿಕರು ಇರುವಂತೆ ಕೃಷಿ ಕಾರ್ಮಿಕರಿಗೂ ಒಂದು ಕಲ್ಯಾಣ ನಿಧಿಯನ್ನು ಸ್ಥಾಪನೆ ಮಾಡುವ ನಿರ್ಧಾರವನ್ನು ಈ ಸಲದ ಬಜೆಟ್‌ನಲ್ಲಿ ಪ್ರಕಟಿಸಬೇಕೆಂದು ವಿನಂತಿಸಲಾಗಿತ್ತು. ಕೃಷಿ ಕೂಲಿಕಾರರ ಮತ್ತು ಗ್ರಾಮೀಣ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕೆಂದು ಕೋರಲಾಗಿತ್ತು. ಆದರೆ ಮುಖ್ಯಮಂತ್ರಿ ಬೊಮ್ಮಾಯಿರವರು ತನ್ನ ಚೊಚ್ಚಲ ಬಜೆಟ್‌ನಲ್ಲಿ ಗ್ರಾಮೀಣ ದುಡಿಮೆಗಾರರನ್ನು ಕುರಿತು ಪ್ರಸ್ತಾಪವನ್ನೇ ಮಾಡಲಿಲ್ಲ.

ಸಮಗ್ರ ಕಾನೂನು

ರಾಜ್ಯದ ಕೃಷಿ ಕೂಲಿಕಾರರಿಗೆ ಮತ್ತು ಗ್ರಾಮೀಣ ಕೆಲಸಗಾರರಿಗೆ ಕನಿಷ್ಠ ವೇತನ, ತುಟ್ಟಿ ಭತ್ಯೆ ಅಲ್ಲದೆ ಭವಿಷ್ಯ ನಿಧಿ (ಫಿ.ಎಫ್.), ಇ.ಎಸ್.ಐ., ನಿವೃತ್ತಿ ವೇತನ ಮುಂತಾದ ಸಾಮಾಜಿಕ ಭದ್ರತೆಯ ಸೌಲಭ್ಯಗಳನ್ನು ಖಾತರಿಪಡಿಸುವ ಸಮಗ್ರ ಶಾಸನವೊಂದನ್ನು ರೂಪಿಸುವ ವಾಗ್ದಾನವನ್ನು 2022-23 ರ ಬಜೆಟ್‌ಬಲ್ಲಿ ಘೋಷಿಸಬೇಕು ಎಂದು ಮನವಿ ಮಾಡಲಾಗಿತ್ತು.

ಕಟ್ಟಡ ನಿರ್ಮಾಣ ಕಾರ್ಮಿಕರು, ಹಮಾಲಿ ಕಾರ್ಮಿಕರು, ಬೀಡಿ ಕಾರ್ಮಿಕರು ಮೊದಲಾದ ಅಸಂಘಟಿತ ಕಾರ್ಮಿಕ ವಿಭಾಗಗಳಿಗೆ ರೂಪಿಸಿರುವಂತೆ ಕೃಷಿ ಕೂಲಿಕಾರರಿಗಾಗಿ ಕಲ್ಯಾಣ ನಿಧಿಯೊಂದನ್ನು ಸ್ಥಾಪಿಸಿ ಕಲ್ಯಾಣ ಮಂಡಳಿಯ ಮೂಲಕ ಅದರ ನಿರ್ವಹಣೆ ಮಾಡುವುದಾಗಿ ಈ ಸಲದ ಬಜೆಟ್‌ನಲ್ಲಿ ಪ್ರಕಟಿಸಬೇಕೆಂದೂ ಅಲ್ಲಿಯ ವರೆಗೆ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ನೀಡುವ ಸೌಲಭ್ಯಗಳನ್ನು ಕೃಷಿ ಕೂಲಿಕಾರರಿಗೂ ನೀಡಬೇಕೆಂದು ಕೋರಲಾಗಿತ್ತು. ಆದರೆ ರಾಜ್ಯ ಸರ್ಕಾರ ಈ ನಿರೀಕ್ಷೆಯನ್ನು ಸುಳ್ಳಾಗಿಸಿದೆ. ಗ್ರಾಮೀಣ ದುಡಿಮೆಗಾರರಿಗೆ ವರ್ಷವಿಡೀ ಕೆಲಸ ಮತ್ತು ಸಮರ್ಪಕ ಆದಾಯ ಖಚಿತವಾಗದೆ ಗ್ರಾಮೀಣಾಭಿವೃದ್ಧಿ ಸಾಧ್ಯವಿಲ್ಲ. ಬಡತನ ನಿವಾರಣೆ ಸಾಧ್ಯವಿಲ್ಲ.


ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ:

ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯನ್ನು ಎಲ್ಲಾ ಗ್ರಾಮಗಳಿಗೆ ವಿಸ್ತರಿಸಿ ಭ್ರಷ್ಟಾಚಾರ ಮುಕ್ತವಾಗಿ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು. ಮಾಡಿದ ಕೆಲಸಕ್ಕೆ ವಾರಕ್ಕೊಮ್ಮೆ ತಪ್ಪದೆ ವೇತನ ನೀಡಬೇಕು. ನಮೂನೆ 6 ರಲ್ಲಿ ಕೆಲಸಕ್ಕಾಗಿ ಅರ್ಜಿಸಲ್ಲಿಸಿದ ತಕ್ಷಣ ಕೆಲಸ ಕೊಡಬೇಕು. ಕೆಲಸ ಕೊಡಲಾಗದ ದಿನಗಳಿಗೆ ತಪ್ಪದೆ ನಿರುದ್ಯೋಗ ಭತ್ಯೆ ನೀಡಬೇಕು. ವರ್ಷದಲ್ಲಿ ಒಬ್ಬನಿಗೆ ಕನಿಷ್ಟ 200 ದಿನ ಕೆಲಸ ಕೊಡಬೇಕು. ದಿನವೊಂದಕ್ಕೆ ರೂ. 600 ವೇತನ ನೀಡಬೇಕು. ಬಾಕಿ ವೇತನ ಪಾವತಿ ಮಾಡಬೇಕು.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ

ಕೇಂದ್ರ ಸರ್ಕಾರದ ಪ್ರಸಕ್ತ ಸಾಲಿನ ಬಜೆಟ್ ಸಹ ಕೃಷಿ ಕೂಲಿಕಾರ ವಿರೋಧಿಯಾಗಿದೆ. ಉದ್ಯೋಗ ಖಾತ್ರಿ ಯೋಜನೆಗೆ ಸರ್ಕಾರ ಒದಗಿಸಿರುವ ಅನುದಾನ ಹಿಂದಿನ ವರ್ಷಕ್ಕಿಂತ ಕಡಿಮೆ. ಯೋಜನೆಯನ್ನು ಎಲ್ಲಾ ಜಿಲ್ಲೆಗಳ ಗ್ರಾಮಗಳಿಗೆ ವಿಸ್ತರಿಸುವ ಕಾರ್ಯಕ್ರಮ ಇಲ್ಲ. ನಿಗದಿತ ಕೆಲಸವನ್ನು ಮುಗಿಸಿ ಕೆಲಸಗಾರರು ವಾಪಸ್ ತಮ್ಮ ಮನೆಗಳಿಗೆ ಹೋಗಲು ಇದ್ದ ಅವಕಾಶವನ್ನು ರದ್ದು ಮಾಡಲಾಗಿದೆ. ದಿನದ ಕೆಲಸವನ್ನು ಪೂರ್ಣಗೊಳಿಸಿದ ನಂತರವೂ ಕೆಲಸಗಾರರು ಕೆಲಸದ ಸ್ಥಳದಲ್ಲೇ ಇರಬೇಕೆಂದು ಕಡ್ಡಾಯಗೊಳಿಸಲಾಗಿದೆ. ಕೆಲಸವನ್ನು ಬಲವಂತವಾಗಿ ಹೇರುವ ಉದ್ದೇಶದಿಂದ ಬೆಳಿಗ್ಗೆ ಒಮ್ಮೆ ಮತ್ತು ಸಂಜೆ ಒಮ್ಮೆ, ಒಟ್ಟು ಎರಡು ಬಾರಿ ಹಾಜರಿಯನ್ನು ದಾಖಲು ಮಾಡಿಕೊಳ್ಳಲಾಗುತ್ತದೆ. ಇದರ ಜವಾಬ್ದಾರಿಯನ್ನು ಕಾಯಕ ಬಂಧು (ಮೇಟ್)ಗಳಿಗೆ ವಹಿಸಿಕೊಡಲಾಗಿದೆ. ಇದು ಗ್ರಾಮೀಣ ಕೆಲಸಗಾರರ ವಿರೋಧಿಯಾಗಿದೆ. ಸಂಬಂದಪಟ್ಟ ಎಲ್ಲ ವ್ಯವಹಾರಗಳನ್ನು ಆನ್‌ಲೈನ್ ಮೂಲಕ ನಿರ್ವಹಿಸುವ ಉದ್ದೇಶವಿದ್ದು ಆನ್‌ಲೈನ್ ಸಂಪರ್ಕ ಇಲ್ಲದ ಗ್ರಾಮೀಣ ಬಡವರಿಗೆ ಅನಾನುಕೂಲವಾಗಲಿದೆ.

ಬೇಸಿಗೆ ತೀವ್ರವಾಗಿ ವ್ಯಾಪಿಸುವ ಪರಿಸ್ಥಿತಿ ಉಂಟಾಗಿದೆ. ಬೇಸಿಗೆ ಹರಡುತ್ತಿದ್ದಂತೆ ಕೆಲಸದ ಪ್ರಮಾಣವನ್ನು ಕಡಿಮೆ ಮಾಡುವ ಬದಲಾಗಿ ಸರ್ಕಾರ ಅದನ್ನು ಹೆಚ್ಚಿಸಲು ಮುಂದಾಗಿದೆ. ಯೋಜನೆಯನ್ನು ನಗರ ಪ್ರದೇಶಗಳಿಗೂ ಅನ್ವಯಿಸುವಂತೆ ಮಾಡಬೇಕಾಗಿದೆ. ತಮಿಳುನಾಡಿನಲ್ಲಿ ರಾಜ್ಯ ಸರ್ಕಾರ ತನ್ನ ಹಣವನ್ನು ಉಪಯೋಗಿಸಿ ನಗರ ಪ್ರದೇಶಕ್ಕೂ ಯೋಜನೆಯನ್ನು ಜಾರಿಗೆ ತಂದಿದೆ. ಕರ್ನಾಟಕದಲ್ಲಿಯೂ ಅದೇ ಮಾದರಿಯಲ್ಲಿ ನಗರ ಪ್ರದೇಶಕ್ಕೂ ಯೋಜನೆಯೊಂದನ್ನು ಜಾರಿಗೆ ತರುವಂತೆ ಒತ್ತಾಯಿಸಬೇಕಾಗಿದೆ.



ಸರ್ಕಾರಿ ಭೂಮಿ ಖಾಸಗಿ ಸಂಸ್ಥೆಗಳಿಗೆ

ಕರ್ನಾಟಕ ರಾಜ್ಯ ಸರ್ಕಾರ ಲಭ್ಯ ಇರುವ ಸರ್ಕಾರಿ ಭೂಮಿಯನ್ನು ಭೂರಹಿತ ದಲಿತರಿಗೆ ಮತ್ತು ಅನೇಕ ವರ್ಷಗಳಿಂದ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವವರಿಗೆ ವಿತರಿಸಿ ಹಕ್ಕು ಪತ್ರಗಳನ್ನು ನೀಡುವ ಬದಲು ಅದನ್ನು ಖಾಸಗಿ ಸಂಸ್ಥೆಗಳಿಗೆ ಮತ್ತು ಕಾರ್ಪೊರೇಟ್ ಕಂಪೆನಿಗಳಿಗೆ ನೀಡಲು ಮುಂದಾಗಿದೆ. ಇದನ್ನು ಬಲವಾಗಿ ವಿರೋಧಿಸಬೇಕಾಗಿದೆ. ರಾಜ್ಯ ಬಜೆಟ್‌ನಲ್ಲಿ ಇಂತಹ ಒಂದು ಕ್ರಮವನ್ನು ನಿರೀಕ್ಷಿಸಲಾಗಿತ್ತು. ಆದರೆ ಅದು ಹುಸಿಯಾಗಿದೆ. ಈಗಲಾದರೂ ನಿರುಪಯುಕ್ತ ಸರ್ಕಾರಿ ಭೂಮಿಯನ್ನು ಬಡ ಬಗರ್‌ಹುಕುಂ ಸಾಗುವಳಿದಾರರಿಗೆ ವಿತರಿಸಬೇಕು. ನಮೂನೆ 50, 53 ಮತ್ತು 57 ರ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಗಳನ್ನು ಕೂಡಲೇ ಇತ್ಯಾರ್ಥ ಮಾಡಬೇಕು. ಈ ಕುರಿತು ಬೊಮ್ಮಾಯಿ ಬಜೆಟ್ ಮೌನವಾಗಿರುವುದು ಆಕ್ಷೇಪಾರ್ಹವಾಗಿದೆ.

ಮನೆ ನಿವೇಶನ:

ಎಲ್ಲಾ ವಸತಿ ರಹಿತ ಕೂಲಿಕಾರ ಕುಟುಂಬಗಳಿಗೆ ಮನೆನಿವೇಶನಗಳನ್ನು ಒದಗಿಸಲು ಅಗತ್ಯವಿರುವ ಭೂಮಿಯನ್ನು ಸ್ವಾಧಿನಪಡಿಸಿಕೊಳ್ಳಲು ಬಜೆಟ್‌ನಲ್ಲಿ ಗರಿಷ್ಠ ಪ್ರಮಾಣದ ಮೊತ್ತವನ್ನು ಮೀಸಲಿಡಬೇಕಾಗಿತ್ತು. ಬಡವರು ಸರ್ಕಾರಿ ಜಾಗದಲ್ಲಿ ಕಟ್ಟಿದ ಮನೆಗಳನ್ನು ನಮೂನೆ 94 ಸಿ (ಗ್ರಾಮೀಣ) ಮತ್ತು 94 ಸಿಸಿ (ನಗರ) ಅಡಿಯಲ್ಲಿ ಸಲ್ಲಿಸಲಾದ ಅರ್ಜಿಗಳನ್ನು ಸಕ್ರಮಗೊಳಿಸುವ ಪ್ರಕ್ರಿಯೆಯನ್ನು ತೀವ್ರಗೊಳಿಸಬೇಕು. ಆದರೆ ಬೊಮ್ಮಾಯಿ ಬಜೆಟ್‌ನಲ್ಲಿ ಅದರ ಪ್ರಸ್ತಾವವೇ ಇಲ್ಲ.

ಪಡಿತರ ವ್ಯವಸ್ಥೆ:

ಎಲ್ಲ ಕೃಷಿ ಕೂಲಿಕಾರರ ಕುಟುಂಬಗಳಿಗೆ ಯಾವುದೇ ಷರತ್ತು ವಿಧಿಸದೆ ಬಿಪಿಎಲ್ ರೇಷನ್ ಕಾರ್ಡ್ ವಿತರಿಸಬೇಕು. ಯೂನಿಟ್ ಪದ್ಧತಿಯನ್ನು ಕೈಬಿಟ್ಟು ಮೊದಲಿನಂತೆ ಕೆ.ಜಿ.ಗೆ. ಒಂದು ರೂ. ದರದಲ್ಲಿ ಪ್ರತಿ ಕೂಲಿಕಾರ ಕುಟುಂಬಕ್ಕೆ ತಿಂಗಳಿಗೆ ಕನಿಷ್ಠ 30 ಕೆಜಿ ಅಕ್ಕಿಯನ್ನು ವಿತರಿಸಬೇಕು. ಬೇಳೆ, ಎಣ್ಣೆ, ಸಕ್ಕರೆ ಮೊದಲಾದ ಅಗತ್ಯ ವಸ್ತುಗಳನ್ನು ಗರಿಷ್ಠ ರಿಯಾಯ್ತಿಯಲ್ಲಿ ಸರ್ಕಾರವೇ ಮಾರಾಟ ಮಾಡಬೇಕು. ಅಕ್ಕಿ ಜೊತೆಯಲ್ಲಿ ಜೋಳ, ರಾಗಿಯನ್ನು ವಿತರಿಸಬೇಕು. ಸೀಮೆ ಎಣ್ಣೆ ನೀಡಬೇಕು.

ನಿವೃತ್ತಿ ವೇತನ ಇತ್ಯಾದಿ

ಕೃಷಿ ಕೂಲಿಕಾರರಿಗೆ ಉಪಕಸುಬುಗಳನ್ನು ಕೈಗೊಳ್ಳಲು ಸಬ್ಬಿಡಿ ಸಹಿತದ ಬ್ಯಾಂಕ್ ಸಾಲವನ್ನು ಶೇಕಡ 1 ರ ಬಡ್ಡಿ ದರದಲ್ಲಿ ಒದಗಿಸಬೇಕು. ಬಲವಂತದ ಸಾಲ ವಸೂಲಿ ಮಾಡಬಾರದು. ಕೃಷಿ ಕೂಲಿಕಾರರ ಮನೆಗಳಿಗೆ ಉಚಿತ ವಿದ್ಯುತ್ ಪೂರೈಕೆ ಮಾಡಬೇಕು. ವಿದ್ಯುತ್ ರಂಗದ ಖಾಸಗೀಕರಣ ಕೈಬಿಡಬೇಕು. 60 ವರ್ಷ ದಾಟಿದ ಎಲ್ಲ ಕೃಷಿ ಕೂಲಿಕಾರರಿಗೆ ರೂ. 1000 ದರದಲ್ಲಿ ಕೇರಳ ಮಾದರಿಯಲ್ಲಿ ಮಾಸಿಕ ನಿವೃತ್ತಿ ವೇತನ ನೀಡಬೇಕು. ವಲಸೆ ಕಾರ್ಮಿಕರ ಕಾಯ್ದೆಯನ್ನು ಪರಿಷ್ಕರಿಸಿ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಅವರಿಗೆ ಅರೋಗ್ಯಕರ ಪರಿಸರದಲ್ಲಿ ವಾಸಕ್ಕೆ ಮನೆಗಳನ್ನು ಒದಗಿಸಬೇಕು. ಮಹಿಳೆಯರಿಗೆ ಸೂಕ್ತ ರಕ್ಷಣೆ ಒದಗಿಸಬೇಕು.

ಆರೋಗ್ಯ-ಶಿಕ್ಷಣ

ಕೃಷಿ ಕೂಲಿಕಾರರಿಗೆ ಕೊರೊನಾ ಲಸಿಕೆಯನ್ನು ಹಾಗೂ ಅಗತ್ಯ ವೈದ್ಯಕೀಯ ಚಿಕಿತ್ಸೆಯನ್ನು ಉಚಿತವಾಗಿ ಒದಗಿಸಬೇಕು. ಕೊರೋನಾ ಹಾವಳಿಯಿಂದ ಬಡಕುಟುಂಬಗಳು ಚೇತರಿಸದೆ ಇರುವದರಿಂದ ಅವರ ಬ್ಯಾಂಕ್ ಖಾತೆಗಳಿಗೆ ಮುಂದಿನ 6 ತಿಂಗಳ ಕಾಲ ತಿಂಗಳಿಗೆ ರೂ. 7500 ಆರ್ಥಿಕ ನೆರವು ಜಮಾ ಮಾಡಬೇಕು. ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಮಕ್ಕಳಿಗೆ ಆರೋಗ್ಯ ರಕ್ಷಣೆ ಒದಗಿಸಬೇಕು. ಎಲ್ಲಾ ಕೂಲಿಕಾರ ಮಕ್ಕಳಿಗೆ ಪ್ರವೇಶ ಸಾಧ್ಯವಾಗುವಂತೆ ಹಾಸ್ಟೆಲುಗಳ ಸಂಖ್ಯೆಯನ್ನು ಗರಿಷ್ಠ ಪ್ರಮಾಣದಲ್ಲಿ ಹೆಚ್ಚಿಸಬೇಕು.

ಆದರೆ ಬೊಮ್ಮಾಯಿ ಸರ್ಕಾರ ಈ ಬೇಡಿಕೆಗಳನ್ನು ಹಿಂದಿನ ಸರ್ಕಾರಗಳಂತೆ ಪರಿಗಣಿಸಲೇ ಇಲ್ಲ. ಗ್ರಾಮೀಣ ದುಡಿಮೆಗಾರರಿಗೆ ಈಗ ಉಳಿದಿರುವುದು ಒಂದೇ ದಾರಿ. ಸಮರಶೀಲ ಹೋರಾಟ.

ಪತಿವ್ರತಾ ಧರ್ಮ, ಬಾಲ್ಯ ವಿವಾಹ ಎಂಬ ಬಾಲ ಕಾರ್ಮಿಕ ಪದ್ಧತಿ...... ಪುಟ 11 ರಿಂದ

ಏಕೆ ಹೀಗಾಯಿತು? ಬದಲಾವಣೆ ಹೇಗೆ?:

ಮಹಿಳೆಯರ ಅತಿ ದುಡಿಮೆ, ವಿರಾಮ ದುರ್ಲಭವಾಗುವ ಪರಿಸ್ಥಿತಿ, ಲಭ್ಯವಾದ ವಿರಾಮವನ್ನೂ ತನ್ನಿಚ್ಛೆಯಂತೆ ಬಳಸಿಕೊಳ್ಳಲಾಗದ, ತನ್ನ ವ್ಯಕ್ತಿತ್ವದ ಹಾಗೂ ಸಾಮರ್ಥ್ಯದ ಬೆಳವಣಿಗೆಗೆ ಉಪಯೋಗಿಸಿಕೊಳ್ಳಲಾಗದ ಪರಿಸ್ಥಿತಿ ಉದ್ಭವವಾಗಿದ್ದು ಹೇಗೆ? ಏಕೆ? ಇಂತಹ ಪರಿಸ್ಥಿತಿಯನ್ನು ಬದಲಾಯಿಸುವ, ಹೆಚ್ಚು ವಿರಾಮ ದೊರಕಿಸುವ ಯಾವುದೇ ಪ್ರಯತ್ನ ಈ ಪರಿಸ್ಥಿತಿಗೆ ಮೂಲ ಕಾರಣವೇನು ಎಂಬುದನ್ನು ಅನ್ವೇಷಿಸಬೇಕಾಗುತ್ತದೆ.

ಈ ಮೇಲಿನ ಎಲ್ಲ ಉದಾಹರಣೆ, ವಿವರಣೆಗಳಲ್ಲಿಯೂ ಮುಖ್ಯವಾಗಿ ಕಾಣಬರುವುದು ಮಹಿಳೆ ತಾನು ಹುಟ್ಟಿ ಬೆಳೆದ ಮನೆಯಿಂದ, ತಂದೆತಾಯಿಗಳ ಆರೈಕೆಯಿಂದ ಹೊರ ಹೋಗಿ ಅತ್ತೆಯ ಮನೆ ಸೇರಬೇಕಾದ ಅನಿವಾರ್ಯತೆ. ಇಂತಹ ಸಾಮಾಜಿಕ ಪದ್ಧತಿ ಮೊದಲಿನಿಂದಲೂ ಇತ್ತೆ? ಮಾತೃ ಪ್ರಧಾನ ಸಮಾಜಗಳಲ್ಲಿ ಇಂತಹ ಪದ್ಧತಿ ಇರಲಿಲ್ಲ. ಒಬ್ಬ ತಾಯಿಯ ಎಲ್ಲ ಮಕ್ಕಳೂ – ಗಂಡಾಗಲಿ, ಹೆಣ್ಣಾಗಲಿ ಒಟ್ಟಿಗೆ ಜೀವಿಸುತ್ತಿದ್ದುದು, ಮುಂದೆ ಇದು ಒಬ್ಬ ಅಜ್ಜಿ, ಮುತ್ತಜ್ಜಿಯ ಮಕ್ಕಳೂ ಒಂದೆಡೆಯಲ್ಲಿ ಜೀವಿಸುತ್ತಿದ್ದುದು ಕಾಣಬರುತ್ತದೆ. ಆ ಕುಟುಂಬದ ಹೆಂಗಸರೊಂದಿಗೆ ಲೈಂಗಿಕ ಸಂಬಂಧ ಹೊದಿರುವ ಗಂಡಸರು ತಮ್ಮ ಕುಟುಂಬಗಳಿಂದ ರಾತ್ರಿ ವೇಳೆ ಬಂದು ಮತ್ತೆ ತಮ್ಮ ಕುಟುಂಬಕ್ಕೆ ಮರಳುವುದು ಆಗಿನ ಪದ್ಧತಿ. ಈಗ ಪ್ರಚಲಿತವಿರುವ ವಿವಾಹ ಪದ್ಧತಿ ಅಸ್ತಿತ್ವಕ್ಕೆ ಬರುವ ಮೊದಲಿನ ಪರಿಸ್ಥಿತಿ ಇದು.

ಹೀಗಾಗಿ ತಾಯ ಮನೆಯಲ್ಲಿಯೇ ಉಳಿದು ತಮ್ಮ ಬದುಕಿನ ಅವಶ್ಯಕತೆಗಳಿಗೆ ಅನುಸಾರವಾಗಿ ಕೆಲಸ ಬೊಗಸೆಗಳನ್ನು ಹಂಚಿಕೊಂಡು ಮಾಡುತ್ತಿದ್ದುದು ಒಂದು ರೀತಿ ಪರಸ್ಪರ ಸಹಕಾರದಿಂದ, ಸ್ವ ಇಚ್ಛೆಯಿಂದ ದುಡಿಯುವ ಪದ್ಧತಿ. ವಿರಾಮದ ಉಪಯೋಗವೂ ಸ್ವ ಇಚ್ಛೆಯಿಂದಲೇ.

ಆದರೆ ವಿವಾಹ ಪದ್ಧತಿ ಆರಂಭವಾಗಿ ಅತ್ತೆಯ ಮನೆಗೆ ಹೆಣ್ಣು ಸ್ಥಳಾಂತರವಾಗುವ ಪದ್ಧತಿ ಆಕೆಯನ್ನು ಅಧೀನತೆಗೆ, ಪರಾವಲಂಬನೆಗೆ, ಹೇರಿದ ದುಡಿಮೆಗೆ ದೂಡಿತು.

ಹೀಗೆ ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಆದದ್ದು ಹೇಗೆ, ಯಾವಾಗ?

ಮನುಷ್ಯ ಸಮಾಜದ ವಿಕಾಸವನ್ನು ಅಧ್ಯಯನ ಮಾಡಿದ ವಿದ್ವಾಂಸರುಗಳು ಮನುಷ್ಯರು ಅದರಲ್ಲಿಯೂ ಮಹಿಳೆ ಮುಖ್ಯವಾದ ಪಾತ್ರ ವಹಿಸಿ ಕೃಷಿಯನ್ನು ಕಂಡುಕೊಂಡ ಮೇಲೆ ಈ ಪರಿಸ್ಥಿತಿ ಉದ್ಭವಿಸಿತು ಎಂಬುದನ್ನು ಸಂಶೋಧನೆಗಳ ಮೂಲಕ ಕಂಡುಕೊಂಡಿದ್ದಾರೆ. ಕೃಷಿ ಭೂಮಿಯನ್ನು ವಿಸ್ತರಿಸಲು ಆಕ್ರಮಣ, ಯುದ್ಧಗಳನ್ನು ಅವಲಂಬಿಸಿದ ನಂತರದ ಕಾಲದಲ್ಲಿ ಭೂಮಿ, ಮುಖ್ಯವಾಗಿ ಕೃಷಿ ಭೂಮಿ ಪುರುಷರ ಸ್ವತ್ತಾಯಿತು. ಭೂಮಿಯ ಜೊತೆಗೇ ಇತರ ಸಂಪತ್ತು ಕೂಡಾ ಪುರುಷರ ಆಸ್ತಿಯಾಯಿತು. ಆಗ ಉದ್ಭವವಾದ ಪ್ರಶ್ನೆ ಈ ಸ್ವತ್ತು,ಸಂಪತ್ತು ಅದರ ಒಡೆಯನಾದ ಪುರುಷ ಇಲ್ಲವಾದ ಮೇಲೆ ಯಾರಿಗೆ ಸಲ್ಲಬೇಕು ಎಂಬುದು. ಇದಕ್ಕೆ ಕಂಡುಕೊಂಡ ಪರಿಹಾರ ಮದುವೆ. ಮದುವೆಯಾದ ನಂತರ ಹೆಣ್ಣು ಗಂಡನ ಮನೆಯಲ್ಲಿ ಬಾಳುವೆ. ಅವನ ಆಸ್ತಿಗೆ ಉತ್ತರಾಧಿಕಾರಿಯಾಗುವವರ ಹುಟ್ಟಿಗೆ ಕಾರಣವಾಗುವುದು, ಅವರನ್ನು ಬೆಳೆಸುವುದು ಹೆಣ್ಣಿನ ಜೀವನದ ಪ್ರಧಾನ ಹೇತುವಾಯಿತು. ಆಸ್ತಿಯ ಹಕ್ಕಿಲ್ಲದ ಹೆಣ್ಣು ಪುರುಷರ ಅಧೀನಳಾದಳು, ಅವರ ಮೇಲೆ ಅವಲಂಬಿತಳಾದಳು.

ಇದು ಪುರುಷಾಧಿಪತ್ಯದ ಸಾಮಾಜಿಕ ವ್ಯವಸ್ಥೆಯ ಉದ್ಭವಕ್ಕೆ ಕಾರಣವಾಯಿತು. ಮಹಿಳೆಯರ ಮೇಲೆ ವಿರಾಮ ದುರ್ಭರ ದುಡಿಮೆಯನ್ನು ಹೇರಲು ಕಾರಣವಾಯಿತು.

ಆಸ್ತಿಯ ಒಡೆತನದ ಮೇಲೆ ಆಧಾರಿತವಾದ ಪುರುಷಾಧಿಪತ್ಯದ ವ್ಯವಸ್ಥೆಯನ್ನು ಬದಲಿಸದ ಹೊರತು ಮಹಿಳೆಯ ಅತಿ ದುಡಿಮೆ, ಅಧೀನತೆ, ದಮನ, ಸ್ವಾತಂತ್ರ್ಯ ರಾಹಿತ್ಯ ಮೊದಲಾದ ಸಮಸ್ಯೆಗಳಿಗೆ ಮೂಲಭೂತ ಪರಿಹಾರ ಸಾಧ್ಯವಿಲ್ಲ.

ಕಾಪು ಮಾರಿಗುಡಿ ಜಾತ್ರೆಯಲ್ಲಿ ಹಿಂದುಯೇತರ ಸಮುದಾಯದ ವ್ಯಾಪಾರಸ್ಥರು ಅಂಗಡಿ ತೆರೆಯಲು ಅವಕಾಶ ಇಲ್ಲ ಎಂಬ ನಿರ್ಣಯ ವಿಭಜನೆಗೆ ದಾರಿ

ಮಾರ್ಚ್ 22 ಮತ್ತು 23 ರಂದು ನಡೆಯಲಿರುವ ಮಾರಿಪೂಜೆಯ ಸಂದರ್ಭ ದಲ್ಲಿ ಹಿಂದೂಯೇತರ ಸಮುದಾಯದ ವ್ಯಾಪಾರಸ್ಥರಿಗೆ ಅಂಗಡಿ ತೆರೆಯಲು ಅವಕಾಶ ನೀಡುವುದಿಲ್ಲ ಎಂದು ಕಾಪು ಪುರಸಭೆ ಮತ್ತು ಮಾರಿಗುಡಿ ವ್ಯವಸ್ಥಾಪನಾ ಸಮಿತಿ ಎರಡು ಭಿನ್ನ ಕಾರಣ ನೀಡಿ ನಿರ್ಣಯ ಕೈಗೊಂಡಿದ್ದಾರೆ. ಇದು ಸರಿಯಲ್ಲ. ಜಾತ್ಯಾತೀತ ಭಾರತದಲ್ಲಿ ಎಲ್ಲಾ ಸಮುದಾಯಗಳನ್ನು ಸಮಾನವಾಗಿ ಕಾಣಬೇಕು. ಈಗ ತೆಗೆದುಕೊಂಡಿರುವ ನಿರ್ಣಯದಿಂದ ಅಪನಂಬಿಕೆಗಳು ಇನ್ನಷ್ಟು ಹೆಚ್ಚಲಿದೆ ಮತ್ತು ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ, ಸಿಖ್ ಮೊದಲಾದ ಸಮುದಾಯದವರು ವ್ಯಾಪಾರ ಮಾಡುವಂತಿಲ್ಲ. ಇದು ಮುಂದುವರಿದು ಬೇರೆ ಬೇರೆ ಆಯಾಮ ಪಡೆದು ಇಡೀ ರಾಜ್ಯಕ್ಕೆ ವಿಸ್ತರಿಸುವ ಸಂಭವ ಇದೆ. ಇನ್ನಷ್ಟು ಕೋಮು ವಿಭಜನೆಗೆ ಇದು ಕಾರಣವಾಗುತ್ತದೆ.

ತಾವು ಈ ಕೂಡಲೇ ಮಧ್ಯಪ್ರವೇಶ ಮಾಡಿ ಕಾನೂನು, ಸುವ್ಯವಸ್ಥೆ ಹೆಸರಲ್ಲಿ ಸಂವಿಧಾನ ವಿರೋಧಿ ನಿರ್ಣಯ ಕೈಗೊಳ್ಳದಂತೆ ಕ್ರಮವಹಿಸಬೇಕೆಂದು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಹಿಜಾಬ್ ವಿವಾದದ ಸಂದರ್ಭದಲ್ಲಿ ನಡೆದ ಶಾಂತಿ ಸಭೆಯಲ್ಲಿ ಎಲ್ಲಾ ಸಮುದಾಯದ ಧರ್ಮಗುರುಗಳು, ಎಲ್ಲಾ ರಾಜಕೀಯ ಪಕ್ಷಗಳ ಮತ್ತು ಸಂಘ ಸಂಸ್ಥೆಗಳ ಮುಖಂಡರ ಸಭೆ ಕರೆದು ಸೌಹಾರ್ದಯುತ ವಾತಾವರಣ ನಿರ್ಮಾಣ ಮಾಡಬೇಕೆಂದು ಪಕ್ಷದ ವತಿಯಿಂದ ತಮ್ಮನ್ನು ವಿನಂತಿಸಿದ್ದೆವು. ಆದರೆ ತಾವು ಯಾವುದೇ ಕ್ರಮ ಕೈಗೊಂಡಿಲ್ಲ. ಈಗಲಾದರೂ ಎಲ್ಲಾ ಸಮುದಾಯದ ಮುಖಂಡರನ್ನು ಕರೆದು ಮಾತುಕತೆ ನಡೆಸಿ ಸೌಹಾರ್ದ ವಾತಾವರಣ ನಿರ್ಮಾಣ ಮಾಡಬೇಕೆಂದು ವಿನಂತಿಸಿದೆ.

ಪರ್ಯಾಯ ಜನಪರ ಬಜೆಟ್, ಕೈಗಾರಿಕೆ ಮತ್ತು ಕಾರ್ಮಿಕರ ಪ್ರಶ್ನೆಗಳು.... ಪುಟ 9 ರಿಂದ

77.58 ಲಕ್ಷ ಕುಟುಂಬಗಳಲ್ಲಿ 42.5 ಲಕ್ಷ ಕೃಷಿ ಆಧಾರಿತ ಕುಟುಂಬಗಳಾದರೆ, 35.08 ಲಕ್ಷ ಕುಟುಂಬಗಳು ಕೃಷಿಯೇತ್ತರ ಕುಟುಂಬಗಳಾಗಿವೆ ಅಂದರೆ ಶೇಕಡ 45.2 ಕುಟುಂಬಗಳು ಕೃಷಿಯೇತ್ತರ ಜೀವನಾಧಾರವನ್ನು ಹೊಂದಿವೆ ಅಥವಾ ಹೊಂದಲು ಮುಂದಾಗಿ ಅಸಂಘಟಿತ ವಲಯದ ಹಿಗ್ಗುವಿಕೆಗೆ ಕೊಡುಗೆ ನೀಡಿದ್ದಾರೆ.

ಇಂತಹ ಅಸಂಘಟಿತ ಲವಯದ ಕಾರ್ಮಿಕರ ಜೀವನೋಪಾಯ ಸಂರಕ್ಷಿಸಲು ಅಗತ್ಯ ಕ್ರಮಗಳಾಗಬೇಕಿದೆ. ಇದರಲ್ಲಿ ಪ್ರಧಾನವಾಗಿ ಉದ್ಯೋಗ ಪಡೆಯಲು ಆಧರವಾಗಿರುವ ಸಾರಿಗೆ ರಂಗದಲ್ಲಿ ಅಸಂಘಟಿತ ಕಾರ್ಮಿಕರ ಪ್ರಮಾಣ ಹೆಚ್ಚುತ್ತಿದೆ. 2011–12 ರಲ್ಲಿ ಶೇಕಡ 4.3 ಉದ್ಯೋಗದ ಪಾಲನ್ನು ಹೊಂದಿದ್ದ ಸಾರಿಗೆ ರಂಗವು 2019–20 ರಲ್ಲಿ ಶೇಕಡ 5.09 ಪಾಲನ್ನು ಹೊಂದಿದೆ. ಅಂದರೆ ಸಾರಿಗೆ ವಲಯದ ಮೇಲೆ ಅವಲಂಬಿತ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಿದೆ. ಆದರೆ 2030ರ ವೇಳೆಗೆ ನಿಲುಗಡೆಯಾಗಲಿರುವ ಪೆಟ್ರೋಲ್, ಡೀಸಲ್ ಆಧಾರಿತ ಸಾರಿಗೆಯ ಬದಲಿಗೆ ರೂಪಿತಗೊಳ್ಳಬೇಕಿರುವ ವಿದ್ಯುತ್ ಚಾಲಿತ ಸಾರಿಗೆಗೆ ಹಾಗೂ ಸ್ವಯಂ ಉದ್ಯೋಗಿ ಆಟೋ, ಟ್ಯಾಕ್ಸಿ ಚಾಲಕರಿಗೆ ಅದಕ್ಕೆ ಮಾರ್ಪಡಲು ಅಗತ್ಯ ಕ್ರಮಗಳು ಉತ್ತೇಜನಗಳು ರೂಪಿತವಾಗಬೇಕಿದೆ. ಅದೇ ವೇಳೆ ಆಪ್ ಆಧಾರಿತ ಉಲಾ, ಊಬರ್ ಮುಂತಾದ ಅಗ್ರಗೇಟರ್ ರೂಪಿತ ಆಟೋ, ಟ್ಯಾಕ್ಸಿಗಳ ಸವಾಲು ಪೈಪೋಟಿ ಎದುರಿಸಲು ಸ್ವಯಂ ಉದ್ಯೋಗಿ ಚಾಲಕರನ್ನು ಸಶಕ್ತಗೊಳಿಸಬೇಕಿದೆ.

ಉದ್ಯೋಗದ ಹೊಸ ಸ್ವರೂಪಗಳಾಗಿ ಹೊರಹೊಮ್ಮಿರುವ ಗಿಗ್ ಆರ್ಥಿಕತೆಯ ಉದ್ಯೋಗಿಗಳ ಸೇವಾ ಶರತ್ತು, ವೇತನ, ಸಾಮಾಜಿಕ ಭದ್ರತೆಯ ಅಂಶಗಳು, ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಹೊರಗುತ್ತಿಗೆ ನೌಕರರು, ಸ್ಕೀಂಗಳಲ್ಲಿ ಕೆಲಸ ಮಾಡುತ್ತಿರುವ ಗೌರವಧನ ಆಧಾರಿತ ಸ್ಕೀಂ ನೌಕರರಾದ ಅಂಗನವಾಡಿ, ಬಿಸಿ ಊಟ, ಆಶಾ ಮುಂತಾದ ನೌಕರರ ಸೇವಾ ಭದ್ರತೆ, ವೇತನ ಸಾಮಾಜಿಕ ಸುರಕ್ಷತೆ ಪ್ರಶ್ನೆ ಬಜೆಟ್‌ಗಳ ಚರ್ಚೆಯ ಆಧಾರವಾಗದಿರುವುದು, ಸರ್ಕಾರಗಳ ಆದ್ಯತೆಯನ್ನು ತೋರುತ್ತದೆ.

ಗ್ರಾಮೀಣ ಪ್ರದೇಶ ಕೃಷಿ ಕೂಲಿಕಾರರ ಸೇವಾ ಸೌಲಭ್ಯಗಳ ಕುರಿತು ಯಾವುದೇ ಪ್ರಸ್ತಾಪಗಳು ಎಂದು ಸಹಾ ಬಜೆಟ್‌ಗಳಲ್ಲಿ ಇಣುಕಲು ಇಲ್ಲ.

ಸೇವಾ ವಲಯದ ಮಾಹಿತಿ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಪ್ರೇರಿತ ಸೇವೆಗಳು ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನಕ್ಕೆ ಇಡೀ ರಾಷ್ಟ್ರದಲ್ಲೆ ಅತಿ ಹೆಚ್ಚಿನ ಪ್ರಮಾಣದಲ್ಲಿ ರಾಜ್ಯದಲ್ಲಿದೆ. ಆದರೆ ಅದರ ಪೂರ್ಣ ಪ್ರಮಾಣದ ಲಾಭ ರಾಜ್ಯದ ಜನತೆಗೆ ಇಲ್ಲದಾಗಿದೆ. ರಾಜ್ಯದಲ್ಲಿ ಉನ್ನತ ಶಿಕ್ಷಣದ ದಾಖಲಾತಿಯ ಪ್ರಮಾಣ ರಾಷ್ಟ್ರೀಯ ಸರಾಸರಿಯಾದ ಶೇಕಡ 26.3 ಕ್ಕಿಂತ ಹೆಚ್ಚು ಶೇಕಡ 28.8 ರಷ್ಟಿದೆ. ಆದರೆ ಅದರ ನೆರೆಯ ದಕ್ಷಿಣ ಭಾರತದ ಇತರೆ ರಾಜ್ಯಗಳಲ್ಲಿ ದಾಖಲಾತಿ ಪ್ರಮಾಣ ಶೇಕಡ 32 ಇರುವ ಕಾರಣ ಸೇವಾ ವಲಯದ ಈ ವಿಭಾಗದಲ್ಲಿ ಇತರೆ ರಾಜ್ಯಗಳ ಬೌದ್ಧಿಕ ವಲಸೆ ನೌಕರರ ಪ್ರಮಾಣ ಹೆಚ್ಚಾಗಿದೆ ಎಂಬುದು ಗಮನಾರ್ಹ. ಆದ ಕಾರಣ ಉನ್ನತ ಶಿಕ್ಷಣದಲ್ಲಿನ ದಾಖಲಾತಿ ಪ್ರಮಾಣ ಹೆಚ್ಚಿಸುವ ಕ್ರಮವಾಗಬೇಕಿದೆ.

ಆಸ್ತಿ ನಗದೀಕರಣ ವಂಚಕ ಖಾಸಗೀಕರಣ:

ಕೇಂದ್ರ ಬಿಜೆಪಿ ಸರ್ಕಾರದ ರಾಷ್ಟ್ರೀಯ ನಗದೀಕರಣ ಕೊಳವೆ ಮಾರ್ಗಕ್ಕೆ ಅನುಗುಣವಾಗಿ ರಾಜ್ಯದಲ್ಲಿನ ಸಾರ್ವಜನಿಕ ಸಂಸ್ಥೆಗಳು ಮತ್ತು ಭೂಮಿಯನ್ನು ನಗದೀಕರಣದ ಹೆಸರಿನಲ್ಲಿ ಖಾಸಗಿಯವರಿಗೆ ವಹಿಸುವ ಕ್ರಮಕ್ಕೆ ಯೋಜಿಸಲಾಗಿದೆ.

ರಸ್ತೆ ಸಾರಿಗೆ ಸಂಸ್ಥೆಗಳು, ವಿದ್ಯುತ್ ಉತ್ಪಾದನೆ, ವಿತರಣೆ, ಸರಬರಾಜು ಕಂಪನಿಗಳು, ಕರ್ನಾಟಕ ಉಗ್ರಾಣ ಕಾರ್ಪೊರೇಷನ್, ಸೋಪ್, ಕಿಯೋನಿಕ್ಸ್, KSIC ಮುಂತಾದ 19 ಇತರೆ ಸಾರ್ವಜನಿಕ ಉದ್ದಿಮೆಗಳು KSFC ಮುಂತಾದ ಹಣಕಾಸು ಸಂಸ್ಥೆಗಳು ಸೇರಿ ಒಟ್ಟು ರೂ.22168 ಕೋಟಿ ರೂಗಳ 3321 ಆಸ್ತಿಗಳನ್ನು ನಗದೀಕರಣ ಮಾಡುವ ಯೊಜನೆಯನ್ನು ಆ ಮೂಲಕ ಅವುಗಳನ್ನು ಖಾಸಗಿಯವರಿಗೆ ವರ್ಗಾಯಿಸುವ ಗುರಿ ರಾಜ್ಯ ಬಿಜೆಪಿ ಸರ್ಕಾರದ್ದಾಗಿದೆ.

ಕೋವಿಡ್ ಲಾಕ್ಡೌನ್ ಮುಂತಾದ ಕಾರಣಗಳಿಂದ ಕುಸಿತ ಕಂಡಿರುವ ರಾಜ್ಯದ ಆರ್ಥಿಕತೆ ಪುನಶ್ಚೇತನಕ್ಕೆ ಜನತೆಯ ಕೈಯಲ್ಲಿನ ಕೊಳ್ಳುವ ಶಕ್ತಿಯನ್ನು ಹೆಚ್ಚಳ ಮಾಡುವುದು ಅಗತ್ಯ ಅನಿವಾರ್ಯವಾಗಿದೆ. ಅದಕ್ಕಾಗಿ

- ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಬೇಡಿಕೆಯನ್ನು ಪೂರೈಸಲು ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸದ ದಿನಗಳನ್ನು ವಾರ್ಷಿಕ 200 ದಿನಗಳಿಗೆ ಹೆಚ್ಚಿಸಲು ಕನಿಷ್ಟ ವೇತನವನ್ನು ರೂ.600 ಕ್ಕೆ ಹೆಚ್ಚಿಸಲು ಕ್ರಮಗಳಾಗಬೇಕಿದೆ. ಆ ಮೂಲಕ ನಗರಗಳ ಮೇಲಿನ ಒತ್ತಡವನ್ನು ವಲಸೆ ಕಡಿಮೆ ಮಾಡುವ ಮೂಲಕ ಸಾಧಿಸಬಹುದಿದೆ. ಅದೇ ರೀತಿ ನಗರ ಪ್ರದೇಶಕ್ಕೂ ಉದ್ಯೋಗ ಖಾತ್ರಿ ರೂಪಿಸಿ ಜಾರಿಗೊಳಿಸಬೇಕಿದೆ.
- ಕಾರ್ಮಿಕರ ಕೊಳ್ಳುವ ಶಕ್ತಿ ಹೆಚ್ಚಿಸಲು, ರಾಜ್ಯದ ಮೌಲ್ಯವರ್ಧನೆಯ ಒಟ್ಟಾರೆ ತಲಾ ಪಾಲು ರಾಜ್ಯ ಜನತೆಗೆ ಅಲ್ಪಪ್ರಮಾಣದಲ್ಲಿ ಆದರೂ ಲಭಿಸುವಂತೆ ಮಾಡಲು ಮಾಸಿಕ ಸಮಾನ ಕನಿಷ್ಟ ವೇತನ ರೂ.26,000/- ವನ್ನು ಅಕುಶಲ ಕಾರ್ಮಿಕರಿಗೆ ನಿಗದಿಪಡಿಸಬೇಕು.
- ಸಂಘ ಮಾನ್ಯ ಮಾಡಲು, ಗುತ್ತಿಗೆ ಮುಂತಾದ ಖಾಯಂಯೇತ್ತರರ ಖಾಯಂಗೆ ಶಾಸನ ರೂಪಿಸಬೇಕು.
- ಅಸಂಘಟಿತ ಕಾರ್ಮಿಕರಿಗೆ ಭವಿಷ್ಯನಿಧಿ ಯೋಜನೆ ರೂಪಿಸಿ ಜಾರಿಗೊಳಿಸಲು ಶಾಸನ ರೂಪಿಸಬೇಕು.
- ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗೆ ಕನಿಷ್ಟ ವಾರ್ಷಿಕ ರೂ.1000 ಕೋಟಿ ಅನುದಾನ ನೀಡಬೇಕು.
- ಸ್ಕೀಂ ನೌಕರರನ್ನು ಕನಿಷ್ಟ ವೇತನ ವ್ಯಾಪ್ತಿಗೆ ಒಳಪಡಿಸಬೇಕು. ಅವರನ್ನು ರಾಷ್ಟ್ರೀಯ ಕಾರ್ಮಿಕ ಸಮ್ಮೇಳನದ ಶಿಫಾರಸ್ಸಿನಂತೆ ಕಾರ್ಮಿಕರೆಂದು ಪರಿಗಣಿಸಬೇಕು.
- ರಾಜ್ಯದ ಬ್ಯಾಂಕ್‌ಗಳಲ್ಲಿನ ಠೇವಣಿ ಮತ್ತು ಉಳಿತಾಯಕ್ಕೆ ಅನುಗುಣವಾಗಿ ಅತಿ ಸಣ್ಣ, ಸಣ್ಣ, ಮಧ್ಯಮ ಕಾರ್ಖಾನೆಗಳಿಗೆ ಸಾಲ ಸೌಲಭ್ಯ ನೀಡಬೇಕು. ಬೆಲೆ ಏರಿಕೆ ನಿಯಂತ್ರಣಕ್ಕೆ ಕ್ರಮಗಳಾಗಬೇಕು.
- ಉಖಖಿ ಯಲ್ಲಿ ರಾಜ್ಯದ ಪಾಲು ಮತ್ತು ಪರಿಹಾರವನ್ನು ರಾಜ್ಯಕ್ಕೆ ನೀಡಬೇಕು.
- ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ನೋಂದಣಿ ಪ್ರಮಾಣ ಹೆಚ್ಚಿಸಲು ಕ್ರಮಗಳಾಗಬೇಕು. ಅದಕ್ಕೆ ಉನ್ನತ ಶಿಕ್ಷಣದ ವ್ಯಾಪಾರೀಕರಣ, ವಾಣಿಜ್ಯೀಕರಣಕ್ಕೆ ಕಡಿವಾಣ ಹಾಕಬೇಕು.
- ಆಸ್ತಿ ನಗದೀಕರಣ ಯೋಜನೆ ಕೈ ಬಿಟ್ಟು, ಸಾರ್ವಜನಿಕ ರಂಗವನ್ನು ಬಲಪಡಿಸಬೇಕು.
- ತಲಾ 10 ಕೆಜಿ ಉಚಿತ ಪಡಿತರ ವಿತರಣೆ ಮೂಲಕ ಬೆಲೆ ಏರಿಕೆ ನಿಯಂತ್ರಣಕ್ಕೆ ಕ್ರಮಗಳಾಗಬೇಕು.
- ಕಾರ್ಮಿಕ ಸಂಹಿತೆಗಳ ಜಾರಿಗೆ ರೂಪಿಸಿರುವ ನಿಯಮಾವಳಿಗಳನ್ನು ಜಾರಿಗೊಳಿಸಬಾರದು.
- ಆರ್ಥಿಕತೆಯ ತಕ್ಷಣದ ಪುನಶ್ಚೇತನಕ್ಕೆ ಅನುವುಗೊಳಿಸಲು ಆದಾಯ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಪ್ರತಿ ಕುಟುಂಬಕ್ಕೆ ಕನಿಷ್ಟ 6 ತಿಂಗಳು ರೂ. 10 ಸಾವಿರ ನೇರ ನಗದು ವರ್ಗಾವಣೆ ಮಾಡಬೇಕು.
- ಪೆಟ್ರೋಲಿಂ ಉತ್ಪನ್ನಗಳ ಮೇಲಿನ ತೆರಿಗೆಗಳನ್ನು ಕೂಡಲೇ ಕಡಿತ ಮಾಡಬೇಕು.
- ಸರ್ಕಾರದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು.

ಇಂತಹ ಅಂಶಗಳನ್ನು ಒಳಗೊಂಡ ಜನಪರ ಪರ್ಯಾಯ ಬಜೆಟ್ ಮೂಲಕ ಸಮೃದ್ಧ-ಸೌಹಾರ್ದ ಜನತೆಯ ನವ ಕರ್ನಾಟಕ ರೂಪಿಸುವ ನಿಟ್ಟಿನಲ್ಲಿ ಕ್ರಮಗಳಾಗಬೇಕು.

ಕುಕ್ಕುಟೋದ್ಯಮವನ್ನು ಕೃಷಿ ಎಂದು ಪರಿಗಣಿಸಿ



ಕುಕ್ಕುಟೋದ್ಯಮದಲ್ಲಿ ಸಣ್ಣ ಪ್ರಮಾಣದ ಕೋಳಿ ಸಾಕಣೆದಾರರು, ರೈತರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಹಾಗೂ ಕೋಳಿ ಸಾಕಾಣಿಕೆಯನ್ನು ಕೃಷಿ ಎಂದು ಘೋಷಿಸುವಂತೆ ರಾಜ್ಯ ಸರಕಾರದ ಗಮನ ಸೆಳೆಯುವುದಾಗಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಭರವಸೆ ನೀಡಿದ್ದಾರೆ.

ಶಾಸಕರ ಭವನದಲ್ಲಿಂದು ಕೋಳಿ ಸಾಕಣೆದಾರರ ಸಮಸ್ಯೆಗಳ ಕುರಿತಾದ ರಾಜ್ಯದ ಮಟ್ಟದ ದುಂಡುಮೇಜಿನ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು; 'ಗ್ರಾಮೀಣ ಪ್ರದೇಶದಲ್ಲಿ ಆರ್ಥಿಕ ಸಬಲೀಕರಣ ಹಾಗೂ ನಿರುದ್ಯೋಗವನ್ನು ಹತ್ತಿಕ್ಕುವ ಶಕ್ತಿಯುಳ್ಳ ಕೋಳಿ ಸಾಕಣೆಗೆ ಸರಕಾರ ಹೆಚ್ಚು ಪ್ರೋತ್ಸಾಹ ನೀಡಬೇಕಿದೆ ಎಂದರು.

ಸದ್ಯಕ್ಕೆ ಕುಕ್ಕುಟೋದ್ಯಮ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು, ನ್ಯಾಯಯುತ ಬೆಲೆಯಲ್ಲೂ ಸಾಕಣೆದಾರರಿಗೆ ಅನ್ಯಾಯವಾಗುತ್ತಿದೆ. ರೈತರು ಮತ್ತು ಕಂಪನಿಗಳ ನಡುವೆ ಆಗಿರುವ ಒಪ್ಪಂದದಂತೆ ಸಕಾಲಕ್ಕೆ ರೈತರಿಗೆ ಕೋಳಿ ಮರಿಗಳನ್ನು ನೀಡಬೇಕು, ಸರಕಾರ ನಿಗದಿ ಮಾಡಿರುವ ಕನಿಷ್ಠ ಸಾಕಣೆ ದರ ನೀಡುವುದು, ಕೋಳಿ ಸಾಕಣೆಯನ್ನು ಕೃಷಿ ಎಂದು ಸರಕಾರ ಘೋಷಣೆ ಮಾಡಬೇಕು, ರಾಜ್ಯದ ಕುಕ್ಕುಟ ಮಹಾಮಂಡಳಿಯನ್ನು ಕೆಎಂಎಫ್ ಮಾದರಿಯಲ್ಲಿ ಬಲಪಡಿಸುವುದು ಸೇರಿದಂತೆ ನಿಮ್ಮ ಹಲವಾರು ಬೇಡಿಕೆಗಳು ನ್ಯಾಯಯುತವಾಗಿವೆ. ಅವುಗಳ ಬಗ್ಗೆ ಸಂಬಂಧಪಟ್ಟ ಸಚಿವರ ಜತೆ ಮಾತನಾಡುವುದಾಗಿ ಕುಮಾರಸ್ವಾಮಿ ಅವರು ಸಭೆಯಲ್ಲಿ ಹೇಳಿದರು.

ಮಾಜಿ ಸಚಿವ, ಶಾಸಕ ರಮೇಶ್ ಕುಮಾರ್ ಮಾತನಾಡಿ, ರಾಜಕಾರಣಿಗಳಿಗೆ ಮರೆವು ಜಾಸ್ತಿ, ಸರಕಾರ ಕುಕ್ಕುಟೋದ್ಯಮವನ್ನು ನಿರ್ಲಕ್ಷಿಸುತ್ತಿದೆ. ನಮ್ಮ ಜಿಲ್ಲೆಯಲ್ಲಿ ಕೋಳಿ ಸಾಕಾಣಿಕೆದಾರರ ಜೊತೆ ನಿರಂತರ ಸಂಪರ್ಕದಲ್ಲಿದ್ದೇನೆ. ಅವರಿಗೆ ಸರಕಾರ ಸರಿಯಾಗಿ ಸ್ಪಂದಿಸುತ್ತಿಲ್ಲ. ಪ್ರೋತ್ಸಾಹಕ್ಕಾಗಿ ನೀಡಲಾಗುತ್ತಿದ್ದ ಬ್ಯಾಂಕ್ ಸಾಲಕ್ಕೂ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಕೋಟ್ಯಾಂತರ ರೂ ಮೋಸ ಮಾಡಿ ಬ್ಯಾಂಕುಗಳಿಗೆ ವಂಚಿಸದವರ ಮೇಲೆ ಸರಕಾರಕ್ಕೆ ನಂಬಿಕೆ ಇದೆ. ಕೇವಲ ಸಾವಿರಾರು ರೂ ಪಡೆದು ಪ್ರಮಾಣಿಕವಾಗಿ ಸಾಲ ಹಿಂದಿರುಗಿಸುವ ರೈತರ ಮೇಲೆ ಭರವಸೆ ಇಲ್ಲ ಇದು ಬದಲಾಗಬೇಕು ಎಂದರು. ಕುಕ್ಕುಟೋದ್ಯಮವನ್ನು ಕೃಷಿ ಎಂದು ಘೋಷಿಸುವಂತೆ ಸರಕಾರದ ಜೊತೆ ಮಾತನಾಡುತ್ತೇನೆ ಎಂದು ಭರವಸೆ ನೀಡಿದರು.

ಸಭೆಯಲ್ಲಿ ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಶಾಸಕಿ ರೂಪಾ ಶಶಿಧರ್, ಶಾಸಕ ನಂಜೇಗೌಡ, ಕುಕ್ಕುಟ ಮಹಾಮಂಡಳಿ ಅಧ್ಯಕ್ಷ ಕಾಂತರಾಜ್, ರಾಜ್ಯ ಕೋಳಿ ಸಾಕಣೆದಾರ ರೈತರ ಕ್ಷೇಮಾಭಿವೃದ್ಧಿ ಸಂಘದ ಗೌರವಾಧ್ಯಕ್ಷ ಜಿ.ಸಿ.ಬಯ್ಯಾರೆಡ್ಡಿ, ಅಧ್ಯಕ್ಷ ಜೆ. ಸಿ.ಮಂಜುನಾಥ್ ಪ್ರಧಾನ ಕಾರ್ಯದರ್ಶಿ ಸಿ.ಎಂ. ರಮೇಶ್ ಮುಂತಾದವರು ಮಾತನಾಡಿದರು.





ಮಾನವ ಸಮಾಜದ ಬದಲಾವಣೆಗೆ ಅಪಾರ ಕೊಡುಗೆ ನೀಡಿದ್ದೇ ಕಾರ್ಲ್ ಮಾರ್ಕ್ಸ್

–ಡಾ. ಕೃಷ್ಣಪ್ಪ ಕೊಂಚಾಡಿ

ಮಾನವ ಸಮಾಜವು ತನ್ನ ಉಗಮದ ಪ್ರಾರಂಭದಿಂದಲೇ ಸಂಘರ್ಷದ ಮೂಲಕ ವರ್ಗ ಹೋರಾಟದ ಇತಿಹಾಸವನ್ನು ಹೊಂದಿದೆ. ಬಂಡವಾಳಶಾಹಿ ವ್ಯವಸ್ಥೆಯೇ ಅಂತಿಮವೆಂದು ಬೀಗುತ್ತಿದ್ದ ಜಾಗತಿಕ ಬಂಡವಾಳಶಾಹಿಗಳಿಗೆ ಸಿಂಹಸ್ವಪ್ನರಾಗಿ ಕಾಡಿ ಬಂಡವಾಳಶಾಹಿಯ ಗರ್ಭದಿಂದಲೇ ಸಮಾಜವಾದಿ ವ್ಯವಸ್ಥೆ ಉಗಮವಾಗಲಿದೆ ಎಂದು ತನ್ನ ವೈಜ್ಞಾನಿಕ ಚಿಂತನೆಗಳ ಮೂಲಕ ಕಾರ್ಲ್ ಮಾರ್ಕ್ಸ್ ಸಾಬೀತುಪಡಿಸಿದರು. ಕ್ರಾಂತಿಕಾರಿ ಗುಣ ಹೊಂದಿದ ಕಾರ್ಮಿಕ ವರ್ಗದಿಂದ ಮಾತ್ರವೇ ವರ್ಗ ರಹಿತ ಸಮಾಜದ ನಿರ್ಮಾಣ ಸಾಧ್ಯವೆಂದು ತನ್ನ ಪ್ರಖರ ಪಾಂಡಿತ್ಯದ ಮೂಲಕ ಜಗತ್ತಿಗೆ ಸಾರಿದರು. ಹೀಗೆ ಮಾನವ ಸಮಾಜದ ಬದಲಾವಣೆಗೆ ಕಾರ್ಲ್ ಮಾರ್ಕ್ಸ್ ಅಪಾರ ಕೊಡುಗೆ ನೀಡಿದ್ದರು ಎಂದು ಡಾ. ಕೃಷ್ಣಪ್ಪ ಕೊಂಚಾಡಿಯವರು ಹೇಳಿದರು.

ಅವರು ಕಾರ್ಲ್ ಮಾರ್ಕ್ಸ್ ರವರ 139ನೇ ಸಂಸ್ಮರಣಾ ದಿನಾಚರಣೆಯ ಅಂಗವಾಗಿ ಸಹಸ್ರಮಾನದ ಮಹಾನ್ ಚಿಂತಕ ಕಾರ್ಲ್ ಮಾರ್ಕ್ಸ್ ಎಂಬ ವಿಷಯದಲ್ಲಿ ಮಂಗಳೂರಿನಲ್ಲಿ ಜರುಗಿದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಈ ಮಾತುಗಳನ್ನು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ ಡಿವೈಎಫ್ಐ ಜಿಲ್ಲಾ ನಾಯಕರಾದ ಮನೋಜ್ ವಾಮಂಜೂರುರವರು ಮಾತನಾಡುತ್ತಾ, 'ಜಗತ್ತಿನ ಹಲವಾರು ತತ್ವಜ್ಞಾನಿಗಳ ಪೈಕಿ ಕಾರ್ಲ್ ಮಾರ್ಕ್ಸ್ ರವರಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಜಗತ್ತಿನ ಪ್ರತಿಯೊಂದು ಆಗುಹೋಗುಗಳ ಬಗ್ಗೆ ಮಾರ್ಕ್ಸ್ ರವರು ವೈಜ್ಞಾನಿಕ ನೆಲೆಯಲ್ಲಿ ತನ್ನದೇ ಆದ ಅಭಿಪ್ರಾಯಗಳನ್ನು ಹೊಂದಿದ್ದರು.ಈ ಹಿನ್ನೆಲೆಯಲ್ಲಿ ಕಾರ್ಲ್ ಮಾರ್ಕ್ಸ್ ಇಂದಿಗೂ ಪ್ರಸ್ತುತವಾಗಿದ್ದಾರೆ' ಎಂದು ಹೇಳಿದರು.

ಪ್ರಾರಂಭದಲ್ಲಿ ಸುನಿಲ್ ಕುಮಾರ್ ಬಜಾಲ್ ರವರು ಸ್ವಾಗತಿಸಿದರೆ ಕೊನೆಯಲ್ಲಿ ಭಾರತಿ ಬೋಳಾರರವರು ವಂದಿಸಿದರು.

ಬೆಂಗಳೂರು ಚಿತ್ರೋತ್ಸವದಲ್ಲಿ ನಾನು ನೋಡಿದ ರಾಜಕೀಯ ಫಿಲಂಗಳು–2.... ಪುಟ 16 ರಿಂದ

ಅಮಾನವೀಯ ಶ್ರೇಣಿಕೃತ ವ್ಯವಸ್ಥೆ, ಅದನ್ನು ಕಾಪಿಡುವ 'ಶಿಸ್ತು', 'ತಪ್ಪು', 'ಶಿಕ್ಷೆ'ಗಳ ಮಂತ್ರದಂಡ ಇವೆಲ್ಲ, ಟರ್ಕಿಯಲ್ಲಿ (ಮಾತ್ರವಲ್ಲ ಜಗತ್ತಿನ ಹೆಚ್ಚಿನ ದೇಶ/ಸಮಾಜಗಳಲ್ಲಿ) ಇರುವ ಕ್ರೂರ ಶೋಷಣೆ–ದಮನ ಚಕ್ರವಿರುವ ಸಮಾಜ ವ್ಯವಸ್ಥೆಯ ಮೈಕ್ರೋ–ರೂಪವೇ ಎಂದು ಫಿಲಂ ಮೆಲುದನಿಯಲ್ಲಿ ಹೇಳುವಂತಿದೆ. ಮಾತ್ರವಲ್ಲ, ಸ್ಕೂಲ್ ನ ವ್ಯವಸ್ಥೆ ಸಮಾಜದ ಇಂತಹ ವ್ಯವಸ್ಥೆಯನ್ನು ಸಹಜವೆಂದು ಕಣ್ಣು–ಬಾಯಿ ಮುಚ್ಚಿ ಒಪ್ಪಿಕೊಳ್ಳಲು ಭವಿಷ್ಯದ ಪ್ರಜೆಗಳನ್ನು ತಯಾರು ಮಾಡುವ ಮೈಕ್ರೋ ರೂಪ. ಈ ಶೋಷಕ ವ್ಯವಸ್ಥೆಗಳು. ಒಂದು ಇನ್ನೊಂದನ್ನು ಕಾಪಿಡುತ್ತದೆಯೆಂದೂ, ಭಾರೀ ಹಿಮಪಾತದಿಂದ ಸ್ಕೂಲ್ ಕ್ಯಾಂಪಸ್ ಹೊರಜಗತ್ತಿನೊಂದಿಗೆ ಸಂಪರ್ಕ ಕಡಿಯುವುದು ಈ ಕ್ರೂರ ವ್ಯವಸ್ಥೆಯಿಂದ ಮುಕ್ತಿ ಸಾಧ್ಯವೇ ಎಂದೂ "ಬ್ರದರ್ಸ್ ಕೀಪರ್" ಧ್ವನಿಸುತ್ತದೆ.

"ಪ್ಯಾರಲಲ್ ಮದರ್ಸ್'

"ಪ್ಯಾರಲಲ್ ಮದರ್ಸ್' ಪ್ರಸಿದ್ಧ ಸ್ಪಾನಿಷ್ ನಿರ್ದೇಶಕ ಪೆಡ್ರೊ ಅಲ್ಮದೊವರ್ ಅವರ ಆಸ್ಕರ್ ಪ್ರಶಸ್ತಿ ವಿಜೇತ ಚಿತ್ರ. ಇಬ್ಬರು ತುಂಬು ಗರ್ಭಿಣಿಯರು ಆಸ್ಪತ್ರೆಯಲ್ಲಿ ಒಂದೇ ಕೋಣೆಯಲ್ಲಿ ಹೆರಿಗೆಯ ಕ್ಷಣವನ್ನು ಎದುರು ನೋಡುತ್ತಿರುತ್ತಾರೆ. ಇಬ್ಬರೂ ಅವಿವಾಹಿತರಿದ್ದು ಆಕಸ್ಮಿಕವಾಗಿ ಗರ್ಭಿಣಿಯಾದವರು. ಒಬ್ಬಳು (ಜಾನಿಸ್) ಮಧ್ಯವಯಸ್ಸಿನವಳು. ಅವಳಿಗೆ ವಿಷಾದವಿಲ್ಲ. ಖುಷಿಯಿಂದ ಮಗುವಿನ ಬರವಿಗೆ ಕಾಯುತ್ತಾಳೆ. ಇನ್ನೊಬ್ಬಳು (ಅನಾ) ಹದಿಹರೆಯದವಳು.ಆಘಾತಕ್ಕೊಳಗಾಗಿದ್ದಾಳೆ, ಭಯಭೀತಳಾಗಿದ್ದಾಳೆ, ಪಶ್ಚಾತ್ತಾಪ ಪಡುತ್ತಿದ್ದಾಳೆ. ಜಾನಿಸ್ ಅನಾ ಳನ್ನು ಸಮಾಧಾನಿಸಲು ಹುರಿದುಂಬಿಸಲು ಪ್ರಯತ್ನಿಸುತ್ತಾಳೆ. ಇಬ್ಬರ ನಡುವೆ ನಿಕಟ ಸಂಬಂಧ ಏರ್ಪಡುತ್ತದೆ. ಫಿಲಂ ನ ಶೀರ್ಷಿಕೆಗೆ ವ್ಯತಿರಿಕ್ತವಾಗಿ ಅವರ ಜೀವನರೇಖೆಗಳು ಸಮಾನಾಂತರವಾಗಿ ಹೋಗದೆ ಮುಂದೆನೂ ಆಗಾಗ ಸಂಧಿಸುತ್ತಿರುತ್ತವೆ. ಅವರ ಸಂಬಂಧ ಬೆಳೆಯುತ್ತಿರುತ್ತದೆ, ಸಂಕೀರ್ಣವಾಗುತ್ತಾ ಹೋಗುತ್ತದೆ. ಮಕ್ಕಳ ಅದಲು–ಬದಲು ಇತ್ಯಾದಿ ಬಾಲಿವುಡ್ ನ ಸರಣಿ ಆಕಸ್ಮಿಕಗಳ ಮೆಲೊಡ್ರಾಮದಂತೆ ಕಾಣುವ ಕಥಾ ಹಂದರದಲ್ಲಿ, ಹಲವು ಮಹಿಳೆಯರ, ಕೆಲವು ಪುರುಷರ ಹಲವು ಪರಸ್ಪರ ಸಂಧಿಸುವ ಕಥನಗಳು ಇವೆ.

ಸ್ಪೈನಿನಲ್ಲಿ ಹಲವು ದಶಕಗಳ ಕಾಲ ಫ್ಯಾಸಿಸ್ಟರಿಂದ ವಿರೋಧಿಗಳ ಬೇಟೆ–ನರಮೇಧ, ನರಮೇಧಕ್ಕೊಳಗಾದ ತಮ್ಮ ತಾತ–ಮುತ್ತಾತರ ಶವ ಹುಡುಕಿಕೊಡಿ ಅಂತ ಜಾನಿಸ್ ನಂತೆ ನ್ಯಾಯ ಕೇಳುವವರರು, ಸಾಮೂಹಿಕ ಉತ್ಖನನ ಮಾಡಿ ಇಂತಹ ಶವ ಹುಡುಕುವ ಕೆಲಸಕ್ಕೆ ನೇಮಿಸಲಾದ ಜಾನಿಸ್ ಗೆಳೆಯ, ಗತವನ್ನು ಯಾಕೆ ಕೆದಕುವುದು ಎನ್ನುವ ಅನ್ನಾ, ಅನ್ನಾ ತಾಯಿ – ಹೀಗೆ ಹಲವು ಪದರಗಳನ್ನು ಆಯಾಮಗಳನ್ನು ಇಲ್ಲಿ ಒಟ್ಟಿಗೆ ಹೆಣೆಯಲಾಗಿದೆ. ಗಂಡ–ಮಗಳು ಇಬ್ಬರಿಂದಲೂ ದೂರವಾಗಬೇಕಾಗಿ, ಕೊನೆಗೂ ಸಫಲ ನಟಿಯಾಗುವ ಅನ್ನಾಳ ತಾಯಿ, ಜಾನಿಸ್ ನ ಮ್ಯಾನೇಜರ್, ಅನ್ನಾಳ ಹಲವು ಸೋದರಿ ಸಂಬಂಧಿಗಳು – ಹೀಗೆ ಕಥನದುದ್ದಕ್ಕೂ ಕಂಡು ಬರುವ ಒಂಟಿ ತಾಯಂದಿರಿಗೂ ಫ್ಯಾಸಿಸ್ಟ್ ನರಮೇಧಕ್ಕೂ ಇರುವ ಸಂಬಂಧವನ್ನೂ ಫಿಲಂ ಸೂಚಿಸುತ್ತದೆ.

ಒಂದು ಕಡೆ ಫಿಲಂ ಮಹಿಳೆಯರ ಪ್ರೇಮ, ಕಾಮ, ಒಂಟಿ ತಾಯಂದಿರ ಧೈರ್ಯ–ಬವಣೆಗಳ ಹಾಗೂ ತಾಯಿ–ಮಕ್ಕಳ ಸಂಬಂಧ, ಹೆತ್ತವರು ಮಾತ್ರ ಮಕ್ಕಳ ಪಾಲಕರಾಗಬೇಕೆ ಎಂಬ ಪ್ರಶ್ನೆಗಳ ವೈಯಕ್ತಿಕ ನೆಲೆಗಳನ್ನು ಶೋಧಿಸುತ್ತದೆ. ಸ್ಪೈನಿನ ಐದು ದಶಕಗಳ ಫ್ಯಾಸಿಸ್ಟ್ ಕ್ರೌರ್ಯದ ಚರಿತ್ರೆ ವರ್ತಮಾನಕ್ಕೂ ಚಾಚಿಕೊಂಡಿರುವ ರಾಜಕೀಯ ಆಯಾಮವನ್ನು, ವೈಯಕ್ತಿಕ ಆಯಾಮವನ್ನು, ಸ್ಪೈನಿನ ಗತ, ವರ್ತಮಾನ, ಭವಿಷ್ಯಗಳನ್ನು ಒಂದೇ ಕಥನದಲ್ಲಿ ಹಿಂದೆ ಮುಂದೆ ಹೋಗುತ್ತಾ ಆರಾಮಾಗಿ ಫಿಲಂ ಹೆಣೆಯುತ್ತದೆ. ಗತಕಾಲದ ಅನ್ಯಾಯಗಳಿಗೆ ನ್ಯಾಯಕೊಡಿಸದೆ, ವರ್ತಮಾನವಾಗಲಿ, ಭವಿಷ್ಯವಾಗಲಿ ಶಾಂತಿಯುತವಾಗಲಿ ನ್ಯಾಯಯುತವಾಗಲಿ ಇರುವುದು ಸಾಧ್ಯವಿಲ್ಲವೆಂದು ಧ್ವನಿಸುತ್ತದೆ. ಇವೆಲ್ಲವನ್ನು ಮಕ್ಕಳ ಅದಲು–ಬದಲು ಇತ್ಯಾದಿ ಸರಣಿ ಆಕಸ್ಮಿಕಗಳ ಮೇಲೆ ಆಧರಿಸಿದ ಹೆಚ್ಚು ಕಡಿಮೆ ಕಾಲ್ಪನಿಕ ಜಗತ್ತಿನ ಮೇಲೆ ಆಧರಿಸಿ ಹೆಣೆಯಲಾಗಿದೆಯೆಂಬುದು ವಿಚಿತ್ರವೆನಿಸಬಹುದು. ಮತ್ತೆ ಮತ್ತೆ ಸಂಧಿಸುವ ಜೀವನರೇಖೆಯ ಮಹಿಳೆಯರನ್ನು 'ಸಮಾನಾಂತರ ತಾಯಂದಿರು' ಎಂದು ಕರೆಯುವಂತೆ, ನಮ್ಮ ಸಂಕೀರ್ಣ ಜಗತ್ತನ್ನು ಅರ್ಥ ಮಾಡಿಕೊಳ್ಳಲು 'ಸಮಾನಾಂತರ' ಜಗತ್ತುಗಳನ್ನು ಕಟ್ಟಿಕೊಳ್ಳಬೇಕೇನೋ ಎಂದು ಪೆಡ್ರೊ ಅಲ್ಮದೊವರ್ ಸೂಚಿಸುವಂತಿದೆ.

JANASHAKTHI KANNADA VARA PATRIKE MARCH 21-27, 2022 Price: Rs. 10/- Date of Publication: 18 MARCH 2022 RNI No. KARKAN /2006/17926 Posted on 21-03-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ನಾನು ನೋಡಿದ 12 ಫಿಲಂಗಳಲ್ಲಿ 6 ರಾಜಕೀಯ ಫಿಲಂಗಳು ಎನ್ನಬಹುದು. ನಾನು ನೋಡಿದ 6 ರಾಜಕೀಯ ಫಿಲಂಗಳ – "ದೆರ್ ಸಿ ನೋ ಇವಿಲ್", "ಅಹದ್' ಸ್ ನೀ", "ಬ್ರದರ್ಸ್ ಕೀಪರ್", "ಪ್ಯಾರಲಲ್ ಮದರ್ಸ್", "ಬ್ಯಾಡ್ ಲಕ್ ಬ್ಯಾಂಗಿಂಗ್", "ಮೆಮೊರಿಯ" – ಕುರಿತು ಕೆಲವು ಮಾತುಗಳು ಅದನ್ನು ಸ್ಪಷ್ಟ ಪಡಿಸಬಹುದು. "ದೆರ್ ಸಿ ನೋ ಇವಿಲ್" ಕುರಿತು ಭಾಗ–1ರಲ್ಲಿ ವಿವರವಾಗಿ ನಿರೂಪಿಸಲಾಗಿದೆ. ಈ ಎರಡನೆಯ ಭಾಗದಲ್ಲಿ "ಅಹದ್' ಸ್ ನೀ", "ಬ್ರದರ್ಸ್ ಕೀಪರ್" ಮತ್ತು "ಪ್ಯಾರಲಲ್ ಮದರ್ಸ್" ಕುರಿತು ಕೆಲವು ಅನಿಸಿಕೆಗಳು.

ಬೆಂಗಳೂರು ಚಿತ್ರೋತ್ಸವದಲ್ಲಿ ನಾನು ನೋಡಿದ ರಾಜಕೀಯ ಫಿಲಂಗಳು – 2

ವಸಂತರಾಜ ಎನ್.ಕೆ.



"ಅಹದ್' ಸ್ ನೀ' (ಅಹದ್ ಳ ಮಂಡಿ)

ಇಸ್ರೇಲಿ ನಿರ್ದೇಶಕ ನದವ್ ಲಪಿದ್ ಅವರ "ಅಹದ್ ಸ್ ನೀ' (ಅಹದ್ ಳ ಮಂಡಿ) ಸಹ ಪ್ರಭುತ್ವ ದಮನದ ಕುರಿತ ಫಿಲಂ. ಪ್ಯಾಲೆಸ್ಟೈನಿಯರ ಪ್ರಾಥಮಿಕ ಮಾನವ ಹಕ್ಕುಗಳ ದಮನ ಮತ್ತು ಅದನ್ನು ಮುಚ್ಚಿಡಲು ಎಲ್ಲರ ಅಭಿವ್ಯಕ್ತಿ ಸ್ವಾತಂತ್ರ್ಯದ ದಮನ ಮಾಡುವ ಇಸ್ರೇಲಿ ಪ್ರಭುತ್ವದ ಕ್ರೌರ್ಯವನ್ನು ಈ ಫಿಲಂ ಕಣ್ಣಿಗೆ ರಾಚುವಂತೆ 'ಆಕ್ರಮಣಕಾರಿಯಾಗಿ' ಹೇಳುತ್ತದೆ. ಸುಮಾರು ನಲವತ್ತರ ವಯಸ್ಸಿನ ಫಿಲಂ ನಿರ್ದೇಶಕನೊಬ್ಬ ತನ್ನ ಫಿಲಂ ನ್ನು ಪ್ರದರ್ಶಿಸಿ ಸಂಸ್ಕೃತಿ ಇಲಾಖೆಗೆ ಸಲ್ಲಿಸಲು ಬಹುದೂರದಿಂದ ಬಂದಿದ್ದಾನೆ. ಫಿಲಂ ಪ್ರದರ್ಶನದ ಆಹ್ವಾನ ಬಂದಾಗ ಆತ ಹೊಸ ಫಿಲಂನ ತಯಾರಿಯಲ್ಲಿ ಇರುತ್ತಾನೆ. ಆ ಫಿಲಂ 2018ರಲ್ಲಿ ಅಹದ್ ತಮಿಮಿ ಎಂಬ ಹದಿಹರೆಯದ ಪ್ಯಾಲೆಸ್ಟೈನಿ ಹುಡುಗಿಯು ದೌರ್ಜನ್ಯಗಳಿಗೆ ಪ್ರತಿಭಟಿಸಿ ಇಸ್ರೇಲಿ ಸೈನಿಕನ ಕೆನ್ನೆಗೆ ಬಾರಿಸಿದ ವಾಸ್ತವ ಘಟನೆಯ ಕುರಿತಾಗಿರುತ್ತದೆ. ಈ ಘಟನೆಯ ವಿಡಿಯೊ ಜಾಗತಿಕವಾಗಿ ವೈರಲ್ ಆಗಿತ್ತು. ಇದರಿಂದ ಕೆಂಡಾಮಂಡಲವಾದ ಇಸ್ರೇಲಿ ಸಂಸದನೊಬ್ಬ 'ಅಹದ್ ಳ ಮಂಡಿಗಾದರೂ ಗುಂಡು ಹೊಡೆದು ಎಂದೂ ನಡೆಯದಂತೆ ಮಾಡಬೇಕಿತ್ತು' ಎಂಬ ಹೇಳಿಕೆಯಿಂದಲೇ ಈ ಫಿಲಂ ನ ಶೀರ್ಷಿಕೆ ಬಂದಿದೆಯೆಂದು ಗಮನಿಸಬಹುದು. ಹಲವು ತಿಂಗಳುಗಳ ಕಾಲ ಜೈಲುವಾಸ ಅನುಭವಿಸುವ ಅಹದ್, ಇಸ್ರೇಲಿ ಮಿಲಿಟರಿಯ ಅತಿರೇಕಗಳಿಂದ ಆಕ್ರೋಶಭರಿತರಾದ ಸಾವಿರಾರು ಹದಿಹರೆಯದ ಪ್ಯಾಲೆಸ್ಟೈನಿ ಮಕ್ಕಳ ಪ್ರತಿರೋಧದ ಪ್ರತೀಕವಾಗಿರುತ್ತಾಳೆ.

ಫಿಲಂ ಪ್ರದರ್ಶನ ಆಗುತ್ತಿದ್ದಂತೆ ಹೊರಬಂದು ಸಂಸ್ಕೃತಿ ಇಲಾಖೆಯ ಮಹಿಳಾ ಅಧಿಕಾರಿಯ ಜತೆ ನಿರ್ದೇಶಕ ನಡೆಸುವ ಮಾತುಕತೆಯೇ ಫಿಲಂ ನ ದೊಡ್ಡ ಭಾಗವಾಗಿದೆ. ಫಿಲಂ ನಿರ್ಮಾಣದ ಪ್ರಕ್ರಿಯೆಯ, ಇಸ್ರೇಲಿ ಪ್ರಭುತ್ವದಿಂದ ಫಿಲಂ ಗಳ ಸೆನ್ಸಾರ್ ಮತ್ತು ಕಲಾವಿದರ ಅಭಿವ್ಯಕ್ತಿ ಸ್ವಾತಂತ್ರ್ಯದ ದಮನದ, ಕಡ್ಡಾಯ ಮಿಲಿಟರಿ ಸೇವೆಯ ಅಸಹ್ಯ ಕ್ರೂರ ಅನುಭವಗಳ, ಜನರ ಮನಸ್ಸಿನ ಮಿಲಿಟರೀಕರಣದ, ಇಸ್ರೇಲಿ ರಾಷ್ಟ್ರವಾದದ ಟೊಳ್ಳುಗಳ – ಕುರಿತು ಆಕ್ರೋಶಭರಿತವಾದ ಈ ಸಂವಾದದ ಮೂಲಕವೇ ಫಿಲಂ ಹೇಳಬೇಕಾದ್ದನ್ನು ಬಹುಪಾಲು ಹೇಳುತ್ತದೆ. ಫಿಲಂ ಕುರಿತು ಪ್ರದರ್ಶನದ ನಂತರ ಮಾತನಾಡುವಾಗ ಫಿಲಂ ನಿರ್ದೇಶಕ ಯಾವ ವಿಷಯದ ಕುರಿತು ಮಾತನಾಡಬಹುದು, ಯಾವ ವಿಷಯಗಳ ಕುರಿತು ಮಾತನಾಡುವಂತಿಲ್ಲ ಎಂಬ ಆತನ ಆಕ್ರೋಶಕ್ಕೆ ಕಾರಣವಾದ ಸಂಸ್ಕೃತಿ ಇಲಾಖೆಗೆ ಕೊಡಬೇಕಾದ ಫಾರಂ ಕುರಿತು ಅವನ ಪ್ರತಿಕ್ರಿಯೆಯೇ ಈ ಸಂವಾದದ ಚರಮಬಿಂದು.

ಫಿಲಂ ಕುರಿತು ಮಾತನಾಡುವಾಗ ಸಂಸ್ಕೃತಿ ಇಲಾಖೆಯ ನಿರ್ದೇಶನಗಳನ್ನು ಪಾಲಿಸಿದರೂ, ಆತ ಸಚಿವರಿಂದ ಅಧಿಕಾರಿಯ ವರೆಗಿನ ಸಂಸ್ಕೃತಿ ಇಲಾಖೆಯ ಅಭಿವ್ಯಕ್ತಿ ಸ್ವಾತಂತ್ರ್ಯದ ದಮನದ ಹೊಲಸು ವ್ಯವಸ್ಥೆಯನ್ನು ಬಯಲು ಮಾಡದಿರಲಾರ. ಈ ಕುರಿತು ಖಾಸಗಿ ಮಾತುಕತೆಯಲ್ಲಿ ಅಧಿಕಾರಿಯ ಬಾಯಿಂದ ಹೊರಡಿಸಿದ ಮಾತುಗಳ ರೆಕಾರ್ಡಿಂಗ್ ಬಳಸುವ ಆಯ್ಕೆಯನ್ನು ಆತ ಮಾಡುತ್ತಾನೆ. ಆತನ ಅಭಿಪ್ರಾಯ, ಕಲಾಭಿವ್ಯಕ್ತಿ ಗಳ ಕುರಿತು ಸಹನಾಭೂತಿ ಮತ್ತು ಮೆಚ್ಚುಗೆಯಿರುವ ಆಕೆಗೆ ಅಪಾಯಕಾರಿಯಾಗಬಹುದಾದ ಈ ಆಯ್ಕೆ 'ನೈತಿಕ'ವೆನಿಸದಿದ್ದರೂ ಅವನಿಗೆ ಸಂಸ್ಕೃತಿ ಇಲಾಖೆಯನ್ನು ಬಯಲು ಮಾಡುವುದು ಆದ್ಯತೆಯದ್ದಾಗಿರುತ್ತದೆ.

ಕಲಾಭಿವ್ಯಕ್ತಿಯ ಸ್ವಾತಂತ್ರ್ಯ ಮತ್ತು ತನ್ನ ತಾಯಿಯ ಭೌತಿಕ ಅವಸಾನಗಳ ವಿರುದ್ಧ ಆತನ ವಿಫಲ ಹೋರಾಟದ ಹತಾಶೆ ಇಡೀ ಫಿಲಂನ್ನು ಆವರಿಸಿಕೊಂಡಿದೆ. ಇಂದಿನ ಇಸ್ರೇಲಿನ (ಜಾಗತಿಕವಾಗಿಯೂ ಬಹುತೇಕ ಸಾಮಾನ್ಯೀಕರಿಸ ಬಹುದಾದ) ಪ್ರಭುತ್ವದ ಸಾಂಸ್ಕೃತಿಕ ಮತ್ತು ರಾಜಕೀಯ ದಮನ ಮತ್ತು ಅಪಪ್ರಚಾರ ಗಳಿಗೆ ಪ್ರತಿರೋಧ ಒಡ್ಡಬೇಕಾದ ನೈತಿಕ ಜವಾಬ್ದಾರಿಗೆ ಕಲಾವಿದರು ಸಿದ್ಧರಿದ್ದಾರೆಯೆ ಎಂಬ ಪ್ರಶ್ನೆಯನ್ನು ಪ್ರಬಲವಾಗಿ ಈ ಫಿಲಂ ಎತ್ತುತ್ತದೆ. ಹಿಂಸಾಚಾರ, ಅಧಿಕಾರ, ಫ್ಯಾಸಿಸಂ, ಸಿನೇಮಾ ಒಂದು ಕಡೆ; ಇನ್ನೊಂದು ಕಡೆ ಬಲಿಪಶುಗಳು, ದಮನಕಾರರು ಮತ್ತು ನೋಡುಗರ ನಡುವಿನ ನಿಕಟ ಸಂಬಂಧಗಳ ಕುರಿತು, ಇಸ್ರೇಲಿನ ಸನ್ನಿವೇಶದಲ್ಲೂ ಜಾಗತಿಕವಾಗಿಯೂ ಸಂಕೀರ್ಣ ನಿರೂಪಣೆಯನ್ನು 'ಅಹದ್ ಳ ಮಂಡಿ' ನೀಡುತ್ತದೆ.

"ಬ್ರದರ್ಸ್ ಕೀಪರ್"

ಟರ್ಕಿಯ ಒಂದು ಹುಡುಗರ ಬೋರ್ಡಿಂಗ್ ಸ್ಕೂಲ್ ನ ಕ್ರೂರ ವ್ಯವಸ್ಥೆಯ ಅನಾವರಣದ ಕಥನವನ್ನು ಫೆರಿಟ್ ಕರಹನ್ ಅವರ "ಬ್ರದರ್ಸ್ ಕೀಪರ್" ಕಟ್ಟಿಕೊಡುತ್ತದೆ. ಟರ್ಕಿಯ ಹಿಮಾವೃತ್ತ ದುರ್ಗಮ ಪ್ರದೇಶದಲ್ಲಿ ಬಡ ಅಲ್ಪಸಂಖ್ಯಾತ ಕುರ್ದಿಶ್ ಹುಡುಗರ ಬೋರ್ಡಿಂಗ್ ಸ್ಕೂಲ್. ಅಲ್ಲಿ ಓದುತ್ತಿರುವ ಯೂಸುಫ್ ಮತ್ತು ಮೆಮೊ ಎಂಬ ರೂಂಮೇಟುಗಳೂ ಆತ್ಮೀಯ ಸ್ನೇಹಿತರೂ ಆದ ಇಬ್ಬರು ಹುಡುಗರ ಬವಣೆಗಳ ಸುತ್ತ ಕಥಾಹಂದರವನ್ನು ಹೆಣೆಯಲಾಗಿದೆ. ಮೆಮೊ ನಿಗೂಢವಾದ ಗಂಭೀರ ಅನಾರೋಗ್ಯಕ್ಕೆ ಗುರಿಯಾಗುತ್ತಾನೆ. ಅವನಿಗೆ ವೈದ್ಯಕೀಯ ಚಿಕಿತ್ಸೆ ಒದಗಿಸಲು ಯೂಸುಫ್ ಹೊರಟಾಗ ಸ್ಕೂಲಿನ ದಮನಕಾರಿ ಅಧಿಕಾರಶಾಹಿ ವ್ಯವಸ್ಥೆಯ ಹುಳುಕುಗಳು ನಿಧಾನವಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಮೆಮೊ ನ ಅನಾರೋಗ್ಯದ ಗಂಭಿರತೆಯನ್ನು ನಿರ್ಲಕ್ಷಿಸಿ, ಎಲ್ಲದಕ್ಕೂ 'ಶಿಸ್ತು', 'ತಪ್ಪು', 'ಶಿಕ್ಷೆ'ಗಳ ಸಮಾನ ಮಂತ್ರದಂಡವನ್ನು ಬಳಸುತ್ತಿರುವುದರಲ್ಲೇ ಮಗ್ನರಾಗಿರುವಾಗ, ಮೆಮೊ ನ ಪರಿಸ್ಥಿತಿ ಹದಗೆಡುತ್ತದೆ. ಅವನನ್ನು ಆಸ್ಪತ್ರೆಗೆ ಸೇರಿಸಲು ನಿರ್ಧರಿಸುವ ಹೊತ್ತಿಗೆ ಭಾರೀ ಹಿಮಪಾತದಿಂದ ಸ್ಕೂಲ್ ಕ್ಯಾಂಪಸ್ ಹೊರಜಗತ್ತಿನೊಂದಿಗೆ ಸಂಪರ್ಕ ಕಡಿದಿರುತ್ತದೆ. ಸಮಯ ಉರುಳಿದಂತೆ ಹತಾಶರಾಗಿ ಪ್ರಿನ್ಸಿಪಾಲರು, ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ ಎಲ್ಲರೂ ಈ ಬಿಕ್ಕಟ್ಟಿಗೆ ಪರಸ್ಪರರನ್ನು ದೂರುವ, ಮೇಲಿಂದ ಕೆಳಗಿನವರೆಗಿರುವ 'ಭ್ರಷ್ಟಾಚಾರ', ಅದುಮಿಟ್ಟಿದ್ದ ದ್ವೇಷದ ಹುನ್ನಾರಗಳು, ಹುದುಗಿದ್ದ ಪಶ್ಚಾತ್ತಾಪಗಳೂ, ಬಚ್ಚಿಟ್ಟಿದ್ದ ಗುಟ್ಟುಗಳು ಹೊರಬರುತ್ತಾ ಹೋಗುತ್ತವೆ. ಮೆಮೊ ನ ನಿಗೂಢವಾದ ಗಂಭೀರ ಅನಾರೋಗ್ಯಕ್ಕೆ, ಅದು ಬಿಕ್ಕಟ್ಟಿನ ಸ್ವರೂಪ ಪಡೆಯುವುದಕ್ಕೆ ಹೆಚ್ಚು ಕಡಿಮೆ ಎಲ್ಲರ ಪಾತ್ರಗಳೂ ಬಯಲಾಗುವುದರೊಂದಿಗೆ ಇಡೀ ವ್ಯವಸ್ಥೆ ಬೆತ್ತಲಾಗಿರುತ್ತದೆ. ಇದು ಫಿಲಂ ನ ಕಥಾಹಂದರ.

ಕಥನ ಶೈಲಿ ಕುತೂಹಲ ಕೆರಳಿಸುತ್ತಾ ಹೋಗುವ ಹಾಲಿವುಡ್ ಸಸ್ಪೆನ್ಸ್ ಮಾದರಿಯಲ್ಲಿ ಇದ್ದರೂ, ಅದರಲ್ಲಿ ಕಥನದ ಬೆಳವಣಿಗೆಯಲ್ಲದೆ ಹಲವು ಪದರಗಳು ಇವೆ. ಪ್ರಿನ್ಸಿಪಾಲರಿಂದ ಹಿಡಿದು ಮೆಮೊ–ಯೂಸುಫರ ವರೆಗೆ ಇರುವ ಹಲವು ಶ್ರೇಣಿಗಳಲ್ಲಿ ಪ್ರತಿ ಮೇಲಿನ ಶ್ರೇಣಿಯ ವ್ಯಕ್ತಿ ಕೆಳಗಿನ ಶ್ರೇಣಿಯ ವ್ಯಕ್ತಿಯನ್ನು ದಮನಿಸುವ ಶೋಷಿಸುವ ಯಾವ ಅವಕಾಶವನ್ನು ಬಿಟ್ಟು ಕೊಡದ ಸ್ಕೂಲಿನ ಕ್ರೂರ ಅಮಾನವೀಯ ಶ್ರೇಣಿಕೃತ ವ್ಯವಸ್ಥೆಯ ಚಿತ್ರಣವಿದೆ. ಈ ಶ್ರೇಣಿಕೃತ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳೂ ಭಾಗಿಗಳು. 'ಮಾನಿಟರ್' ಆಗಿರುವ ಹಿರಿಯ ವಿದ್ಯಾರ್ಥಿಗಳು, ಇತರ ಹಿರಿಯ ವಿದ್ಯಾರ್ಥಿಗಳು, ಕಿರಿಯ ವಿದ್ಯಾರ್ಥಿಗಳು, ಹಿರಿಯ–ಕಿರಿಯ ವಿದ್ಯಾರ್ಥಿಗಳೊಳಗೆ 'ಜೋರಿನ' ಮತ್ತು 'ಪಾಪದ' ವರು – ಹೀಗೆ ಈ ವ್ಯವಸ್ಥಿತ ದಮನ–ಶೋಷಣೆಯ ಕ್ರೂರ ಚಕ್ರ ಸಾಗುತ್ತದೆ. 'ಶಿಸ್ತು', 'ತಪ್ಪು', 'ಶಿಕ್ಷೆ'ಗಳ ಮಂತ್ರದಂಡವೇ ಈ ವ್ಯವಸ್ಥೆಯನ್ನು ಕಾಪಿಡುತ್ತದೆ. ಮೆಮೊ ಅನಾರೋಗ್ಯ ಬಿಕ್ಕಟ್ಟಿನಲ್ಲಿ ಢಾಳಾಗಿ ಕಾಣುತ್ತದೆಯೆಂದು ಬಿಟ್ಟರೆ ಅದು ದೈನಂದಿನ ವಾಸ್ತವವೆಂಬುದನ್ನು ಫಿಲಂ ಪರಿಣಾಮಕಾರಿಯಾಗಿ ಹಿಡಿದಿಡುತ್ತದೆ.

ಹಿಮಪಾತವಾಗುತ್ತಿರುವ ವಾತಾವರಣದಲ್ಲಿ ವಾರಕ್ಕೊಮ್ಮೆ ಮಾತ್ರ ಕೆಲವೇ ನಿಮಿಷಗಳ ಬಿಸಿನೀರಿನ ಸ್ನಾನ, ಸ್ನಾನದ ಮನೆಯಲ್ಲಿ ಸಣ್ಣ 'ತಪ್ಪು', 'ಅಶಿಸ್ತು' ಜರುಗಿದರೂ ಕೊರೆಯುವ ತಣ್ಣೀರಿನ ಶಿಕ್ಷೆ, ಲಂಚ ಕೊಟ್ಟರೆ ಬಾಯ್ಲರ್ ರೂಮಿನಲ್ಲಿ ಬಿಸಿನೀರಿನ ಲಭ್ಯತೆ, ಶಿಕ್ಷಕರಿಂದ ಹುಡುಗರ ದುರ್ಬಳಕೆಯ ಅಪಾಯ, ಕ್ರೋಸಿನ್ ಮತ್ತು ಕೆಲವು 'ಯಾರಿಗೂ ಏನೆಂದು ಗೊತ್ತಿಲ್ಲದ' ಮಾತ್ರೆಗಳು ಬಿಟ್ಟರೆ ಇನ್ನೇನೂ ಇಲ್ಲದ 'ಕಾಯಿಲೆ ರೂಮ್' – ಇವೆಲ್ಲ ಟರ್ಕಿಯ ವ್ಯವಸ್ಥೆಗೆ ಸಹ ಹಿಡಿದ ಕನ್ನಡಿಗಳು. ಅಲ್ಪಸಂಖ್ಯಾತ ಕುರ್ದಿಶ್ ಹುಡುಗರಿಗೆ ಟರ್ಕಿ ಭಾಷೆಯಲ್ಲಿ ಶಿಕ್ಷಣ, ಕುರ್ದಿಶ್ ವಿದ್ಯಾರ್ಥಿಗಳು ತಮ್ಮ ಪ್ರಾಂತ್ಯವನ್ನು ಕುರ್ದಿಶ್ ಪ್ರಾಂತ್ಯವೆಂದು ಕರೆದರೆ ಶಿಕ್ಷಕಿ ಗದರಿಸಿ ಅದನ್ನು ಅದರ 'ಅಧಿಕೃತ' ಹೆಸರಿನಿಂದ ಕರೆಯಲು ತಾಕೀತು ಮಾಡುವುದು, ಮೆಮೊ ಗೆ ಆದ ಅವಸ್ಥೆಯಿಂದ ಮತ್ತು ಸ್ಕೂಲ್ ನ ಕ್ರೂರ ವ್ಯವಸ್ಥೆಯಿಂದ ಆತಂಕಗೊಂಡ ಯೂಸುಫ್ ಮರಳಿ ಮನೆಗೆ ಹೋಗಲು ತವಕಿಸಿ ತಾಯಿಗೆ ಫೋನ್ ಮಾಡಿದಾಗ ಆಕೆ 'ನಿನ್ನ ಓದು ನಮ್ಮ ಕುಟುಂಬದ ಏಕಮಾತ್ರ ಆಸರೆ' ಎಂದಾಗ ಆತನ ಹತಾಶೆ – ಹೀಗೆ ಟರ್ಕಿಶ್ ಸಮಾಜಕ್ಕೂ ಫಿಲಂ ಕನ್ನಡಿ ಹಿಡಿಯುತ್ತದೆ. ಸ್ಕೂಲಿನ ಕ್ರೂರ

ಪುಟ 15 ಕ್ಕೆ





JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**